ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 46 | ನವೆಂಬರ್ 7 ಶುಕ್ರವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 199 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಅರಮನೆ ಅಂದಕ್ಕೆ ಅಪಚಾರ ಈ ಮಾಹಿತಿ ಕೇಂದ್ರ!

ಸಾರ್ವಜನಿಕರು, ಪಾರಂಪರಿಕ ತಜ್ಞರ ಬೇಸರ

ಮೈಸೂರು, ನ.6(ಎಂಟಿವೈ)– ಮೈಸೂರು ಅರಮನೆ ಮುಂದಿನ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಮುಂಭಾಗ ಚಾಮರಾಜ ವೃತ್ತದಲ್ಲಿ ಮೈಸೂರು ನಗರ ಪೊಲೀಸರು ಸಾರ್ವಜನಿಕರ ಉಪಯೋಗಕ್ಕಾಗಿ ಮಾಹಿತಿ ಕೇಂದ್ರವೊಂದನ್ನು ಸ್ಥಾಪಿಸಿದ್ದು, ಇದು ಅರಮನೆಯ ಪಾರಂಪರಿಕತೆಗೆ ಧಕ್ಕೆಯುಂಟು ಮಾಡುವಂತಿದೆ. ಹಾಗಾಗಿ ಇದನ್ನು ತೆರವುಗೊಳಿಸಿ ಪಾರಂಪರಿಕ ಶೈಲಿಯಲ್ಲಿ ನಿರ್ಮಿಸುವಂತೆ ಸಾರ್ವಜನಿಕರು ಆಗ್ರಹಿಸಿದ್ದಾರೆ.

ಮೈಸೂರು ಅರಮನೆಗೆ ಬರುವ ಪ್ರವಾಸಿಗರ ಸಂಖ್ಯೆ ದಿನೇ ದಿನೆ ಹೆಚ್ಚಾಗುತ್ತಿದೆ. ಹಾಗಾಗಿ ಜನ ಹಾಗೂ ವಾಹನ ಸಂಚಾರವೂ ಹೆಚ್ಚಾಗಿದೆ. ಹೀಗೆ ಮೈಸೂರಿಗೆ ಬರುವ ಪ್ರವಾಸಿಗರ ನಾನಾ ಸಮಸ್ಯೆಗಳಿಗೆ ತುರ್ತಾಗಿ ಸ್ಪಂದಿಸುವ ಸಲುವಾಗಿ ಅರಮನೆ ಬಲರಾಮ ದ್ವಾರದ ಬಳಿ ದೇವರಾಜ ಪೊಲೀಸ್ ಠಾಣಾ ವತಿಯಿಂದ ಮಾಹಿತಿ ಕೇಂದ್ರವೊಂದನ್ನು ಸ್ಥಾಪಿಸಲಾಗಿದೆ.

ಈ ಮಾಹಿತಿ ಕೇಂದ್ರಕ್ಕೆ ಪಾಳಿಯಲ್ಲಿ ಇಬ್ಬರು ಸಿಬ್ಬಂದಿ ನಿಯೋಜಿಸಿ, ಪ್ರತಿದಿನ ಬೆಳಗ್ಗೆ 8ರಿಂದ ರಾತ್ರಿ 11 ಗಂಟೆವರೆಗೂ ಸಾರ್ವಜನಿಕರಿಗೆ ಮಾಹಿತಿ ನೀಡುವುದು, ಅವರಿಂದ ದೂರು ಸ್ವೀಕರಿಸುವ ವ್ಯವಸ್ಥೆಯನ್ನು ಮುಂದಿನ ವಾರದಿಂದ ಜಾರಿಗೊಳಿಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಈ ಮಾಹಿತಿ ಕೇಂದ್ರದಲ್ಲಿ ಧ್ವನಿವರ್ಧಕ ಅಳವಡಿಸಿದ್ದು, ಆ ಮೂಲಕವೂ ಪ್ರವಾಸಿಗರಿಗೆ ಮಾಹಿತಿಯೊಂದಿಗೆ ಜಾಗೃತಿ ಸಂದೇಶ ನೀಡಲಾಗುತ್ತದೆ. ಖಾಸಗಿ ಸಂಸ್ಥೆಯ ಸಹಭಾಗಿತ್ವದಲ್ಲಿ ಈ ಕೇಂದ್ರ ಸ್ಥಾಪಿಸಲಾಗಿದ್ದು,



ಮೈಸೂರು ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಾಲಯದ ಬಳಿ ದೇವರಾಜ ಪೊಲೀಸ್ ಠಾಣಾ ವತಿಯಿಂದ ನಿರ್ಮಿಸಿರುವ ಪೊಲೀಸ್ ಮಾಹಿತಿ ಕೇಂದ್ರ.

> ಪುರಭವನದ ಆವರಣದಲ್ಲಿ ಸಾರ್ವಜನಿಕ ಶೌಚಾಲಯ ಕಟ್ಟಡ ನಿರ್ಮಿಸಲಾಗಿದ್ದು, ಅದೂ ಪಾರಂಪರಿಕತೆಗೆ ಧಕ್ಕೆಯಾಗದಂತಿದೆ. ಅದೇ ಮಾದರಿಯಲ್ಲಿ ಅರಮನೆ ಮುಂಭಾಗ ಪೊಲೀಸ್ ಮಾಹಿತಿ ಕೇಂದ್ರವನ್ನು ಅರಮನೆ ವಿನ್ಯಾಸಕ್ಕೆ ಅನುಗುಣವಾಗಿ, ಅದೇ ಬಣ್ಣದಲ್ಲಿ ನಿರ್ಮಿಸಬೇಕಿದೆ.
> – ಪ್ರೊ. ಎನ್.ಎಸ್.ರಂಗರಾಜು, ಪಾರಂಪರಿಕ ತಜ್ಞರು

ಅದರ ಮೇಲೆ ನೆರವು ನೀಡಿದ ಸಂಸ್ಥೆಯ ಜಾಹೀರಾತು ದೊಡ್ಡದಾಗಿ ಮುದ್ರಿಸಲಾಗಿದೆ. ಇದಕ್ಕೆ ಬಳಸಿರುವ ಬಣ್ಣ ಹಾಗೂ ವಿನ್ಯಾಸ ಸಾರ್ವಜನಿಕರ ಕೆಂಗಣ್ಣಿಗೆ ಗುರಿಯಾಗಿದೆ.

ಪಾರಂಪರಿಕ ವಿನ್ಯಾಸದಲ್ಲಿ ರೂಪಿಸಿ: ಪಾರಂಪರಿಕ ತಜ್ಞ, ಜಿಲ್ಲಾ ಪಾರಂಪರಿಕ ಸಮಿತಿ ತಜ್ಞ ಪ್ರೊ.ಎನ್.ಎಸ್. ರಂಗರಾಜು ಮಾತನಾಡಿ, ಮೈಸೂರು ಅರಮನೆ ಮುಂಭಾಗ ಪೊಲೀಸ್ ಮಾಹಿತಿ ಕೇಂದ್ರ ಸ್ಥಾಪನೆ ಮಾಡಿ, ಅದಕ್ಕೆ ಕೆಂಪು, ನೀಲಿ ಬಣ್ಣ ಬಳಿದು ಜಾಹೀರಾತು ಪ್ರಕಟಿಸಲಾಗಿದೆ. ಇದು ಪಾರಂಪರಿಕ ಕಟ್ಟಡಕ್ಕೆ ಧಕ್ಕೆ ತರಲಿದೆ. ಮೈಸೂರಿನ ಪಾರಂಪರಿಕ ಕಟ್ಟಡಗಳಲ್ಲಿ ಮೈಸೂರು ಅರಮನೆ ಮುಂಚೂಣಿಯಲ್ಲಿದ್ದು, ಅದರ ಸಮೀಪವೇ ಈ ಪೊಲೀಸ್ ಚೌಕಿ ನಿರ್ಮಿಸಲಾಗಿದೆ. ಪಾರಂಪರಿಕ ಕಟ್ಟಡಗಳಿಂದ 100 ಮೀಟರ್ ಅಂತರದಲ್ಲಿ ಯಾವುದೇ ನಿರ್ಮಾಣ ಮಾಡುವಂತಿಲ್ಲ ಪೊಲೀಸ್ ಮಾಹಿತಿ ಕೇಂದ್ರದ ಅಗತ್ಯವಿದ್ದು, ಆದರೆ ತಾತ್ಕಾಲಿಕವಾಗಿ ಟೆಂಟ್ ಮಾದರಿ ನಿರ್ಮಿಸಬಹುದಾಗಿತ್ತು. ಅರಮನೆ ಮುಂದೆ ಸಿಮೆಂಟ್, ಇಟ್ಟಿಗೆ ಬಳಸಿ ಕಟ್ಟಡ ಮಾದರಿ ಮಾಹಿತಿ ಕೇಂದ್ರ ಸ್ಥಾಪಿಸಿರುವುದು ಸರಿಯಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

■ 6ನೇ ಪುಟಕ್ಕೆ

ಸಿದ್ದರಾಮಯ್ಯ ಸಿಎಂ ಅವಧಿ ಬಗ್ಗೆ ವರಿಷ್ಠರು ನಿರ್ಧರಿಸ್ತಾರೆ!

ಡಿಸಿಎಂ ಡಿಕೆಶಿ ಅಚ್ಚರಿ ಹೇಳಿಕೆ



ಬೆಂಗಳೂರು, ನ.6(ಕೆಎಂಶಿ)– ಸಿದ್ದರಾಮಯ್ಯ ಎಲ್ಲಿಯವರೆಗೆ ಮುಖ್ಯಮಂತ್ರಿಯಾಗಿ ಅಧಿಕಾರದಲ್ಲಿ ಇರಬೇಕು ಎಂಬ ಕುರಿತು ಪಕ್ಷದ ವರಿಷ್ಠರು ತೀರ್ಮಾನ ತೆಗೆದುಕೊಳ್ಳುತ್ತಾರೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ಅದು 5, 10 ಇಲ್ಲವೇ 15 ವರ್ಷಗಳೂ ಆಗಬಹುದು. ವರಿಷ್ಠರು ಕೈಗೊಳ್ಳುವ ತೀರ್ಮಾನದಂತೆ ನಾವು ನಡೆದುಕೊಳ್ಳುತ್ತೇವೆ ಎಂದಿದ್ದಾರೆ.

ಪಕ್ಷದ ವರಿಷ್ಠರನ್ನು ದೆಹಲಿಯಲ್ಲಿಂದು ಭೇಟಿ ಮಾಡುವುದಕ್ಕೂ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಕ್ಷ ಸಂಘಟನೆಗೆ ಸಂಬಂಧಿಸಿದಂತೆ ಚರ್ಚಿಸಲು ಬಂದಿದ್ದೇನೆ.

ಭೇಟಿ ವೇಳೆ ಅಧಿಕಾರ ಹಸ್ತಾಂತರ ವಿಚಾರವಾಗಲಿ, ಸಂಪುಟ ಪುನರ್ ರಚನೆ ಕುರಿತಾಗಲೀ ನಾನು ಚರ್ಚೆ ಮಾಡುವುದಿಲ್ಲ ಎಂದು ಸ್ಪಷ್ಟಪಡಿಸಿದರು. ನವೆಂಬರ್ ಕ್ರಾಂತಿನೂ ಇಲ್ಲ, ಡಿಸೆಂಬರ್ ಕ್ರಾಂತಿನೂ ಇಲ್ಲ. ಜನವರಿ, ಫೆಬ್ರವರಿಗೂ ಆಗುವುದಿಲ್ಲ. ಕ್ರಾಂತಿ ಆಗುವುದು ಏನಿದ್ದರೂ 2028ರಲ್ಲಿ, ಅದು ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬರುವ ಮೂಲಕ.

ನವೆಂಬರ್ ಕ್ರಾಂತಿ ಹಾಗೂ ಈ ತಿಂಗಳು 21 ಹಾಗೂ 26ರ ದಿನಾಂಕದ ಬಗ್ಗೆ ಯಾರೋ ಸುಮ್ಮನೆ ಬರೆದಿದ್ದಾರೆ. ಪಕ್ಷ ನಮಗೆ ಬಿಹಾರ ಚುನಾವಣೆ ಸೇರಿದಂತೆ ಅನೇಕ ಜವಾಬ್ದಾರಿ ನೀಡಿದೆ. ನಾವು ಅದನ್ನು ಮಾಡುತ್ತಿದ್ದೇವೆ.

■ 6ನೇ ಪುಟಕ್ಕೆ

ಮಾಜಿ ಸಚಿವ ಕೆ.ಎಸ್.ರಾಜಣ್ಣ ಕರೆದಿರುವ ಔತಣ ಕೂಟದಲ್ಲಿ ಸಿಎಂ ಸೇರಿ ನಾವೆಲ್ಲ ಪಾಲ್ಗೊಳ್ಳುತ್ತೇವೆ

● ಇದರಲ್ಲಿ ಯಾವ ರಾಜಕೀಯ ಚರ್ಚೆ ಇಲ್ಲ ● ಡಿಕೆಶಿ ದೆಹಲಿ ಭೇಟಿ ಹಿಂದೆ ರಾಜಕೀಯ ಉದ್ದೇಶ ಇಲ್ಲ

ಬೆಂಗಳೂರು, ನ.6(ಕೆಎಂಶಿ)– ಪಕ್ಷದ ಹಿರಿಯ ನಾಯಕ ಹಾಗೂ ಮಾಜಿ ಸಚಿವ ಕೆ.ಎನ್. ರಾಜಣ್ಣ ಕರೆದಿರುವ ಔತಣಕೂಟದಲ್ಲಿ ನಾನು ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಸಚಿವರು, ಶಾಸಕರು ಭಾಗಿಯಾಗುತ್ತೇವೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಇಂದಿಲ್ಲಿ ಸ್ಪಷ್ಟಪಡಿಸಿದ್ದಾರೆ.

ರಾಜಣ್ಣ ಕರೆದಿರುವ ಔತಣಕೂಟದಲ್ಲಿ ಯಾವುದೇ ರಾಜಕೀಯ ಚರ್ಚೆ ಇಲ್ಲ ಎಂಬುದಾಗಿ ನಗು ನಗುತ್ತಲೇ ಹೇಳಿದ ಡಾ.ಪರಮೇಶ್ವರ್, ಹಿಂದೆಯೂ ಅವರು ಊಟಕ್ಕೆ ಕರೆದಾಗ ಹೋಗಿದ್ದೇವೆ, ಈಗಲೂ ಹೋಗುತ್ತೇವೆ ಎಂದರು.



ಡಾ.ಜಿ.ಪರಮೇಶ್ವರ್

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ನನ್ನನ್ನು ದೂರವಾಣಿ ಮೂಲಕ ಸಂಪರ್ಕಿಸಿ, ರಾಜಣ್ಣ ಊಟಕ್ಕೆ ಕರೆದಿದ್ದಾರೆ ಹೋಗೋಣವೇ ಎಂದರು. ಆಗಲಿ ಹೋಗೋಣ ಎಂದೆ. ಮುಖ್ಯಮಂತ್ರಿ ನಮ್ಮ ಜಿಲ್ಲೆಗೆ ಬರುತ್ತಿರುವುದರಿಂದ ರಾಜಣ್ಣ ತುಮಕೂರಿನ

■ 6ನೇ ಪುಟಕ್ಕೆ

ಬಿಹಾರದ ಮೊದಲ ಹಂತದ ಚುನಾವಣೆಯಲ್ಲಿ ಶೇ.64 ಮತದಾನ



ಪಾಟ್ನಾ, ನ.6–ಬಿಹಾರದ ಮೊದಲ ಹಂತದ ಚುನಾವಣೆಯು ಶೇ.64ರಷ್ಟು ಮತದಾನದೊಂದಿಗೆ ಅಂತ್ಯಗೊಂಡಿದೆ. ಈ ಹಂತವು ಎನ್‌ಡಿಎ ಮತ್ತು ಇಂಡಿಯಾ ಕೂಟಕ್ಕೆ ನಿರ್ಣಾಯಕವಾಗಿದ್ದು, ತೇಜಸ್ವಿ ಯಾದವ್, ವಿಜಯ್ ಕುಮಾರ್ ಸಿನ್ಹಾ ಸೇರಿದಂತೆ ಹಲವು ಪ್ರಮುಖ ನಾಯಕರ ಭವಿಷ್ಯವನ್ನು ನಿರ್ಧರಿಸಲಿದೆ.

ಇಂದು ಬಿಹಾರದ 18 ಜಿಲ್ಲೆಗಳಲ್ಲಿ ಒಟ್ಟು 121 ಕ್ಷೇತ್ರಗಳಿಗೆ ಮತದಾನ ನಡೆದಿತ್ತು. ಬಿಹಾರದ ಲಖಿಸರೈನಲ್ಲಿ ಡಿಸಿಎಂ ವಿಜಯ್‌ಕುಮಾರ್ ಸಿನ್ಹಾ ಅವರ ಬೆಂಗಾವಲು ವಾಹನದ ಮೇಲೆ ದಾಳಿ ನಡೆದಿದ್ದರಿಂದ ಆ ಪ್ರದೇಶದಲ್ಲಿ ಸ್ವಲ್ಪ ಬಿಗುವಿನ ವಾತಾವರಣ ನಿರ್ಮಾಣವಾಗಿದ್ದು ಬಿಟ್ಟರೆ ಎಲ್ಲೆಡೆ ಮತದಾನ ಶಾಂತವಾಗಿ ನಡೆದಿದೆ. ಈ ಚುನಾವಣೆ ಆಡಳಿತರೂಢ ಎನ್‌ಡಿಎ ಹಾಗೂ ವಿರೋಧ ಪಕ್ಷ ಇಂಡಿಯಾ ಕೂಟದ ಆರ್‌ಜೆಡಿ ಸೇರಿದಂತೆ ಹಲವು ಪಕ್ಷಗಳಿಗೆ ಭಾರಿ ಮಹತ್ವದ ಚುನಾವಣೆಯಾಗಿದ್ದು, ಆರ್‌ಜೆಡಿಯ ತೇಜಸ್ವಿ ಯಾದವ್, ಉಪಮುಖ್ಯಮಂತ್ರಿಗಳಾದ

■ 6ನೇ ಪುಟಕ್ಕೆ

ಆರ್‌ಎಸ್‌ಎಸ್ ಪಥ ಸಂಚಲನ ವಿಚಾರ

ರಾಜ್ಯ ಸರ್ಕಾರದ ಮೇಲ್ಮನವಿ ವಜಾ; ತಡೆಯಾಜ್ಞೆ ತೆರವುಗೊಳಿಸಲು ಹೈಕೋರ್ಟ್ ನಕಾರ

ಬೆಂಗಳೂರು, ನ.6– ರಸ್ತೆಗಳು, ಉದ್ಯಾನವನಗಳು ಮತ್ತು ಆಟದ ಮೈದಾನಗಳಂತಹ ಸಾರ್ವಜನಿಕ ಸ್ಥಳಗಳಲ್ಲಿ 10ಕ್ಕೂ ಹೆಚ್ಚು ಜನರು ಅನಧಿಕೃತವಾಗಿ ಗುಂಪು ಸೇರುವುದನ್ನು ನಿರ್ಬಂಧಿಸುವ ರಾಜ್ಯ ಸರ್ಕಾರದ ಆದೇಶದ ಮೇಲಿನ ತಡೆಯಾಜ್ಞೆಯನ್ನು ತೆರವುಗೊಳಿಸಲು ಕರ್ನಾಟಕ ಹೈಕೋರ್ಟ್‌ನ ವಿಭಾಗೀಯ ಪೀಠ ಗುರುವಾರ ನಿರಾಕರಿಸಿದೆ.

ನ್ಯಾಯಮೂರ್ತಿಗಳಾದ ಎಸ್‌ಜಿ ಪಂಡಿತ್ ಮತ್ತು ಗೀತಾ ಕೆ.ಬಿ. ನೇತೃತ್ವದ ವಿಭಾಗೀಯ ಪೀಠವು ಇತ್ತೀಚೆಗೆ ನ್ಯಾ. ನಾಗಪ್ರಸನ್ನ ನೇತೃತ್ವದ ಏಕ ಪೀಠ ನೀಡಿದ ತಡೆಯಾಜ್ಞೆಯಲ್ಲಿ ಹಸ್ತಕ್ಷೇಪ ಮಾಡಲು ನಿರಾಕರಿಸಿ, ತಡೆಯಾಜ್ಞೆ ತೆರವಿಗೆ ಏಕ ಪೀಠವನ್ನೇ ಸಂಪರ್ಕಿಸುವಂತೆ ಹೇಳಿದೆ.

ಮಧ್ಯಂತರ ಆದೇಶವನ್ನು ತೆರವುಗೊಳಿಸಲು ಮೇಲ್ಮನವಿ ಸಲ್ಲಿಸುವವರು ಅರ್ಜಿ ಸಲ್ಲಿಸಬಹುದು ಎಲ್ಲಾ ವಾದಗಳನ್ನು ಮುಕ್ತವಾಗಿ ಬಿಡಲಾಗಿದೆ ಎಂದು ವಿಭಾಗೀಯ ಪೀಠವು ರಾಜ್ಯ ಸರ್ಕಾರದ ಮೇಲ್ಮನವಿಯನ್ನು ವಜಾಗೊಳಿಸಿದೆ. ರಾಜ್ಯವನ್ನು ಪ್ರತಿನಿಧಿಸುವ ಅಡ್ವೊಕೇಟ್ ಜನರಲ್ ಶಶಿ ಕಿರಣ್ ಶೆಟ್ಟಿ, ಏಕ ಪೀಠದ ಆದೇಶದ ಕಾರ್ಯಾಚರಣೆಯನ್ನು ಕೇವಲ ಸರ್ಕಾರದ ಆದೇಶ ಪ್ರಶ್ನಿಸಿದ

■ 6ನೇ ಪುಟಕ್ಕೆ

ಮೈಸೂರು ಪಿಕೆಟಿಬಿ ಆವರಣದಲ್ಲಿ ಕ್ಯಾನ್ಸರ್ ಚಿಕಿತ್ಸಾ ಕೇಂದ್ರ ಸ್ಥಾಪನೆ

ಬೆಂಗಳೂರು: ಮೈಸೂರು ಪಿಕೆಟಿಬಿ ಆಸ್ಪತ್ರೆ ಆವರಣದಲ್ಲಿ ಪೆರಿಫೆರಲ್ ಕ್ಯಾನ್ಸರ್ ಕೇಂದ್ರ ನಿರ್ಮಿಸಲು ರಾಜ್ಯ ಸಚಿವ ಸಂಪುಟ ಇಂದಿಲ್ಲಿ ಅನುಮೋದನೆ ನೀಡಿದೆ

ಆಸ್ಪತ್ರೆಗೆ ಅವಶ್ಯವಿರುವ ಉಪಕರಣಗಳನ್ನು 94.55 ಕೋಟಿ ರೂ. ಅಂದಾಜು ಮೊತ್ತದಲ್ಲಿ ಖರೀದಿಸಲು ಸಮ್ಮತಿಸಿದೆ.

ಜಯದೇವ ಹೃದ್ರೋಗ ಆಸ್ಪತ್ರೆಗೆ ಹೊಂದಿಕೊಂಡಂತೆ ಕ್ಯಾನ್ಸರ್ ಚಿಕಿತ್ಸಾ ಘಟಕ ಸ್ಥಾಪನೆ ಆಗಲಿದ್ದು, ಎಲ್ಲಾ ಮೂಲ ಸೌಕರ್ಯ ಕಲ್ಪಿಸಲು ಸಂಪುಟ ಒಪ್ಪಿಗೆ ನೀಡಿದೆ. ರಾಜ್ಯದ ಮಹಾನಗರ ಪಾಲಿಕೆಗಳಲ್ಲಿ ಮಹಾತ್ಮ

■ 6ನೇ ಪುಟಕ್ಕೆ

ಕಬ್ಬು ಬೆಳೆಗಾರರ ಹೋರಾಟ

ಇಂದು ಸಕ್ಕರೆ ಕಾರ್ಖಾನೆ ಮಾಲೀಕರು, ಕಬ್ಬು ಬೆಳೆಗಾರರೊಂದಿಗೆ ಸಿಎಂ ಸಭೆ

ತೂಕ, ಇಳುವರಿ, ಕಟಾವು, ಬಿಲ್ ಪಾವತಿ ಸಂಬಂಧ ಸಮಿತಿ

ಬೆಂಗಳೂರು, ನ.6(ಕೆಎಂಶಿ)– ಸಕ್ಕರೆ ಕಾರ್ಖಾನೆ ಮಾಲೀಕರು ಮತ್ತು ಕಬ್ಬು ಬೆಳಗಾರರೊಂದಿಗೆ ನಾಳೆ ಮಾತುಕತೆ ನಡೆಸಿ, ರಿಕವರಿ ಆಧರಿಸಿ ಎಫ್‌ಆರ್‌ಪಿ ನಿಗದಿ ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ.

ಕಬ್ಬಿಗೆ ಎಫ್‌ಆರ್‌ಪಿ ನಿಗದಿ ಮಾಡುವುದು ಕೇಂದ್ರ ಸರ್ಕಾರವೇ ಹೊರತು ರಾಜ್ಯ ಸರ್ಕಾರ ಅಲ್ಲ ಎಂದರು. ಸಂಪುಟ ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತೂಕ, ಇಳುವರಿ, ಕಟಾವು ಮತ್ತು ಬಿಲ್ ಪಾವತಿಗೆ ಸಮಿತಿ ರಚಿಸಲಾಗಿದೆ ಎಂದರು.



ಪ್ರಸಕ್ತ ಸಾಲಿನಲ್ಲಿ ಕಬ್ಬಿನ ಕಟಾವು ಪೂರ್ಣ ಪ್ರಮಾಣದಲ್ಲಿ ಆರಂಭವಾಗಿಲ್ಲ. ಆದ್ದರಿಂದ ದರ ನಿಗದಿ ಮಾಡಲು ಇದು ಸಮಯ ಅಲ್ಲ. ನಾಳೆ ಬೆಳಗ್ಗೆ 11 ಗಂಟೆಗೆ ರಾಜ್ಯದ ಎಲ್ಲ ಸಕ್ಕರೆ ಕಾರ್ಖಾನೆ ಮಾಲೀಕರೊಂದಿಗೆ ಬೆಂಗಳೂರಿನಲ್ಲಿ ಸಭೆ ನಡೆಸಲಾಗುತ್ತದೆ.

ರೈತರ ಪ್ರತಿಭಟನೆ ಮತ್ತು ಎಫ್‌ಆರ್‌ಪಿ ಹೆಚ್ಚಳ ಬಗ್ಗೆಯೂ ಚರ್ಚಿಸಲಾಗುವುದು. ನಂತರ ಮಧ್ಯಾಹ್ನ ಒಂದು ಗಂಟೆಗೆ ಪ್ರತಿಭಟನೆ ನಡೆಯುತ್ತಿರುವ ಜಿಲ್ಲೆಗಳ ರೈತ ಮುಖಂಡರ ಸಭೆ ಕರೆಯಲಾಗಿದೆ. ಪ್ರಧಾನ ಮಂತ್ರಿ ಅವರ

■ 6ನೇ ಪುಟಕ್ಕೆ

ಮೈಸೂರು ಜಿಲ್ಲೆಯಲ್ಲಿ 91 ಮಕ್ಕಳಿಗೆ ಅಪೌಷ್ಠಿಕತೆ; ಆಸ್ಪತ್ರೆಯಲ್ಲಿ ಮೀಸಲಾದ ವಾರ್ಡ್ ಖಾಲಿ... ಖಾಲಿ...!

ರಾಜ್ಯ ಮಕ್ಕಳ ಹಕ್ಕುಗಳ ಆಯೋಗದ ಅಧ್ಯಕ್ಷ ಶಶಿಧರ್ ಕೂಸುಂಬೆ ಬೇಸರ

ಮೈಸೂರು, ನ.6(ಎಂಟಿವೈ)– ಮೈಸೂರಿನ ಚೆಲುವಾಂಬ ಆಸ್ಪತ್ರೆಗೆ ರಾಜ್ಯ ಮಕ್ಕಳ ಹಕ್ಕುಗಳ ಆಯೋಗದ ಅಧ್ಯಕ್ಷ ಶಶಿಧರ್ ಕೂಸುಂಬೆ ಗುರುವಾರ ಭೇಟಿ ನೀಡಿ, ಮಕ್ಕಳಿಗೆ ಪೌಷ್ಟಿಕ ಆಹಾರದ ಕೊರತೆ ಕಂಡು ಆಸ್ಪತ್ರೆ ಅಧಿಕಾರಿಗಳ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ಚೆಲುವಾಂಬ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವವರ ಆರೋಗ್ಯ ವಿಚಾರಿಸಿ, ಇಲ್ಲಿ ಮಕ್ಕಳಿಗೆ ಸಿಗುತ್ತಿರುವ ಆರೋಗ್ಯ ಸೇವೆ ಪರಿಶೀಲಿಸಿದರು. ಮಕ್ಕಳ ವಾರ್ಡ್, ನವಜಾತ ಶಿಶುಗಳ ನಿಗಾ ಘಟಕ, ಅಡುಗೆ ಮನೆ ಸೇರಿದಂತೆ ಆಸ್ಪತ್ರೆಯ ವಿವಿಧೆಡೆ ಸಂಚರಿಸಿ, ಪರಿಸ್ಥಿತಿ ಅವಲೋಕಿಸಿ, ಆಸ್ಪತ್ರೆಯಲ್ಲಿ ದಾಖಲಾಗಿರುವ ಮಕ್ಕಳ ಪೋಷಕರಿಂದ ಮಾಹಿತಿ ಪಡೆದರು.

ಖಾಲಿ ಡಬ್ಬಗಳ ಪ್ರದರ್ಶನ: ಆಸ್ಪತ್ರೆಯಲ್ಲಿ ದಾಖಲಾಗಿರುವ ಮಕ್ಕಳಿಗೆ ನಿಯಮಾನುಸಾರ ಪೌಷ್ಟಿಕ ಆಹಾರ ನೀಡಬೇಕಾಗಿದ್ದು, ಚೆಲುವಾಂಬ ಆಸ್ಪತ್ರೆಯ ಅಡುಗೆ ಮನೆಯಲ್ಲಿ ಪೌಷ್ಟಿಕ ಆಹಾರ ತಯಾರಿಕೆಗೆ ಬೇಕಾದ ವಸ್ತುಗಳು ಖಾಲಿಯಾಗಿದ್ದವು. ನಿಯಮಾನುಸಾರ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳಿಗೆ ವಿವಿಧ ಕಾಳು, ಬೇಳೆ ಸೇರಿದಂತೆ 32 ಬಗೆಯ ಆಹಾರ ಪದಾರ್ಥವನ್ನು ನೀಡಬೇಕಾಗಿದ್ದು,



ಮೈಸೂರಿನ ಚೆಲುವಾಂಬ ಆಸ್ಪತ್ರೆಗೆ ರಾಜ್ಯ ಮಕ್ಕಳ ಹಕ್ಕುಗಳ ಆಯೋಗದ ಅಧ್ಯಕ್ಷ ಶಶಿಧರ್ ಕೂಸುಂಬೆ ಭೇಟಿ ನೀಡಿ ಪರಿಶೀಲಿಸಿದರು.

ಅವುಗಳಲ್ಲಿ ಬಹುತೇಕ ವಸ್ತುಗಳು ಖಾಲಿಯಾಗಿದ್ದವು. ಅಡುಗೆ ಮನೆಯಲ್ಲಿ ಜೋಡಣೆ ಮಾಡಿದ್ದ ಡಬ್ಬಗಳಲ್ಲಿ ಎಲ್ಲವೂ ಖಾಲಿಯಾಗಿದ್ದನ್ನು ಗಮನಿಸಿದ ಅಧ್ಯಕ್ಷರು ಮಕ್ಕಳ ವೈದ್ಯರ ವಿರುದ್ಧ ಕಿಡಿ ಕಾರಿದರು. ಇದಕ್ಕೆ ಪ್ರತಿಕ್ರಿಯಿಸಿದ ವೈದ್ಯರು ಅಗತ್ಯ ವಸ್ತುಗಳಿಗಾಗಿ ಇಂಡೆಂಟ್ ಹಾಕಲಾಗಿದೆ ಎಂದರು.

ಇದಕ್ಕೆ ಮತ್ತಷ್ಟು ಆಕ್ರೋಶಗೊಂಡ ರಾಜ್ಯ ಮಕ್ಕಳ ಹಕ್ಕುಗಳ ಆಯೋಗದ ಅಧ್ಯಕ್ಷ ಶಶಿಧರ್ ಕೂಸುಂಬೆ, ಪೌಷ್ಟಿಕ ಆಹಾರ ತಯಾರಿಕೆಗೆ ಬೇಕಾದ ವಸ್ತುಗಳು ಖಾಲಿಯಾಗುವ ಮುನ್ನವೇ ಇಂಡೆಂಟ್ ಹಾಕಿ ತರಿಸಿಕೊಳ್ಳಬೇಕು. ಆಸ್ಪತ್ರೆಗೆ ಬರುವ ಮಕ್ಕಳ ಆರೋಗ್ಯ ಕಾಪಾಡುವ ಜವಾಬ್ದಾರಿ ನಿಮ್ಮದಾಗಿದೆ. ಆದರೂ ಪೌಷ್ಟಿಕ ಆಹಾರ ನೀಡಲು ಬೇಕಾದ ವಸ್ತುಗಳನ್ನು ದಾಸ್ತಾನು ಇಟ್ಟುಕೊಳ್ಳದೇ ಇರುವುದು ಖಂಡನೀಯ ಎಂದು ಕಿಡಿಕಾರಿದರು.

ಬಳಿಕ ನವಜಾತ ಶಿಶುಗಳ ಆರೈಕೆ ಮಾಡುವ ವಾರ್ಡ್‌ಗೆ ಭೇಟಿ ನೀಡಿದ ಅವರು, ಒಂದೇ ವಾರ್ಮರ್ ಕೆಳಗೆ ಎರಡು ಮಕ್ಕಳನ್ನು ಮಲಗಿಸಿರುವುದನ್ನು ಗಮನಿಸಿ, ಇನ್ನು ಮುಂದೆ ಇದು ಮುಂದುವರೆಸುವುದು ಬೇಡ.

■ 6ನೇ ಪುಟಕ್ಕೆ

ಚೆಲುವಾಂಬದಲ್ಲಿ ಶೀಘ್ರ ಐವಿಎಫ್ ಕೇಂದ್ರ ಆರಂಭ

ಮೈಸೂರು, ನ.6(ಆರ್‌ಕೆ, ಎಂಕೆ)– ಸ್ತ್ರೀ ರೋಗ ಮತ್ತು ಮಕ್ಕಳ ಚಿಕಿತ್ಸೆಗೆ ಖ್ಯಾತಿಯಾಗಿರುವ ಮೈಸೂರಿನ ಚೆಲುವಾಂಬ ಆಸ್ಪತ್ರೆಯಲ್ಲಿ ಶೀಘ್ರ 'ಐವಿಎಫ್(ಇನ್ ವಿಟ್ರೊ ಫರ್ಟಿಲೈಸೇಶನ್–ಕೃತಕ ಗರ್ಭಧಾರಣೆ ಕೇಂದ್ರ) ಮತ್ತು ಫರ್ಟಿಲಿಟಿ ಕೇಂದ್ರ' ಕಾರ್ಯಾರಂಭ ಮಾಡಲಿದೆ.



ಸಮಾಜದಲ್ಲಿ ಇತ್ತೀಚೆಗೆ ಬಂಜೆತನ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಐವಿಎಫ್ ಮತ್ತು ಫರ್ಟಿಲಿಟಿ ಚಿಕಿತ್ಸೆಗೆ ಬೇಡಿಕೆ ಇರುವುದರಿಂದ ಈ ಸಮಸ್ಯೆ ಪರಿಹರಿಸಲು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (ಎಂಎಂಸಿಆರ್‌ಐ) ಸೇರಿದಂತೆ ರಾಜ್ಯದ ನಾಲ್ಕು ವೈದ್ಯಕೀಯ ಕಾಲೇಜುಗಳ ಆಸ್ಪತ್ರೆಗಳಲ್ಲಿ ಐವಿಎಫ್ ಮತ್ತು ಫರ್ಟಿಲಿಟಿ ಚಿಕಿತ್ಸಾ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ ಸರ್ಕಾರ ಈ ಹಿಂದೆ ತೀರ್ಮಾನಿಸಿತ್ತು. ಕಳೆದ ರಾಜ್ಯ ಬಜೆಟ್‌ನಲ್ಲೂ ಈ ಯೋಜನೆಗೆ ಅನುಮೋದನೆ ನೀಡಿ ಅನುದಾನ ಮೀಸಲಿರಿಸಲಾಗಿತ್ತು.

ಉದ್ದೇಶಿತ ಈ ಪ್ರಸ್ತಾವನೆಗೆ ಇದೀಗ ವೈದ್ಯಕೀಯ ಶಿಕ್ಷಣ ಇಲಾಖೆಯು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಗೆ 2.5 ಕೋಟಿ ರೂ. ಅನುದಾನ ಬಿಡುಗಡೆ ಮಾಡಿರುವುದರಿಂದ ಸಂಸ್ಥೆ ಅಧೀನದಲ್ಲಿ ಬರುವ ಚೆಲುವಾಂಬ ಆಸ್ಪತ್ರೆಯ ಮಕ್ಕಳ ಚಿಕಿತ್ಸಾ ವಿಭಾಗದ ಕಟ್ಟಡದಲ್ಲಿ ಸೇವೆ ಆರಂಭಿಸಲು ಪೂರ್ವ ತಯಾರಿ ನಡೆಸಲಾಗುತ್ತಿದೆ ಎಂದು ಚೆಲುವಾಂಬ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕಿ ಡಾ.ಸುಧಾ 'ಮೈಸೂರು ಮಿತ್ರ' ನಿಗೆ ತಿಳಿಸಿದ್ದಾರೆ.

> ಚೆಲುವಾಂಬ ಆಸ್ಪತ್ರೆಯಲ್ಲಿ ಕೃತಕ ಗರ್ಭಧಾರಣಾ ಕೇಂದ್ರ ಸ್ಥಾಪನೆಯಿಂದ ಮಕ್ಕಳಿಲ್ಲದ ಬಡ ದಂಪತಿಗಳಿಗೆ ಉಪಯೋಗವಾಗಲಿದೆ ಇದುವರೆಗೂ ಪ್ರಾಥಮಿಕ ಚಿಕಿತ್ಸೆ ಮಾತ್ರ ನೀಡಲಾಗುತ್ತಿತ್ತು. ಮುಂದಿನ ದಿನಗಳಲ್ಲಿ ಆಧುನಿಕ ವಿಧಾನದಲ್ಲಿ ಕೃತಕ ಗರ್ಭಧಾರಣೆ ಚಿಕಿತ್ಸೆಯು ದೊರೆಯಲಿದೆ.
> – ಡಾ.ಸುಧಾ, ವೈದ್ಯಕೀಯ ಅಧೀಕ್ಷಕರು, ಚೆಲುವಾಂಬ ಆಸ್ಪತ್ರೆ



2.5 ಕೋಟಿ ರೂ. ಅನುದಾನದಲ್ಲಿ ಮಾನವ ಸಂಪನ್ಮೂಲಕ್ಕಾಗಿ 1 ಕೋಟಿ ರೂ., ಉಪಕರಣಗಳ ಖರೀದಿಗಾಗಿ 60 ಲಕ್ಷ ರೂ. ಹಾಗೂ ಕೇಂದ್ರದ ಸಿವಿಲ್ ಕಾಮಗಾರಿ ನಿರ್ವಹಿಸಲು 90 ಲಕ್ಷ ರೂ. ಗಳನ್ನು ಬಿಡುಗಡೆ ಮಾಡಲಾಗಿದೆ. ಮಕ್ಕಳ ಚಿಕಿತ್ಸಾ ವಿಭಾಗದ 2ನೇ ಮಹಡಿಯಲ್ಲಿ ವಾರ್ಡ್‌ವೊಂದರಲ್ಲಿ ಸಿವಿಲ್ ಕಾಮಗಾರಿ ಕೈಗೊಳ್ಳಲಾಗಿದ್ದು, ಶೇ.70 ರಷ್ಟು ಕಾಮಗಾರಿ ಮುಕ್ತಾಯಗೊಂಡಿದೆ ಎಂದರು.

ಸಿವಿಲ್ ಕಾಮಗಾರಿ ಪೂರ್ಣಗೊಳ್ಳುವುದರೊಳಗಾಗಿ ಅಗತ್ಯವಿರುವ ವೈದ್ಯಕೀಯ ಉಪಕರಣಗಳನ್ನು ಅಳವಡಿಸಿ ಸಿಬ್ಬಂದಿ ಮತ್ತು ವೈದ್ಯರನ್ನು ನಿಯೋಜಿಸಲು

■ 6ನೇ ಪುಟಕ್ಕೆ

ಎನ್.ಆರ್.ಮೊಹಲ್ಲಾ ಕಾವೇರಿ ಕೊಡವ ಒಕ್ಕೂಟದ ನೂತನ ಪದಾಧಿಕಾರಿಗಳು



ವಿಲ್ಲಿ ಚಿಟ್ಟಿಯಪ್ಪ | ಪ್ರವೀಣ್ ಪೂವಣ್ಣ | ಸುನೀಲ್ ಸೋಮಣ್ಣ | ರೇವತಿ ಕುಶಾಲಪ್ಪ



ಸನ್ನು | ಕುಶಾಲಪ್ಪ | ಹೇಮಾವತಿ | ಪ್ರಭು | ಸ್ಮಿತಾ | ಸರಸು

ಮೈಸೂರು,ನ.6–ಇತ್ತೀಚೆಗೆ ಮೈಸೂರಿನ ವಿಜಯನಗರದ ಕೊಡವ ಸಮಾಜದಲ್ಲಿ ಎನ್.ಆರ್.ಮೊಹಲ್ಲಾದ ಕಾವೇರಿ ಕೊಡವ ಒಕ್ಕೂಟದ ವಾರ್ಷಿಕ ಸರ್ವ ಸದಸ್ಯರ ಸಭೆ ನಡೆಯಿತು.

ಮುಖ್ಯ ಅತಿಥಿಗಳಾಗಿ ಮೈಸೂರು ಕೊಡವ ಸಮಾಜದ ಅಧ್ಯಕ್ಷ ಮಂಡೇಪಂಡ ಗಣಪತಿ ಭಾಗವಹಿಸಿದ್ದರು. ಕಾರ್ಯಾಧ್ಯಕ್ಷ ಮತ್ತು ಖಜಾಂಚಿಗಳಾದ ತಾತಂಡ ಐದ್ದಪ್ಪ ಅಧ್ಯಕ್ಷತೆ ವಹಿಸಿದ್ದರು. ಅಗಲಿದ ಒಕ್ಕೂಟದ ಸದಸ್ಯರ ಹಿನ್ನೆಲೆಯಲ್ಲಿ ಎರಡು ನಿಮಿಷ ಮೌನಾಚರಿಸಲಾಯಿತು.

ಸರ್ವ ಸದಸ್ಯರ ಸಭೆ ನಂತರ ಒಕ್ಕೂಟದ ಆಡಳಿತ ಮಂಡಳಿ ಚುನಾವಣೆ ನಡೆದು ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಅಜ್ಜಿನಿಕಂಡ ಯು.ವಿಲ್ಲಿ ಚಿಟ್ಟಿಯಪ್ಪ, ಉಪಾಧ್ಯಕ್ಷರಾಗಿ ಅತ್ತಂಗಡ ಪ್ರವೀಣ್ ಪೂವಣ್ಣ, ಕಾರ್ಯದರ್ಶಿಯಾಗಿ ಮಾಡೆಟ್ಟೀರ ಸುನೀಲ್ ಸೋಮಣ್ಣ ಮತ್ತು ಜಂಟಿ ಕಾರ್ಯದರ್ಶಿ/ಖಜಾಂಚಿಯಾಗಿ ಕೋಟೇರ ರೇವತಿ ಕುಶಾಲಪ್ಪ ಅವರನ್ನು ಆಯ್ಕೆ ಮಾಡಲಾಯಿತು.

ಸಮಿತಿ ಸದಸ್ಯರು–ಕೋಟೇರ ಕುಶಾಲಪ್ಪ ಕಾಕಮಾಡ ಪ್ರಭು, ನೆರವಂಡ ಸನ್ನು, ಚೊಟ್ಟೆಯಂಡ ಹೇಮಾವತಿ ಮೋಹನ್, ಬಲ್ಯಾಟಂಡ ಸರಸು ವಿಶ್ವನಾಥ್ ಮತ್ತು ಚೊಟ್ಟೆಯಾಂಡ ಸ್ಮಿತಾ. ಇಡೀ ದಿನ ನಡೆದ ಸಭೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ವಿವಿಧ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಹೇಮಾವತಿ ಮೋಹನ್, ಸಂಘದ ಸದಸ್ಯರು ಕ್ರೀಡಾ ಚಟುವಟಿಕೆಗಳನ್ನು ನಡೆಸಿದರು. ರೇವತಿ ಕುಶಾಲಪ್ಪ ಕಾರ್ಯಕ್ರಮ ನಿರ್ವಹಿಸಿದರು.

ಕೇಂದ್ರ, ರಾಜ್ಯ ಸರ್ಕಾರದ ಖಾಲಿ ಹುದ್ದೆಗಳ ಭರ್ತಿಗೆ ಆಗ್ರಹ

ನೇಮಕಾತಿ ಅಕ್ರಮ ತಡೆಗೂ ಎಐಡಿವೈಒಯಿಂದ ಸಹಿ ಸಂಗ್ರಹ ಅಭಿಯಾನ

ಮೈಸೂರು,ನ.6(ಎಂಕೆ)–ಕೇಂದ್ರ ಮತ್ತು ರಾಜ್ಯ ಸರ್ಕಾರದ ಎಲ್ಲಾ ಖಾಲಿ ಹುದ್ದೆಗಳ ಭರ್ತಿ ಹಾಗೂ ನೇಮಕಾತಿಯಲ್ಲಿನ ಅಕ್ರಮ ತಡೆಗಟ್ಟಲು ಆಗ್ರಹಿಸಿ ಎಐಡಿವೈಒ (ಆಲ್ ಇಂಡಿಯಾ ಡೆಮಾಕ್ರಟಿಕ್ ಯೂತ್ ಆರ್ಗನೈಸೇಷನ್) ವತಿಯಿಂದ ಸಹಿ ಸಂಗ್ರಹ ಅಭಿಯಾನ ನಡೆಸಲಾಯಿತು.

ಮೈಸೂರಿನ ಶ್ರೀ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಎದುರು ಎಐಡಿವೈಒ ದೇಶವ್ಯಾಪಿ ಅಭಿಯಾನಕ್ಕೆ ಕರೆ ನೀಡಿರುವ ಹಿನ್ನಲೆಯಲ್ಲಿ ಮೈಸೂರು ಜಿಲ್ಲಾ ಸಮಿತಿ ವತಿಯಿಂದಲೂ ಸಹಿ ಸಂಗ್ರಹ ಅಭಿಯಾನ ನಡೆಸಲಾಯಿತು. ಕೇಂದ್ರ ಸರ್ಕಾರದ 78 ಸಚಿವಾಲಯಗಳು ಮತ್ತು ಇಲಾಖೆಗಳಲ್ಲಿ 9.78 ಲಕ್ಷಕ್ಕೂ ಅಧಿಕ ಹಾಗೂ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ 2.85 ಲಕ್ಷ ಹುದ್ದೆಗಳು ಖಾಲಿ ಇದ್ದು, ಕೂಡಲೇ ನೇಮಕಾತಿ ಪ್ರಕ್ರಿಯೆಗಳನ್ನು ನಡೆಸಬೇಕು ಎಂದು ಒತ್ತಾಯಿಸಿದರು.



ಮೈಸೂರಿನ ಶ್ರೀ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಎದುರು ಎಐಡಿವೈಒ ಮೈಸೂರು ಜಿಲ್ಲಾ ಸಮಿತಿ ವತಿಯಿಂದ ಸಹಿ ಸಂಗ್ರಹ ಅಭಿಯಾನ ನಡೆಸಲಾಯಿತು.

ಹಾಗೆಯೇ ಎಲ್ಲಾ ನೇಮಕಾತಿಗಳ ವಯೋಮಿತಿಯಲ್ಲಿ ಕನಿಷ್ಠ 5 ವರ್ಷಗಳ ಸಡಿಲಿಕೆ ನೀಡಬೇಕು., ಎಲ್ಲಾ ರೀತಿಯ ನೇಮಕಾತಿ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಇರಬೇಕು. ಪರೀಕ್ಷಾ ಅಕ್ರಮಗಳನ್ನು ತಡೆಗಟ್ಟಬೇಕು. ಕೆಪಿಎಸ್‌ಸಿಯಲ್ಲಿನ ಅಕ್ರಮ ತಡೆಗಟ್ಟಲು ರಾಜ್ಯ ಸರ್ಕಾರ ಹೋಟಾ ಸಮಿತಿ ಶಿಫಾರಸ್ಸುಗಳನ್ನು ಜಾರಿಗೊಳಿಸಬೇಕು. ಗುತ್ತಿಗೆ ವ್ಯವಸ್ಥೆಯನ್ನು ರದ್ದುಗೊಳಿಸಬೇಕು ಮತ್ತು ಎಲ್ಲಾ ಹುದ್ದೆಗಳಿಗೂ ಖಾಯಂ ನೇಮಕಾತಿ ಮಾಡಬೇಕು. ದೇಶಾದ್ಯಂತ ಕಾರ್ಮಿಕರಿಗೆ ಕನಿಷ್ಠ ವೇತನ ಮತ್ತು ಸಾಮಾಜಿಕ ಭದ್ರತೆಯನ್ನು ಖಚಿತಪಡಿಸಬೇಕು. ಉದ್ಯೋಗವಕಾಶ ದೊರೆಯುವವರೆಗೆ ಗೌರವಾನ್ವಿತ ಜೀವನ ನಡೆಸಲು ಸೂಕ್ತವಾದ ನಿರುದ್ಯೋಗ ಭತ್ಯೆ ನೀಡಬೇಕು. ಸರ್ಕಾರಿ ಸಂಸ್ಥೆಗಳ ಖಾಸಗೀಕರಣ ನೀತಿಯನ್ನು ರದ್ದುಗೊಳಿಸಬೇಕು. ನೇಮಕಾತಿಗಳಲ್ಲಿ ದುಬಾರಿ ಪರೀಕ್ಷಾ ಶುಲ್ಕ ಕೈಬಿಡಬೇಕು ಹಾಗೂ ಪರೀಕ್ಷಾರ್ಥಿಗಳಿಗೆ ಉಚಿತ ಸಾರಿಗೆ ವ್ಯವಸ್ಥೆ ಕಲ್ಪಿಸಬೇಕು ಎಂದು ಆಗ್ರಹಿಸಲಾಯಿತು.

ವ್ಯಕ್ತಿ ನಾಪತ್ತೆ

ಮೈಸೂರು, ನ.6– ಸುಮಾರು 75 ವರ್ಷದ ವೆಂಕಟಪ್ಪ ಎಂಬುವವರು ಕಾಣೆಯಾಗಿದ್ದು, ಮೈಸೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸುಮಾರು 5.2 ಅಡಿ ಎತ್ತರ, ಸಾಧಾರಣ ಮೈಕಟ್ಟು, ಗೋಧಿ ಮೈಬಣ್ಣ, ಕೋಲು ಮುಖ, ಬಿಳಿ ಗಡ್ಡ, ಮೀಸೆ ಹಾಗೂ ತಲೆ ಕೂದಲು ಬಿಟ್ಟಿರುತ್ತಾರೆ. ವ್ಯಕ್ತಿಯ ಬಗ್ಗೆ ಮಾಹಿತಿ ಕಂಡು ಬಂದಲ್ಲಿ ಮೈಸೂರು ಜಿಲ್ಲಾ ಪೊಲೀಸ್ ಕಂಟ್ರೋಲ್ ರೂಂ:0821–2418612, ಮೈಸೂರು ಸೌತ್ ಠಾಣೆಯ ದೂ.ಸಂ:0821–2444955, 9480805045ನ್ನು ಸಂಪರ್ಕಿಸಿ ಎಂದು ಮೈಸೂರು ದಕ್ಷಿಣ ಠಾಣೆಯ ಠಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಹೆಚ್‌ಡಿಕೆಗೆ ಸ್ವಾಗತ...

ಮೈಸೂರಿಗೆ ಆಗಮಿಸಿದ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರನ್ನು ಮಾಜಿ ಸಚಿವ ಸಾ.ರಾ.ಮಹೇಶ್ ಸ್ವಾಗತಿಸಿದರು. ಈ ವೇಳೆ ಮಾಜಿ ಶಾಸಕರಾದ ಕೆ.ಮಹದೇವ, ಅಶ್ವಿನ್‌ಕುಮಾರ್, ಮುಖಂಡ ಸೋಮು, ಒಕ್ಕಲಿಗರ ಸಂಘದ ನಿರ್ದೇಶಕ ಎ.ರವಿ ಇದ್ದರು.

ಶುಭಾಶಯ...



ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರಿಗೆ ಬೆಂಗಳೂರಿನ ಅವರ ನಿವಾಸದಲ್ಲಿ ಹುಟ್ಟುಹಬ್ಬದ ಶುಭಾಶಯ ಕೋರಲಾಯಿತು. ಈ ವೇಳೆ ಮಾಜಿ ಶಾಸಕ ಎಲ್.ನಾಗೇಂದ್ರ, ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಹರ್ಷ ಉಪಸ್ಥಿತರಿದ್ದರು.

ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಮೈಸೂರು ತಾಲೂಕು ಇಲವಾಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ನಟೇಶ್ ಈರನಕೊಪ್ಪಲು, ಉಪಾಧ್ಯಕ್ಷರಾಗಿ ರಮೇಶ್ ಅವಿರೋಧವಾಗಿ ಆಯ್ಕೆಯಾದರು. ಸಂಘದ ನಿರ್ದೇಶಕರಾದ ಬಿ.ಮಹದೇವಸ್ವಾಮಿ, ಸುಧಾಕರ್, ಶಿವೇಗೌಡ, ನಂಜುಂಡಸ್ವಾಮಿ, ಮಂಜುಳಾ, ಎಸ್. ರೂಪಾ, ಶ್ರೀನಿವಾಸ್, ಮಹಮದ್ ರಫೀಕ್, ಚಿದಂಬರ, ವೈ.ಆರ್.ರವಿ, ಸಂಘದ ಸಿಇಓ ಎಂ.ಎನ್.ಪ್ರಕಾಶ್ ಉಪಸ್ಥಿತರಿದ್ದರು.

ಅಂತರ ಶಾಲಾ ಮಟ್ಟದ ಭೈರವ ಖೋ ಖೋ ಪಂದ್ಯಾವಳಿ



ಅಂತರ ಶಾಲಾಮಟ್ಟದ ಭೈರವ ಖೋ ಖೋ ಪಂದ್ಯಾವಳಿಯಲ್ಲಿ ಗೆಲುವು ಪಡೆದುಕೊಂಡ ಕುರುಬೂರು ತಂಡಕ್ಕೆ ಬಹುಮಾನ ವಿತರಿಸಲಾಯಿತು.

ಮೈಸೂರು,ನ.6(ಜಿಎ)–ಮೈಸೂರಿನ ಬಸವನಗುಡಿಯಲ್ಲಿರುವ ಅಣ್ಣಯ್ಯಪ್ಪ ಸ್ಮಾರಕ ವಿದ್ಯಾಸಂಸ್ಥೆಯ ಶ್ರೀಭೈರವೇಶ್ವರ ಮಾಂಟೆಸರಿ–ಪ್ರೌಢಶಾಲೆ, ಎಎಂಬಿ ಸಂಯುಕ್ತ ಪದವಿ ಪೂರ್ವ ಕಾಲೇಜಿನ ವತಿಯಿಂದ 3ನೇ ವರ್ಷದ ಅಂತರ ಶಾಲಾ ಮಟ್ಟದ ಭೈರವ ಖೋ ಖೋ ಪಂದ್ಯಾವಳಿಯನ್ನು ಎಎಂಇಎಸ್ ಕ್ರೀಡಾಂಗಣದಲ್ಲಿ ಸೋಮವಾರ ನಡೆಸಲಾಯಿತು.

ಭೈರವ ಖೋ ಖೋ ಪಂದ್ಯಾವಳಿಗೆ ಅಂತರ ರಾಷ್ಟ್ರೀಯ ಖೋ ಖೋ ಕ್ರೀಡಾಪಟು ಚೈತ್ರ ಚಾಲನೆ ನೀಡಿದರು. ನಂತರ ಮಾತನಾಡಿದ ಅವರು, ಖೋ ಖೋ ಕ್ರೀಡೆಯು ಒಲಂಪಿಕ್ ಗೇಮ್ಸ್‌ನಲ್ಲಿ ಸೇರ್ಪಡೆಗೊಂಡಿರುವುದು ಸಂತಸದ ವಿಷಯ. ಮೈಸೂರಿನ ಕ್ರೀಡಾಪಟುಗಳು ಒಲಂಪಿಕ್ ಗೇಮ್ಸ್‌ಗೆ ಆಯ್ಕೆ ಆಗುವಂತಾಗಲಿ ಎಂದು ಶುಭ ಹಾರೈಸಿದರು.

ಪಂದ್ಯಾವಳಿಗೆ ವಿವಿಧ ಶಾಲೆಗಳಿಂದ 18 ತಂಡಗಳು ಪಾಲ್ಗೊಂಡಿದ್ದವು. ಬಾಲಕ ವಿಭಾಗದ ಫೈನಲ್ ಪಂದ್ಯದಲ್ಲಿ ಈಸ್ಟ್–ವೆಸ್ಟ್ ಇಂಟರ್‌ನ್ಯಾಷನಲ್ ಶಾಲೆಯ ತಂಡವು ಭೈರವೇಶ್ವರ ಶಾಲೆಯ ವಿರುದ್ಧ 14–13 ಅಂಕಗಳಿಂದ ಜಯ ತಮ್ಮದಾಗಿಸಿಕೊಂಡರು. ಬಾಲಕಿಯರ ವಿಭಾಗದ ರೋಚಕ ಫೈನಲ್ ಪಂದ್ಯದಲ್ಲಿ ಅಣ್ಣಯ್ಯಪ್ಪ ಭೈರವೇಶ್ವರ ಶಾಲೆಯ ವಿರುದ್ಧ ಕುರುಬೂರು ತಂಡ ಗೆಲುವು ಪಡೆದುಕೊಂಡಿತು.

ಉತ್ತರ ವಲಯ ಮೈಸೂರಿನ ದೈಹಿಕ ಶಿಕ್ಷಣ ಪರಿವೀಕ್ಷಕ ಜಿ.ನಾಗೇಶ್, ಗಾಯಕ ಅಮ್ಮ ರಾಮಚಂದ್ರ, ಪ್ರಾಂಶುಪಾಲೆ ಸೌಮ್ಯ, ಮುಖ್ಯೋಪಾಧ್ಯಾಯ ಶಶಿಕಾಂತ್, ಉಪ ಪ್ರಾಂಶುಪಾಲ ಪುರುಷೋತ್ತಮ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಹತ್ತೇ ನಿಮಿಷದಲ್ಲಿ ಆಟೋ ಕಳವು!


ಮೈಸೂರು, ನ. 6 (ಆರ್‌ಕೆ)–ಟೀ ಕುಡಿದು ಬರುವಷ್ಟರಲ್ಲಿ ಆಟೋವೊಂದನ್ನು ಕಳವು ಮಾಡಲಾಗಿದೆ. ಈ ಪ್ರಕರಣ ಮೈಸೂರಿನ ಲಷ್ಕರ್ ಮೊಹಲ್ಲಾದಲ್ಲಿ ಬೆಳಕಿಗೆ ಬಂದಿದೆ. ಮೈಸೂರಿನ ಕೆಸರೆ ಬಳಿಯ ಕುರಿಮಂಡಿ ನಿವಾಸಿ ರವಿ ಆಟೋ ಕಳೆದುಕೊಂಡವರು. ಅಕ್ಟೋಬರ್ 27ರಂದು ಬೆಳಿಗ್ಗೆ 10.15ರ ಸುಮಾರಿಗೆ ಕೆಎಸ್‌ಆರ್‌ಟಿ ಗ್ರಾಮಾಂತರ ಬಸ್ ನಿಲ್ದಾಣದ ಹಿಂಭಾಗ ಕೇಶವ ಐಯ್ಯಂಗಾರ್ ರಸ್ತೆಯ ಲಾಡ್ಜ್‌ವೊಂದರ ಎದುರು ಆಟೋ ನಿಲ್ಲಿಸಿ ಹೋಗಿ, ಟೀ ಕುಡಿದು ಬರುವಷ್ಟರಲ್ಲಿ ಅದು ನಾಪತ್ತೆಯಾಗಿತ್ತು. ವಿಷಯ ತಿಳಿಯುತ್ತಿದ್ದಂತೆಯೆ ಸ್ಥಳಕ್ಕಾಗಮಿಸಿದ ಲಷ್ಕರ್ ಠಾಣೆ ಇನ್ಸ್‌ಪೆಕ್ಟರ್ ಲೋಲಾಕ್ಷಿ ಹಾಗೂ ಸಿಬ್ಬಂದಿ ಪ್ರಕರಣ ದಾಖಲಿಸಿಕೊಂಡು ಮಹಜರು ನಡೆಸಿದರು. ಸುತ್ತಮುತ್ತಲಿನ ಪ್ರದೇಶದ ಸಿಸಿ ಕ್ಯಾಮರಾ ಫುಟೇಜ್‌ಗಳನ್ನು ಕಲೆ ಹಾಕಿ, ಅದರಿಂದ ದೊರೆತ ಸುಳಿವಿನ ಆದಾರದ ಮೇಲೆ ಆಟೋ ಕಳವು ಆರೋಪಿ ಪತ್ತೆಗೆ ಜಾಲ ಬೀಸಿದ್ದಾರೆ.

ನಾಳೆ ಮೈಸೂರಲ್ಲಿ ಭಕ್ತ ಕನಕದಾಸರ ಜಯಂತ್ಯೋತ್ಸವ

ಭವ್ಯ ಮೆರವಣಿಗೆ, ಗಣ್ಯಾತಿಗಣ್ಯರು ಭಾಗಿ

ಮೈಸೂರು,ನ.6(ಜಿಎ)–ಸಂತ ಕನಕದಾಸರ ಜಯಂತ್ಯೋತ್ಸವ ಸಮಿತಿ ವತಿಯಿಂದ ನ.8ರಂದು ಭಕ್ತ ಕನಕದಾಸರ 538ನೇ ಜಯಂತ್ಯೋತ್ಸವವನ್ನು ಕಲಾಮಂದಿರದಲ್ಲಿ ಆಯೋಜಿಸಲಾಗಿದೆ ಎಂದು ಮಾಜಿ ಶಾಸಕ ಮತ್ತು ಸಮಿತಿ ಅಧ್ಯಕ್ಷ ಎಂ.ಕೆ.ಸೊಮಶೇಖರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 9.30ಕ್ಕೆ ಅಲಂಕೃತ ಬೆಳ್ಳಿ ರಥದಲ್ಲಿ ಕನಕದಾಸರ ಪ್ರತಿಮೆ ಇರಿಸಿ, 20ಕ್ಕೂ ಹೆಚ್ಚು ವಿವಿಧ ಕಲಾ ತಂಡ, ಟ್ಯಾಬ್ಲೋಗಳ ಮೂಲಕ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗದಿಂದ ಅದ್ಧೂರಿ ಮೆರವಣಿಗೆ ಆರಂಭವಾಗಿ ಕೆ.ಆರ್.ವೃತ್ತ, ನ್ಯೂ ಸಯ್ಯಾಜಿರಾವ್ ರಸ್ತೆ, ನೂರಡಿ ರಸ್ತೆ, ನಾರಾಯಣ ಶಾಸ್ತ್ರೀ ರಸ್ತೆ, ಅರಸು ರಸ್ತೆ, ಜೆಎಲ್‌ಬಿ ರಸ್ತೆ ಮಾರ್ಗವಾಗಿ ವಿನೋಬ ರಸ್ತೆ ಮೂಲಕ ಕಲಾಮಂದಿರ ತಲುಪಲಿದೆ. ನಂತರ ಕಲಾಮಂದಿರದಲ್ಲಿ ವೇದಿಕೆ ಕಾರ್ಯಕ್ರಮ ನೆರವೇರಲಿದೆ ಎಂದರು.



ಮಧ್ಯಾಹ್ನ 12.30ಕ್ಕೆ ಕಲಾಮಂದಿರದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಶಿವಾನಂದಪುರಿ ಸ್ವಾಮೀಜಿ ಸಾನ್ನಿಧ್ಯ ವಹಿಸುವರು, ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸುವರು. ವಿಧಾನ ಪರಿಷತ್ ಸದಸ್ಯರಾದ ಹೆಚ್.ವಿಶ್ವನಾಥ್, ಡಾ.ಯತೀಂದ್ರ, ಡಾ.ಡಿ.ತಿಮ್ಮಯ್ಯ, ಶಿವಕುಮಾರ್, ಸಂಸದ ಯದುವೀರ್ ಒಡೆಯರ್, ಶಾಸಕರಾದ ಡಿ.ರವಿಶಂಕರ್, ತನ್ವೀರ್‌ಸೇಠ್, ಕೆ.ಹರೀಶ್‌ಗೌಡ, ಟಿ.ಎಸ್.ಶ್ರೀವತ್ಸ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಕನ್ನಡ–ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಕಲಾಮಂದಿದಲ್ಲಿ ನ.9ರಂದು ಸಂಜೆ 4 ಗಂಟೆಗೆ ಕಾರ್ಯಕ್ರಮ ನಡೆಯಲಿದ್ದು, ಶ್ರೀ ಶಿವಾನಂದಪುರಿ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಇತ್ತೀಚೆಗೆ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದವರನ್ನು ಅಭಿನಂದಿಸಲಾಗುತ್ತದೆ ಎಂದರು.

ಕಳೆದ ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕ ಪಡೆದ ಸಮುದಾಯದ ವಿದ್ಯಾರ್ಥಿಗಳನ್ನು ಸಮಿತಿ ಪುರಸ್ಕರಿಸಲಿದ್ದು, ಅರ್ಜಿ ಸಲ್ಲಿಸದವರು ಹೆಚ್ಚಿನ ಮಾಹಿತಿಗೆ ದೂ.94803 25656 ಸಂಪರ್ಕಿಸಿ ಎಂದರು. ಸುದ್ದಿಗೋಷ್ಠಿಯಲ್ಲಿ ಎಂ.ಕೆ.ಶಂಕರ್, ಗೋಪಿ, ವಿಶ್ವಾಥ್, ದೀಪಕ್, ರಾಮಪ್ಪ, ಎಂ.ಮಹಾದೇವೇಗೌಡ ಉಪಸ್ಥಿತರಿದ್ದರು.

ಡಿಸೆಂಬರ್‌ನಲ್ಲಿ ಮಂಡ್ಯ ವಿ.ಸಿ.ಫಾರಂನಲ್ಲಿ ಕೃಷಿ ಮೇಳ

ಮೈಸೂರು,ನ.6(ಜಿಎ)–ಮಂಡ್ಯದಲ್ಲಿನ ಕೃಷಿ ವಿಜ್ಞಾನಗಳ ವಿಶ್ವ ವಿದ್ಯಾನಿಲಯದಲ್ಲಿ ರೈತರಿಗೆ ಕೃಷಿ ಸಂಶೋಧನೆ, ಅತ್ಯಾಧುನಿಕ ಸಾಧನಗಳ ಬಳಕೆ ಕುರಿತು ಡಿಸೆಂಬರ್ ಮೊದಲ ವಾರದಲ್ಲಿ ಕೃಷಿ ಮೇಳವನ್ನು ವಿ.ಸಿ.ಫಾರಂ ಆವರಣದಲ್ಲಿ ಆಯೋಜಿಸಲಾಗಿದೆ ಎಂದು ವಿವಿಯ ವಿಶೇಷಾಧಿಕಾರಿ ಡಾ.ಕೆ.ಎಂ.ಹರಿಣಿಕುಮಾರ್ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 3 ದಿನಗಳ ಕೃಷಿ ಮೇಳ ನಡೆಯಲಿದ್ದು, ಸುಮಾರು ಮೂರರಿಂದ ನಾಲ್ಕು ಲಕ್ಷ ರೈತರು, ಇನ್ನಿತರರು ಪಾಲ್ಗೊಳ್ಳುವ ನಿರೀಕ್ಷೆಯಿದೆ. ರಾಜ್ಯ ಸರ್ಕಾರದ ವಿವಿಧ ಅಭಿವೃದ್ಧಿ ಇಲಾಖೆ, ಹಣಕಾಸು ಸಂಸ್ಥೆಗಳು, ರೈತ ಉತ್ಪಾದಕರ ಕಂಪನಿಗಳು ಹಾಗೂ ಸಂಘ ಸಂಸ್ಥೆಗಳು ಭಾಗಿಯಾಗಲಿವೆ ಎಂದು ತಿಳಿಸಿದರು.

ಹವಾಮಾನ ವೈಪರೀತ್ಯ, ಕೃಷಿ ಕಾರ್ಮಿಕರ ಕೊರತೆ, ಅಸಮರ್ಪಕ ನೀರು ನಿರ್ವಹಣೆ, ಮಣ್ಣಿನ ಸವಕಳಿ, ಮಣ್ಣಿನ ಫಲವತ್ತತೆ ಕ್ಷೀಣಿಸುವುದು, ಕೀಟ ಪೀಡೆಗಳು, ಜಾನುವಾರು ರೋಗ ಮೊದಲಾದ ಸಮಸ್ಯೆಗಳಿಗೆ ಪರಿಹಾರ ಸೂಚಿಸುವ ಮಳಿಗೆಗಳು ಇಲ್ಲಿರಲಿವೆ. ಕೃಷಿಯಲ್ಲಿ ಕೃತಕ ಬುದ್ಧಿಮತ್ತೆ ಬಳಕೆ, ಡ್ರೋನ್ ಪ್ರಯೋಜನಗಳನ್ನು ಪ್ರಾತ್ಯಕ್ಷಿಕೆಯೊಡನೆ ವಿವರಿಸಲಾಗುವುದು. ಹೀಗಾಗಿ ಕೃಷಿ ತೊರೆಯಲು ನಿರ್ಧರಿಸಿರುವವರು ಹಾಗೂ ಈಗಾಗಲೇ ಕೃಷಿ ಚಟುವಟಿಕೆಯಲ್ಲಿ ತೊಡಗಿರುವವರು ಭೇಟಿ ನೀಡಿದಲ್ಲಿ ಲಾಭದಾಯಕ ಕೃಷಿ ಕುರಿತ ಮಾಹಿತಿ ಸಿಗಲಿದೆ. ಚರ್ಚಾಗೋಷ್ಠಿ, ಸಾಧಕ ಕೃಷಿಕರಿಗೆ ಸನ್ಮಾನ ಇರಲಿದೆ ಎಂದರು. ಗೋಷ್ಠಿಯಲ್ಲಿ ಅಧಿಕಾರಿಗಳಾದ ಡಾ.ಎನ್.ಶಿವಕುಮಾರ್, ಡಾ.ಜಿ.ಎಂ.ದೇವಗಿರಿ, ಡಾ.ಸಿ.ರಾಮಚಂದ್ರ, ಡಾ.ಎ.ಡಿ.ರಂಗನಾಥ್ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

7.11.2025 ಶುಕ್ರವಾರ, ಮಳೆ ನಕ್ಷತ್ರ: ವಿಶಾಖ 6.11.2025 ರಿಂದ 19.11.2025
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಕೃಷ್ಣ ಪಕ್ಷ,
ತಿಥಿ: ಬಿದಿಗೆ, ನಕ್ಷತ್ರ: ಕೃತ್ತಿಕ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

- **ನಿವೃತ್ತ ಪೊಲೀಸ್ ಅಧಿಕಾರಿಗಳ ಸಂಘ :** ಹಾಲಿ ಹಾಗೂ ನಿವೃತ್ತ ಪೊಲೀಸ್ ಅಧಿಕಾರಿಗಳ ಕುಟುಂಬ ವರ್ಗದವರಿಗೆ ವಿಶೇಷ ಆರೋಗ್ಯ ತಪಾಸಣಾ ಶಿಬಿರ, ಅಧ್ಯಕ್ಷತೆ : ಎಂ.ಸಿ. ಮರಿಸ್ವಾಮಿ, ಸ್ಥಳ: ಸಂಘದ ಆವರಣ, ಜಲಪುರಿ, ಬೆಳಗ್ಗೆ 9 ರಿಂದ.
- **ಶ್ರೀ ಜಯಚಾಮರಾಜ ಅರಸು ಎಜುಕೇಷನ್ ಟ್ರಸ್ಟ್, ಶ್ರೀ ವಾಣಿ ವಿಲಾಸ ಅರಸು ಮಹಿಳಾ ಪದವಿಪೂರ್ವ ಕಾಲೇಜು :** ಶ್ರೀ ವಾಣಿ ಫೆಸ್ಟ್–2025, ಉದ್ಘಾಟನೆ : ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಮುಖ್ಯ ಅತಿಥಿಗಳು : ರಂಗಭೂಮಿ ಕಲಾವಿದೆ ಶ್ರೀಮತಿ ದಿಶಾ ರಮೇಶ್, ಅಧ್ಯಕ್ಷತೆ : ಟ್ರಸ್ಟ್ ಕಾರ್ಯದರ್ಶಿ ಮಹೇಶ್ ಎನ್. ಅರಸ್, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 9ಕ್ಕೆ.
- **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.
- **ಮಹಾಜನ ಪ್ರಥಮ ದರ್ಜೆ ಕಾಲೇಜು :** ರಾಜ್ಯ ಮಟ್ಟದ ಕಾರ್ಯಾಗಾರ, ಉದ್ಘಾಟನೆ : ಗ್ರಾಮ್ ಅಧ್ಯಕ್ಷರು ಮತ್ತು ಎನ್. ರಂಗರಾವ್ ಅಂಡ್ ಸನ್ಸ್ ವ್ಯವಸ್ಥಾಪಕ ನಿರ್ದೇಶಕ ಅರ್ಜುನ್ ರಂಗ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10ಕ್ಕೆ.
- **ಕಾವೇರಿ ಆಯುರ್ವೇದ ಆಸ್ಪತ್ರೆ:** ಗರ್ಭ ಸಂಸ್ಕಾರ, ಒಣ ಕಣ್ಣಿನ ಆರೋಗ್ಯ ಶಿಬಿರ ಮತ್ತು ತಪಾಸಣೆ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಗೆ.
- **ಸುಯೋಗ್ ಆಸ್ಪತ್ರೆ:** ಉಚಿತ ಹೃದ್ರೋಗ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ, ಬೆಳಗ್ಗೆ 10 ರಿಂದ.
- **ಮೈಸೂರು ವಿಶ್ವವಿದ್ಯಾನಿಲಯ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ :** ಪ್ರಾಯೋಗಿಕ ಚಿತ್ರಕಥಾ ರಚನಾ ತರಬೇತಿ ಕಾರ್ಯಾಗಾರ, ಉದ್ಘಾಟನೆ : ನಟ ಎಸ್.ಎಂ. ಜೋ ಸೈಮನ್, ಅಧ್ಯಕ್ಷತೆ : ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಪ್ರೊ. ಎನ್.ಕೆ. ಲೋಲಾಕ್ಷಿ, ಮುಖ್ಯ ಅತಿಥಿಗಳು : ಬರಹಗಾರ ವೈ.ಓ. ರುದ್ರೇಶ್, ಕಾರ್ಯನಿರ್ವಾಹಕ ನಿರ್ದೇಶಕ ಎಸ್. ಮಹೇಶ್, ಸ್ಥಳ: ಭಾಷೆ ಹಾಗೂ ಬಹುಮಾಧ್ಯಮ ಪ್ರಯೋಗಾಲಯ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.
- **ಸುಕೃತಿ ಸೇವಾ ಟ್ರಸ್ಟ್ :** ಮಧ್ಯಾಹ್ನ 12 ರಿಂದ ಕನ್ನಡ ರಾಜ್ಯೋತ್ಸವದ ಅಂಗವಾಗಿ ಆಹಾರ ಮೇಳ, ಮಹಿಳೆಯರು ಮತ್ತು ಪುರುಷರಿಗೆ ಸ್ಪರ್ಧೆ, ಸಂಜೆ 6 ರಿಂದ ಸಾಂಸ್ಕೃತಿಕ ಕಾರ್ಯಕ್ರಮ, ಸ್ಥಳ: ಪೋದಾರ್ ಸ್ಕೂಲ್ ಎದುರು ಆಟದ ಮೈದಾನ, ವಿಜಯನಗರ 2ನೇ ಹಂತ.
- **ಕರ್ನಾಟಕ ಗಾನಕಲಾ ಪರಿಷತ್, ಗಾನಭಾರತೀ:** 54ನೇ ಹಿರಿಯ ಸಂಗೀತ ವಿದ್ವಾಂಸರ ಹಾಗೂ 36ನೇ ಯುವ ಸಂಗೀತ ವಿದ್ವಾಂಸರ ರಾಜ್ಯ ಸಂಗೀತ ಸಮ್ಮೇಳನ, ಹಿರಿಯ ಸಂಗೀತ ವಿದ್ವಾಂಸರ ಸಂಗೀತ ಸಮ್ಮೇಳನದ ಅಧ್ಯಕ್ಷರಾಗಿ ಡಾ.ಸಿ.ಎ.ಶ್ರೀಧರ, ಯುವ ಸಂಗೀತ ವಿದ್ವಾಂಸರ ಸಮ್ಮೇಳನದ ಅಧ್ಯಕ್ಷರಾಗಿ ವಿದ್ವಾನ್ ಮತ್ತೂರು ಆರ್.ಶ್ರೀನಿಧಿ, ವಿದ್ವತ್ ಗೋಷ್ಠಿ: ಬೆಳಗ್ಗೆ 10ಕ್ಕೆ ಸೃಜನ ಕಲಾಮಂದಿರದ ಕಲಾವಿದರಿಂದ ಪ್ರಾರ್ಥನೆ, ಬೆಳಗ್ಗೆ 10.30ಕ್ಕೆ ಮುತ್ತುಸ್ವಾಮಿ ದೀಕ್ಷಿತರ ಕೃತಿಗಳಲ್ಲಿ ವಿಜ್ಞಾನದ ಸೂಕ್ಷ್ಮಗಳು–ವಿದುಷಿ ಡಾ. ವೀಣಾ ಮೋಹನ್, ಬೆಳಗ್ಗೆ 11.35 ರಿಂದ ಮುತ್ತುಸ್ವಾಮಿ ದೀಕ್ಷಿತರ ಅಭಯಾಂಬ ವಿಭಕ್ತಿ ಕೃತಿಗಳು–ಗಾನಕಲಾ ವಿದುಷಿ ಕಲಾವತಿ ಅವಧೂತ್, ಮಧ್ಯಾಹ್ನ 12.35 ರಿಂದ ವಿದ್ವಾನ್ ಎಚ್.ಯೋಗನರಸಿಂಹಂ ಅವರ ಕೃತಿಗಳಲ್ಲಿ ಸಂಗೀತ ಸಾಹಿತ್ಯ ಸೌರಭ–ವಿದುಷಿ ನೀರಜ ಅಚ್ಯುತರಾವ್, ವಿದುಷಿ ಎಂ.ಎ. ಜ್ಯೋತಿ, ಸಂಜೆ 4.15 ರಿಂದ ಸಂಗೀತ ಕಾರ್ಯಕ್ರಮಗಳು, ವಿದುಷಿ ಎಸ್.ವಿ.ಸಹನಾ ಅವರಿಂದ ವೀಣೆ, ಗಾನಕಲಾಶ್ರೀ ವಿದ್ವಾನ್ ಎಚ್.ಎಸ್. ಸುಧೀಂದ್ರ–ಮೃದಂಗ, ವಿದ್ವಾನ್ ಶಮಿತ್ ಎಸ್.ಗೌಡ–ಘಟಂ, ಸಂಜೆ 6.45 ರಿಂದ ವಿದ್ವಾನ್ ಎನ್.ಆರ್. ಪ್ರಶಾಂತ್–ಗಾಯನ, ವಿದ್ವಾನ್ ಕೇಶವ ಮೋಹನ್ ಕುಮಾರ್ –ಪಿಟೀಲು, ವಿದ್ವಾನ್ ಬಿ.ಎಸ್.ಪ್ರಶಾಂತ್–ಮೃದಂಗ, ವಿದ್ವಾನ್ ಶರತ್ ಕೌಶಿಕ್–ಘಟಂ, ಸ್ಥಳ: ಗಾನಭಾರತೀ ರಮಾಗೋವಿಂದ ಕಲಾ ವೇದಿಕೆ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ.
- **ಶ್ರೀ ರಾಮಕೃಷ್ಣ ಸೇವಾ ಸಂಘ, ರಾಮಕೃಷ್ಣ ವಿದ್ಯಾಕೇಂದ್ರ ಸಂಯುಕ್ತ ಪದವಿಪೂರ್ವ ಕಾಲೇಜು:** ಆರ್‌ವಿಕೆ ಹತ್ತನೆ ವರುಷ ಬತ್ತದ ಹರುಷ ವಿಶೇಷ ಉಪನ್ಯಾಸ ಮಾಲಿಕೆ, ಅಧ್ಯಕ್ಷತೆ: ಶ್ರೀ ರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಎಂ. ಪಾಪೇಗೌಡ, ಮುಖ್ಯ ಅತಿಥಿಗಳು: ಡಾ.ಆದಿತ್ಯ , ಸ್ಥಳ: ಶ್ರೀ ಹರ್ಷಾನಂದಾಜಿ ಮಹಾರಾಜ್ ಸಭಾಂಗಣ, ಮಧ್ಯಾಹ್ನ 2.50ಕ್ಕೆ.
- **ಮೈಸೂರು ವಿಶ್ವವಿದ್ಯಾನಿಲಯ ಅಧ್ಯಾಪಕರ ಸಂಘ :** ನೂತನ ಎಂಯುಟಿಎ ಕಚೇರಿ ಉದ್ಘಾಟನೆ, ಶಿಕ್ಷಕರ ದಿನಾಚರಣೆ ಮತ್ತು ನಿವೃತ್ತ ಅಧ್ಯಾಪಕರಿಗೆ ಸನ್ಮಾನ ಸಮಾರಂಭ, ಉದ್ಘಾಟನೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಪ್ರಧಾನ ಭಾಷಣ : ಸಾಹಿತಿ ಪ್ರೊ. ಎಂ. ಕೃಷ್ಣೇಗೌಡ, ಮುಖ್ಯ ಅತಿಥಿಗಳು : ಕುಲಸಚಿವರಾದ ಶ್ರೀಮತಿ ಎಂ.ಕೆ. ಸವಿತಾ, ಪ್ರೊ. ಎನ್. ನಾಗರಾಜು, ಹಣಕಾಸು ಅಧಿಕಾರಿ ಶ್ರೀಮತಿ ಕೆ.ಎಸ್. ರೇಖಾ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಪ್ರೊ. ಎಂ.ಪಿ. ಸದಾಶಿವ, ಸ್ಥಳ: ಇಎಂಆರ್‌ಸಿ ಸಭಾಂಗಣ, ಮಾನಸಗಂಗೋತ್ರಿ, ಮಧ್ಯಾಹ್ನ 3ಕ್ಕೆ.
- **ಸಾಧನಾ ಮಂದಿರ :** ಪೂಜ್ಯ ಸ್ವಾಮಿ ಹಂಸಾನಂದ ಅವರಿಂದ ಸರಸ್ವತಿ ಪೂಜಾ, ಸಂಜೆ 6 ರಿಂದ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಸಾಹಿತ್ಯ ಭವನ, ವಿಜಯನಗರ 1ನೇ ಹಂತ; ಸಂಜೆ 7.15 ರಿಂದ ಶ್ರೀ ಸಪ್ತಮಾತೃಕಾ ದೇವಸ್ಥಾನಂ, ವಿಜಯನಗರ 3ನೇ ಹಂತ.
- **ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಎಜುಕೇಷನಲ್ ಥಿಯೇಟರ್ :** ಮೇಡಂ ಕ್ಯೂರಿ ಮತ್ತು ಸರ್ ಸಿ.ವಿ. ರಾಮನ್ ಜನ್ಮ ದಿನಾಚರಣೆ ಅಂಗವಾಗಿ ಪ್ರದರ್ಶನ ಮತ್ತು ಸಂಭಾಷಣೆ, ಮಹಿಳಾ ವಿಜ್ಞಾನಿಗಳು : ಒಂದು ಪುನರ್‌ಶೋಧ, ಸಂವಾಹಕರು : ಸಾಹಿತಿ ಶ್ರೀಮತಿ ನೇಮಿಚಂದ್ರ, ಸ್ಥಳ: ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ, ಹಾರ್ಡ್ವಿಕ್ ಶಾಲೆ ಆವರಣ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.
- **ಮೈಸೂರು ವಿಶ್ವವಿದ್ಯಾನಿಲಯ ಜಾನಪದ ವಿಭಾಗ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಕರ್ನಾಟಕ ಜಾನಪದ ಸಂಶೋಧಕರ ಸಂಘ :** ಜಾನಪದ ನಡಿಗೆ ಶಾಲಾ ಕಾಲೇಜುಗಳ ವಿದ್ಯಾರ್ಥಿನಿಲಯಗಳ ಕಡೆಗೆ ಸರಣಿ ಉಪನ್ಯಾಸ, ಉದ್ಘಾಟನೆ : ಪ್ರಸಾರಾಂಗ ನಿರ್ದೇಶಕ ಪ್ರೊ. ಎಂ. ನಂಜಯ್ಯ ಹೊಂಗನೂರು, ಉಪಸ್ಥಿತರು : ಪತ್ರಕರ್ತ ವಿನೋದ್ ಮಹದೇವಪುರ, ಕಲ್ಲಹಳ್ಳಿ ಕುಮಾರ್, ಅಮ್ಮ ರಾಮಚಂದ್ರ, ಎಂ. ಲಿಂಗರಾಜು, ಡಾ. ಎಚ್.ಪಿ. ಮಂಜು, ಅಧ್ಯಕ್ಷತೆ : ಕೆ. ಮಹೇಶ್, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ವಿದ್ಯಾರ್ಥಿನಿಲಯ, ವಿಶ್ವೇಶ್ವರನಗರ, ಸಂಜೆ 6ಕ್ಕೆ.
- **ಕದಂಬ ರಂಗ ವೇದಿಕೆ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು :** ಕದಂಬ ರಂಗೋತ್ಸವ, ಉದ್ಘಾಟನೆ : ಕಿರುತೆರೆ ನಟ ಶಂಕರ್ ಅಶ್ವಥ್, ಉಪಸ್ಥಿತರು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ರಂಗ ಸಮಾಜದ ಸದಸ್ಯ ಹೆಚ್.ಎಸ್. ಸುರೇಶ್‌ಬಾಬು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಕದಂಬ ರಂಗ ವೇದಿಕೆ ಅಧ್ಯಕ್ಷ ಡಾ. ರಾಜಶೇಖರ ಕದಂಬ, ಸ್ಥಳ : ಕಿರು ರಂಗಮಂದಿರ (ಕಲಾಮಂದಿರದ ಆವರಣ), ಸಂಜೆ 6.30ಕ್ಕೆ.
- **ಗೀತಾ ಶಿಶು ಶಿಕ್ಷಣ ಸಂಸ್ಥೆ :** ಗೀತಾ ಶಿಶು ಶಿಕ್ಷಣ ಸಂಘದ ಸಂಸ್ಥಾಪಕರು, ಶಿಕ್ಷಣ ತಜ್ಞರು, ದಾರ್ಶನಿಕರು, ಜಿಎಸ್‌ಎಸ್‌ಎಸ್‌ನ ಸಂಸ್ಥಾಪಕ ಗೌರವ ಕಾರ್ಯದರ್ಶಿಗಳಾದ ದಿವಂಗತ ಪ್ರೊ.ಬಿ.ಎಸ್.ಪಂಡಿತ್ ಅವರ ನೆನಪಿನಲ್ಲಿ ಸಂಗೀತ ಕಾರ್ಯಕ್ರಮ, ಸಂಗೀತ ನಾಟಕ ಅಕಾಡೆಮಿಯ ಉಸ್ತಾದ್ ಬಿಸ್ಮಿಲ್ಲಾ ಖಾನ್ ಯುವ ಪುರಸ್ಕಾರ ಪ್ರಶಸ್ತಿ ಪುರಸ್ಕೃತ, ನಾಟ್ಯವಿಶಾರದ ಜೈಕಿಶೋರ್ ಮೊಸಲಿಕಂಟಿ ಮತ್ತು ಶ್ರೀಮತಿ ಪದ್ಮ ವಾಣಿ ಮೊಸಲಿಕಂಟಿ ಜೋಡಿಯ ಕೂಚಿಪುಡಿ ನೃತ್ಯ, ತಬಲ ವಾದಕರಾಗಿ ಕೇಶವ ಜೋಶಿ, ಹಾರ್ಮೋನಿಯಂ ವಾದಕರಾಗಿ ವಿದ್ವಾನ್ ಡಾ.ರವೀಂದ್ರ ಕಟೋಟಿ, ಉಪಸ್ಥಿತರು : ಜೈಕಿಶೋರ್ ಮೊಸಲಿ ಕಂಟಿ ಮತ್ತು ಶ್ರೀಮತಿ ಪದ್ಮವಾಣಿ ಮೊಸಲಿಕಂಟಿ, ನಟುವಾಂಗ ಪಟುಗಳಾದ ಆದಿತ್ ನಾರಾಯಣ್, ಗಾಯಕಿಯಾಗಿ ಶ್ರೀಮತಿ ಜನನಿ ಹಂಸಿನಿ ನರಸಿಂಹನ್, ಮೃದಂಗ ವಾದಕರಾಗಿ ಡಾ.ಜಿ.ವಿ.ಗುರು ಭಾರ ದ್ವಾಜ್, ಪಿಟೀಲುವಾದಕರಾಗಿ ಆದಿತ್ಯ ಮತ್ತು ಕೊಳಲು ವಾದಕರಾಗಿ ಆರ್.ಎಸ್. ಅದ್ವೈತ್, ಸ್ಥಳ: ಜಿಎಸ್‌ಎಸ್‌ಎಸ್ ಮಹಿಳಾ ಮಹಾವಿದ್ಯಾಲಯ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸ್ವಾತಂತ್ರ್ಯ ದೀಪ ಸ್ವರಾಜ್ಯ ಸೇನಾನಿಗಳ ಕುರಿತ ಬಾನುಲಿ ಸರಣಿ, ಪ್ರಸ್ತುತಿ : ನಿತೀಶ್ ಡಂಬಳ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಆರೋಗ್ಯ–ರಾಷ್ಟ್ರೀಯ ಕ್ಯಾನ್ಸರ್ ಜಾಗೃತಿ ದಿನಾಚರಣೆಯ ಸಂಬಂಧವಾಗಿ ವಿಶೇಷ ಕಾರ್ಯಕ್ರಮ, ಕ್ಯಾನ್ಸರ್ ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ಡಾ. ಗಿರೀಶ್ ಎಂ.ಎಸ್. ಅವರೊಂದಿಗೆ ಮಾತುಕತೆ ನಂತರ ಸ್ವಸ್ಥ ಜೀವನಶೈಲಿ ಕುರಿತು ತಿಳಿಸಿಕೊಡಲಿದ್ದಾರೆ ಡಾ. ಮಂಜುನಾಥ ಟಿ.ಎನ್., ಇವರೊಂದಿಗೆ ಭಾಗವಹಿಸುತ್ತಾರೆ ಬೇದ್ರೆ ಮಂಜುನಾಥ, 9.30 ಗಾಂಧೀ ಸ್ಮೃತಿ, 9.35 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಕಾಮನ ಬಿಲ್ಲು ಬದುಕಿನ ಬಣ್ಣಗಳ ಚಿತ್ತಾರ, ಪ್ರಸ್ತುತಿ : ಜಿ.ಎನ್. ಮಂಜುನಾಥ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಕಾದಂಬರಿ ವಿಹಾರ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ–ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ.ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, 4.00 ಮಹಿಳಾರಂಗ, 4.30 ವೃತ್ತಿ ಮಾರ್ಗದರ್ಶನ–ಭೌತಶಾಸ್ತ್ರ ಅಂದರೆ ಫಿಸಿಕ್ಸ್ ವಿಷಯದಲ್ಲಿ ಇರುವ ಅಧ್ಯಯನ, ಸಂಶೋಧನೆ ಮತ್ತು ವೃತ್ತಿಪರ ಅವಕಾಶಗಳು ಕುರಿತು ಮೈಸೂರಿನ ಮಹಾರಾಣಿ ಮಹಿಳಾ ಕಾಲೇಜಿನ ಸ್ನಾತಕೋತ್ತರ ಭೌತಶಾಸ್ತ್ರ ವಿಭಾಗದ ಪ್ರೊಫೆಸರ್ ಹಾಗೂ ಡೀನ್ ಅಕಾಡೆಮಿಕ್ಸ್ ಡಾ. ಎಚ್.ಆರ್. ಶ್ರೀಪಾದ್ ಅವರೊಂದಿಗಿನ ಮಾತುಕತೆಯ ಎರಡನೆ ಭಾಗ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 6.50 ಕೃಷಿರಂಗ ಹಲೋ ಕೃಷಿರಂಗ–ಪ್ರಾಯೋಜಿತ ನೇರ ಫೋನ್–ಇನ್ ಕಾರ್ಯಕ್ರಮ, ಕೃಷಿ ಇಲಾಖೆ, ಕರ್ನಾಟಕ ಸರ್ಕಾರ, ವಿಷಯ–ಭೂಸಂಪನ್ಮೂಲ ಸಮೀಕ್ಷೆ, ಭಾಗವಹಿಸುತ್ತಾರೆ–ಉಪ ಕೃಷಿ ನಿರ್ದೇಶಕರಾದ ಗೀತಾಹಳ್ಳಿ, ಪರಾಗ–ಬೇಸಾಯದ ಬದುಕು ಸರಾಗ, 7.45 ಕನ್ನಡದಲ್ಲಿ ಭಾಷಣ, 8.00 ವಿಜ್ಞಾನ ಭಾರತಿ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, 10.00 ಜನಪದ ಸಂಗೀತ, 10.30 ಸವಿನೆನಪು

ಮೈಸೂರು ಮಿತ್ರ

ಶುಕ್ರವಾರ 7 ನವೆಂಬರ್ 2025

ಮೈಸೂರು ಜಿಲ್ಲೆಯಲ್ಲಿ 16,789 ಬೀದಿ ನಾಯಿ ಕಡಿತ ಪ್ರಕರಣ ದಾಖಲು



ಮೈಸೂರಿನ ಬಹುತೇಕ ರಸ್ತೆಗಳಲ್ಲಿ ಕಂಡುಬರುವ ದೃಶ್ಯವಿದು. ಬೀದಿ ನಾಯಿಗಳ ಹಿಂಡು ಸಿಕ್ಕಸಿಕ್ಕವರ ಮೇಲೆ ದಾಳಿ ನಡೆಸುತ್ತಿವೆ



ಸಾಕು ನಾಯಿಗೆ ರೇಬೀಸ್ ಚುಚ್ಚುಮದ್ದು ನೀಡುತ್ತಿರುವುದು

ಮೈಸೂರು, ನ.6(ವಿವಿಹೆಚ್)–ಮೈಸೂರು ನಗರದಲ್ಲಿ ಬೀದಿ ನಾಯಿಗಳ ಹಾವಳಿ ದಿನೇ ದಿನೆ ಹೆಚ್ಚಾಗುತ್ತಿದೆ. ನಗರ ಮಾತ್ರವಲ್ಲದೇ, ಹೊರವಲಯದ ಜನನಿಬಿಡ ಪ್ರದೇಶಗಳಲ್ಲಿಯೂ ನಾಯಿಗಳು ತಂಡೋಪ ತಂಡವಾಗಿ ಓಡಾಡುವುದು ಮತ್ತು ಕೆಲವೊಮ್ಮೆ ದಾರಿ ಹೋಕರ ಮೇಲೆ ಹಠಾತ್ ದಾಳಿ ಮಾಡುವ ಘಟನೆಗಳು ದಿನೇ ದಿನೆ ಏರಿಕೆ ಕಾಣುತ್ತಿರುವುದು ಸಾಂಸ್ಕೃತಿಕ ನಗರಿ ಜನರಲ್ಲಿ ಭಯದ ವಾತಾವರಣ ಉಂಟುಮಾಡಿದೆ.

ನಗರದ ಬಹುತೇಕ ಎಲ್ಲಾ ಏರಿಯಾಗಳಲ್ಲಿಯೂ ನಾಯಿಗಳ ಹಾವಳಿ ಹೆಚ್ಚಾಗಿದೆ. ರಾಮಸ್ವಾಮಿ ವೃತ್ತ, ಆರ್‌ಟಿಓ ವೃತ್ತ, ಚಾಮುಂಡಿಪುರಂ, ರಾಮಕೃಷ್ಣ ಪರಮಹಂಸ ವೃತ್ತ, ಸ್ಥಳೀಯವಾಗಿ ದೇವಾಲಯಗಳ ಮುಂಭಾಗದಲ್ಲಿ, ಆಹಾರ ತ್ಯಾಜ್ಯ ಹಾಕುವ ಕಸದ ತೊಟ್ಟಿಗಳಲ್ಲಿ ಉಳಿದ ಆಹಾರವನ್ನು ತಿನ್ನಲು ನಾಯಿಗಳು ಒಟ್ಟುಗೂಡುತ್ತವೆ ಮತ್ತು ಅವು ದಾರಿ ಹೋಕರ ಮೇಲೆ ದಾಳಿ ಮಾಡಲು ಪ್ರಾರಂಭಿಸುತ್ತವೆ.

ಸಂಜೆಯ ವೇಳೆ ನಿವಾಸಿಗಳು ನಿರಾತಂಕವಾಗಿ ಓಡಾಡಲು ಅಂಜುತ್ತಾರೆ. ಸಾಕು ನಾಯಿಯೊಂದಿಗೆ ಹೊರ ಬಂದರೆ, ಬೀದಿ ನಾಯಿಗಳ ಹಿಂಡು ದಾಳಿ ಮಾಡುತ್ತವೆ. ಪರಿಣಾಮವಾಗಿ, ನಾಯಿ ಮಾಲೀಕರು ತಮ್ಮ ನಾಯಿಗಳನ್ನು ಹೊರಗೆ ಕರೆದೊಯ್ಯಲು ಹೆದರುವ ಪರಿಸ್ಥಿತಿ ನಿರ್ಮಾಣವಾಗಿದೆ.

ವಿಜಯನಗರ, ಯಾದವಗಿರಿ, ಕುವೆಂಪುನಗರ, ಬನ್ನಿಮಂಟಪ ಲೇಔಟ್, ಜೆಪಿ ನಗರ ಮುಂತಾದ ಪ್ರದೇಶಗಳಲ್ಲಿ ವಾಕಿಂಗ್ ಹೋದವರಿಗೆ ನಾಯಿಗಳ ಕಾಟ ಹೆಚ್ಚುತ್ತಿದೆ. ಈ ಸಮಸ್ಯೆಯನ್ನು ನಿಯಂತ್ರಿಸಲು ಪಾಲಿಕೆಯು ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ ಮತ್ತು ಲಸಿಕೆ ನೀಡುವಂತಹ ಕ್ರಮಗಳನ್ನು ಕೈಗೊಂಡಿದೆ. ಆದರೆ, ಸಮಸ್ಯೆ ಇನ್ನೂ ನಿವಾರಣೆಯಾಗಿಲ್ಲ, ಮತ್ತು ನಾಯಿಗಳು ಜನರ ಮೇಲೆ ದಾಳಿ ಮಾಡುವ ಘಟನೆಗಳು ವರದಿಯಾಗುತ್ತಲೇ ಇವೆ.

ನಾಯಿಗಳ ಸಂತಾನಹರಣ, ರೇಬೀಸ್ ಚುಚ್ಚುಮದ್ದು ನೀಡಿರುವುದಾಗಿ ಹೇಳುವ ಪಾಲಿಕೆ ನಾಯಿಗಳ ಹಾವಳಿ ತಡೆಯುವಲ್ಲಿ ವಿಫಲವಾಗಿದೆ.

ಅಂಕಿ ಅಂಶ ಏನು ಹೇಳುತ್ತದೆ: 2025ರ ಜನವರಿ ಮಾಹೆಯಿಂದ ಅಕ್ಟೋಬರ್ ವರೆಗೆ ಮೈಸೂರು ಜಿಲ್ಲೆಯಲ್ಲಿ (ಮೈಸೂರು ನಗರ ಸೇರಿದಂತೆ) 16,789 ನಾಯಿ ಕಡಿತ ಪ್ರಕರಣಗಳು ದಾಖಲಾಗಿವೆ. ಇದರಲ್ಲಿ 1 ಸಾವು ಕೂಡ ಸಂಭವಿಸಿದೆ. ಒಟ್ಟಾರೆ ತಾಲೂಕುಗಳಿಂದ 12,279 ಪ್ರಕರಣಗಳು (1 ಸಾವು) ದಾಖಲಾದರೆ, ಮೈಸೂರು ನಗರದಲ್ಲಿ ಬರೋಬ್ಬರಿ 4,510 ಪ್ರಕರಣಗಳು ದಾಖಲಾಗಿವೆ.

ಹೆಚ್.ಡಿ.ಕೋಟೆ– 1275 ಪ್ರಕರಣ(1 ಸಾವು), ಹುಣಸೂರು– 2241, ಕೆಆರ್.ನಗರ– 1234, ಮೈಸೂರು ತಾಲೂಕು– 1256, ನಂಜನಗೂಡು– 1480, ಪಿರಿಯಾಪಟ್ಟಣ– 2291, ಸಾಲಿಗ್ರಾಮ– 684, ಸರಗೂರು– 240, ತಿ.ನರಸೀಪುರ– 1578 ಪ್ರಕರಣಗಳು ಸೇರಿ ಒಟ್ಟು 12279 ಪ್ರಕರಣಗಳು ದಾಖಲಾಗಿವೆ. ಇತ್ತ ಮೈಸೂರು ನಗರದಲ್ಲಿ 4510 ಪ್ರಕರಣ ದಾಖಲಾಗಿದೆ.

19 ಸಾವಿರ ಗುರಿ ಮುಟ್ಟಿದ್ದೇವೆ

ಮೈಸೂರು ನಗರ ಮಾತ್ರವಲ್ಲದೇ ಜಿಲ್ಲಾದ್ಯಂತ ನಾಯಿಗಳ ಹಾವಳಿ ಇದೆ. ಇತ್ತ ಸಾಕು ನಾಯಿಗಳ ದಾಳಿಯಿಂದಲೂ ಹಾನಿಗಳಾಗುತ್ತಿದ್ದು, ಇವುಗಳನ್ನು ತಡೆಯುವ ನಿಟ್ಟಿನಲ್ಲಿ ಜಿಲ್ಲೆಯಾದ್ಯಂತ 21162 ಸಾಕು ನಾಯಿಗಳಿಗೆ ರೇಬಿಸ್ ಚುಚ್ಚುಮದ್ದು ನೀಡುವ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ. ಜನವರಿಯಿಂದ ಇಲ್ಲಿಯವರೆಗೆ 19946 ಉಚಿತ ಚುಚ್ಚುಮದ್ದು ನೀಡಲಾಗಿದೆ. ಈ ಸಂಬಂಧ ಶಾಲಾ–ಕಾಲೇಜು ಹಂತದಲ್ಲಿ ಜಾಗೃತಿ ಕಾರ್ಯಕ್ರಮಗಳು, ಭಿತ್ತಿಚಿತ್ರ, ಪೋಸ್ಟರ್ ಅಭಿಯಾನಗಳನ್ನು ನಿರಂತರವಾಗಿ ನಡೆಸುತ್ತಾ ಬರಲಾಗಿದೆ. ಈವರೆಗೆ 530 ರೇಬೀಸ್ ರೋಗ ಅರಿವು ಕ್ರಾರ್ಯಕ್ರಮ ನಡೆಸಲಾಗಿದೆ. ಜನರು ಎಚ್ಚರದಿಂದಿರಬೇಕು. ತಮ್ಮ ಸಾಕು ಪ್ರಾಣಿಗಳಿಗೆ ರೇಬೀಸ್ ಚುಚ್ಚುಮದ್ದು ಕೊಡಿಸುವ ಮೂಲಕ ಮುಂದಾಗಬಹುದಾದ ಅನಾಹುತವನ್ನು ತಡೆಯಬಹುದು.

- ಡಾ.ನಾಗರಾಜು, ಉಪ ನಿರ್ದೇಶಕರು, ಪಶುಸಂಗೋಪನಾ ಇಲಾಖೆ.



ರಾತ್ರಿ ವೇಳೆ ಓಡಾಡುವುದೇ ಕಷ್ಟವಾಗಿದೆ. ಡಕಾಯಿತರು, ಕಳ್ಳರ ರೀತಿಯಲ್ಲಿ ನಾಯಿಗಳು ರಸ್ತೆಯಲ್ಲಿ ಅಡ್ಡ ಗಟ್ಟುತ್ತವೆ. ಗುಂಪು ಗುಂಪಾಗಿರುವ ನಾಯಿಗಳನ್ನು ಕಂಡು ರಸ್ತೆಯನ್ನೇ ಬದಲಾಯಿಸಿ ತೆರಳುವ ಪ್ರಮೇಯ ಉಂಟಾಗಿದೆ. ಇದನ್ನು ಸರಿಪಡಿಸುವ ನಿಟ್ಟಿನಲ್ಲಿ ಪಾಲಿಕೆ ಕ್ರಮ ಕೈಗೊಳ್ಳಬೇಕು.

–ಶಶಾಂಕ್ ಹೆಚ್.ಎಸ್., ಮೈಸೂರು ನಿವಾಸಿ



ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವ ಜನರಿಗೆ ನಾಯಿಗಳ ಹಾವಳಿಯಿಂದ ತುಂಬಾ ತೊಂದರೆಯಾಗುತ್ತಿದೆ. ನಾಯಿಗಳ ಉಪಟಳ ತಡೆಯುವ ನಿಟ್ಟಿನಲ್ಲಿ, ರಾತ್ರಿವೇಳೆ ಜನರು ನಿರ್ಭೀತಿಯಿಂದ ಓಡಾಡುವಂತೆ ಮಾಡಲು ಎಲ್ಲಾ ಕ್ರಮವನ್ನು ಸಂಬಂಧಪಟ್ಟ ಇಲಾಖೆ ಕೈಗೊಳ್ಳಬೇಕು.

-ಗಣೇಶ್.ಎಂ., ಸಿವಿಲ್ ಇಂಜಿನಿಯರ್.

ಕೆಜಿಎಫ್ 'ಚಾಚಾ' ಖ್ಯಾತಿಯ ಹರೀಶ್ ರಾಯ್ ನಿಧನ



ಬೆಂಗಳೂರು, ನ.6– ಕೆಜಿಎಫ್ ಖ್ಯಾತಿಯ ಹಿರಿಯ ನಟ ಹರೀಶ್ ರಾಯ್ ಥೈರಾಯ್ಡ್ ಕ್ಯಾನ್ಸರ್‌ನಿಂದಾಗಿ ನಿಧನರಾಗಿದ್ದಾರೆ. 90ರ ದಶಕದಿಂದಲೂ ಸಕ್ರಿಯರಾಗಿದ್ದ ಅವರು, ಓಂ, ಕೆಜಿಎಫ್ ಸೇರಿದಂತೆ ಹಲವು ಹಿಟ್ ಚಿತ್ರಗಳಲ್ಲಿ ಖಳನಟನಾಗಿ ನಟಿಸಿದ್ದರು.

ಹರೀಶ್ ರಾಯ್ ಕಳೆದ ಕೆಲ ವರ್ಷಗಳಿಂದ ಕ್ಯಾನ್ಸರ್‌ನಿಂದ ಬಳಲುತ್ತಿದ್ದರು. ಅವರ ಚಿಕಿತ್ಸೆಗೆ ಕೆಜಿಎಫ್ ಸಿನಿಮಾ ಹೀರೋ ಯಶ್ ಸೇರಿದಂತೆ ಅನೇಕರು ಆರ್ಥಿಕ ಸಹಾಯ ಹಸ್ತ ಚಾಚಿದ್ದರು. ಕ್ಯಾನ್ಸರ್ ಮಹಾಮಾರಿಯಿಂದ ಹರೀಶ್ ರಾಯ್ ಅವರನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಬೆಂಗಳೂರಿನ ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆಯಲ್ಲಿ ಹರೀಶ್ ರಾಯ್ ವಿಧಿವಶರಾಗಿದ್ದಾರೆ. 90 ರ ದಶಕದಲ್ಲಿ ಹಲವು ಸಿನಿಮಾಗಳಲ್ಲಿ ಖಳನಾಯಕನ ಪಾತ್ರದಲ್ಲಿ ಹರೀಶ್ ರಾಯ್ ನಟಿಸಿದ್ದರು. ರಾಜ್ ಬಹದ್ದೂರ್, ನನ್ನ ಕನಸಿನ ಹೂವೆ, ಮೀಂಡುಮ್ ಒರು ಕಾದಲ್ ಕಥೈ, ಜೋಡಿ ಹಕ್ಕಿ, ತಾಯವ್ವ, ಅಂಡರ್ ವರ್ಲ್ಡ್, ನಲ್ಲ, ಸಂಜು ವೆಡ್ಸ್ ಗೀತಾ, ಸ್ವಯಂವರ, ಭೂಗತ ಸೇರಿದಂತೆ ಕನ್ನಡ ಮತ್ತು ತಮಿಳು ಸಿನಿಮಾಗಳಲ್ಲಿ ನಟಿಸಿದ್ದರು. ಹರೀಶ್ ರಾಯ್ ಪತ್ನಿ ಹಾಗೂ ಇಬ್ಬರು ಮಕ್ಕಳನ್ನು ಅಗಲಿದ್ದಾರೆ.

ಕಾರು ಅಡ್ಡಗಟ್ಟಿ ಖಾಸಗಿ ಕಂಪನಿ ಉದ್ಯೋಗಿ ಮೇಲೆ ಹಲ್ಲೆ

ತಡರಾತ್ರಿ ಪುಲಿಕೇಶಿ ರಸ್ತೆಯಲ್ಲಿ ಪುಂಡರ ಅಟ್ಟಹಾಸ

ಮೈಸೂರು, ನ.6– ತಡರಾತ್ರಿ ಕಾರು ಅಡ್ಡಗಟ್ಟಿ ವಿನಾಕಾರಣ ಚಾಲಕನಿಗೆ ಯಾವುದೋ ಆಯುಧದಿಂದ ಹಲ್ಲೆ ನಡೆಸಿ, ಗಾಯಗೊಳಿಸಿರುವ ಘಟನೆ ಮೈಸೂರಿನ ಮಂಡಿ ಮೊಹಲ್ಲಾದ ಪುಲಿಕೇಶಿ ರಸ್ತೆಯಲ್ಲಿ ನಡೆದಿದೆ.

ನಗರದ ಟಿ.ಕೆ.ಲೇಔಟ್ ನಿವಾಸಿ ಎಸ್.ರಾಜೀವ್ ಗಾಯಗೊಂಡು ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದು, ಜೊತೆಯಲ್ಲಿದ್ದ ಸ್ನೇಹಿತ ತೇಜಸ್ ಮೇಲೂ ಪುಂಡರು ಹಲ್ಲೆ ನಡೆಸಿದ್ದಾರೆ.

ಬನ್ನೂರಿನ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿರುವ ರಾಜೀವ್, ಮಂಗಳವಾರ ತಡರಾತ್ರಿ(2.30AM) ಕೆಲಸ ಮುಗಿಸಿಕೊಂಡು ಸ್ನೇಹಿತ ತೇಜಸ್ ಜೊತೆ ಐ20 ಕಾರ್‌ನಲ್ಲಿ ಪುಲಿಕೇಶಿ ರಸ್ತೆಯಲ್ಲಿ ಬರುವಾಗ ಎರಡು ಸ್ಕೂಟರ್‌ಗಳಲ್ಲಿ ವೇಗವಾಗಿ ಬಂದ ಇಬ್ಬರು, ಕಾರನ್ನು ಓವರ್ ಟೇಕ್ ಮಾಡಿ ಮುಂದೆ ಹೋಗಿದ್ದಾರೆ. ಸ್ವಲ್ಪ ದೂರ ಹೋಗಿ ಸ್ಕೂಟರ್ ತಿರುಗಿಸಿಕೊಂಡು ಬಂದು ಕಾರನ್ನು ಅಡ್ಡಗಟ್ಟಿದ್ದಾರೆ.

ಆಗ ರಾಜೀವ್ ಕಾರಿನಿಂದ ಇಳಿಯುತ್ತಿದ್ದಂತೆ ಪುಂಡರು, ಯಾಕ್ರೋಲೇ ಕಾರನ್ನು ಸರಿಯಾಗಿ ಓಡಿಸಲು ಬರುವುದಿಲ್ಲವಾ ಎಂದು ಕ್ಯಾತೆ ತೆಗೆದಿದ್ದಾರೆ. ಅಲ್ಲದೆ ನಾವೇನು ತಪ್ಪು ಮಾಡಿದ್ದೇವೆ ಎಂದು ಕೇಳಿದ್ದಕ್ಕೆ ಓರ್ವ ಪುಂಡ, ನನಗೆ ಎದುರು ಮಾತನಾಡುತ್ತೀಯಾ ಎಂದು ಏಕಾಏಕಿ ಯಾವುದೋ ಆಯುಧದಿಂದ ರಾಜೀವ್ ಕುತ್ತಿಗೆ ಮೇಲಿಟ್ಟು ಎಳೆದಿದ್ದಾನೆ. ಗಾಬರಿಯಿಂದ ಹೀಗೆಲ್ಲಾ ಮಾಡಬೇಡಿ ಎಂದು ಕೇಳಿಕೊಂಡರೂ ಮತ್ತೆ ಎದುರು ಮಾತನಾಡುತ್ತೀಯಾ ಎಂದು ಆಯುಧವನ್ನು ಕೈಮೇಲಿಟ್ಟು ಎಳೆದಿದ್ದಾನೆ. ರಕ್ಷಣೆಗೆ ಮುಂದಾದ ತೇಜಸ್‌ಗೆ ಮತ್ತೋರ್ವ ಪುಂಡ ಕಪಾಳಕ್ಕೆ ಹೊಡೆದು, ಬೆದರಿಸಿದ್ದಾನೆ.

ಪುಂಡರ ಕ್ರೌರ್ಯದಿಂದ ಬೆದರಿದ ರಾಜೀವ್ ಹಾಗೂ ತೇಜಸ್ ಭಯದಿಂದ ಓಡಿದ್ದಾರೆ. ಅಷ್ಟರಲ್ಲಿ ರಸ್ತೆಯಲ್ಲಿ ಯಾರೋ ಬರುವುದನ್ನು ಗಮನಿಸಿದ ಪುಂಡರು, ಸ್ಕೂಟರ್ ಹತ್ತಿ ಪರಾರಿಯಾಗಿದ್ದಾರೆ. ಬಳಿಕ ಸ್ನೇಹಿತ ತೇಜಸ್, ರಾಜೀವ್‌ನನ್ನು ಆಸ್ಪತ್ರೆಗೆ ಕರೆದೊಯ್ದು ದಾಖಲಿಸಿದ್ದಾರೆ.

ಈ ಸಂಬಂಧ ರಾಜೀವ್ ಆಸ್ಪತ್ರೆಯಲ್ಲಿ ನೀಡಿದ ಹೇಳಿಕೆಯನ್ವಯ ಮಂಡಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಕಾರು ಅಡ್ಡಗಟ್ಟಿ ಆಯುಧದಿಂದ ಗಾಯಗೊಳಿಸಿ ಬೆದರಿಸಿದ ಪುಡಾರಿಗಳ ಬಂಧನಕ್ಕೆ ಕ್ರಮ ವಹಿಸಿದ್ದಾರೆ.

ರಾಷ್ಟ್ರಪತಿ ದ್ರೌಪದಿ ಮುರ್ಮು ಭೇಟಿಯಾದ ವಿಶ್ವಕಪ್ ಮಹಿಳಾ ಚಾಂಪಿಯನ್ಸ್



ವಿಶ್ವಕಪ್ ಗೆದ್ದ ಟೀಂ ಇಂಡಿಯಾ ಆಟಗಾರ್ತಿಯರು ರಾಷ್ಟ್ರಪತಿ ಭವನದಲ್ಲಿ ದ್ರೌಪದಿ ಮುರ್ಮು ಅವರನ್ನು ಭೇಟಿಯಾದರು

ನವದೆಹಲಿ, ನ.6– 2025ರ ಐಸಿಸಿ ಮಹಿಳಾ ಕ್ರಿಕೆಟ್ ವಿಶ್ವಕಪ್ ವಿಜೇತ ಟೀಂ ಇಂಡಿಯಾ ಆಟಗಾರ್ತಿಯರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿಯಾದರು.

ಗುರುವಾರ ಟೀಂ ಇಂಡಿಯಾ ಆಟಗಾರ್ತಿಯರು ರಾಷ್ಟ್ರಪತಿ ಭವನದಲ್ಲಿ ದ್ರೌಪದಿ ಮುರ್ಮು ಅವರನ್ನು ಭೇಟಿಯಾದರು. ಈ ವೇಳೆ ಮುರ್ಮು ತಂಡವನ್ನು ಅಭಿನಂದಿಸಿ, ಇತಿಹಾಸ ಸೃಷ್ಟಿಸುವ ಮೂಲಕ ಮುಂದಿನ ಯುವಪೀಳಿಗೆಗೆ ಮಾದರಿಯಾಗಿದ್ದೀರಿ. ನೀವೆಲ್ಲ ಬೇರೆ–ಬೇರೆ ಪ್ರದೇಶ, ವಿಭಿನ್ನ ಹಿನ್ನೆಲೆಗಳಿಂದ ಬಂದು ಇಂದು ಭಾರತದ ಪರವಾಗಿ ಆಡಿದ್ದೀರಿ. ನಿಮ್ಮನ್ನು ನೋಡಿದರೆ ಭಾರತದ ಪ್ರತಿಬಿಂಬ ಎನ್ನುವಂತೆ ಕಾಣುತ್ತದೆ ಎಂದು ತಿಳಿಸಿದರು. ಈ ವೇಳೆ ರಾಷ್ಟ್ರಪತಿಯೊಂದಿಗೆ ಟೀಂ ಇಂಡಿಯಾದ ಆಟಗಾರ್ತಿಯರೆಲ್ಲರೂ ಗ್ರೂಪ್ ಫೋಟೋ ತೆಗೆಸಿಕೊಂಡರು. ಬಳಿಕ ಮುರ್ಮು ಅವರಿಗೂ ಕೂಡ ಆಟಗಾರ್ತಿಯರೆಲ್ಲರೂ ಸಹಿ ಹಾಕಿದ ಜೆರ್ಸಿಯನ್ನು ಉಡುಗೊರೆಯಾಗಿ ನೀಡಿದರು.

ಭೈರವ ಜನ್ಮಾಷ್ಟಮಿ: ಯಜ್ಞ–ಯಾಗ



ಮೊದಲ ಬಾರಿಗೆ ಮೈಸೂರಿಗೆ ಆಗಮಿಸಿದ ವಸಂತ ವಿಜಯಾನಂದಗಿರಿಜೀ ಮಹಾರಾಜ್ ಅವರನ್ನು ವಿವಿಧ ಕಲಾತಂಡಗಳು ಸ್ವಾಗತಿಸಿದವು.

ಮೈಸೂರು, ನ6(ವಿವಿಹೆಚ್)– ಮೈಸೂರಿನ ಪುರಭವನ ಆವರಣದಲ್ಲಿ ಕೃಷ್ಣಗಿರಿ ಸತ್ಯ ಪೀಠ ಭಕ್ತ ಮಂಡಳಿ ವತಿಯಿಂದ ಆಯೋಜನೆಯಾಗಿರುವ ಕಷ್ಟ ಭಂಜನ (ಕಷ್ಟ ನಾಶಕ) ಭೈರವ ಜನ್ಮಾಷ್ಟಮಿ ಕಾರ್ಯಕ್ರಮದ ಮೊದಲ ದಿನ ಯಜ್ಞ, ಯಾಗ ಕಾರ್ಯಕ್ರಮಗಳು ಭಕ್ತಿ–ಭಾವದಿಂದ ನಡೆದವು.

ಮೈಸೂರಿಗೆ ಆಗಮಿಸಿದ ಮಹಾರಾಜ್ ಅವರನ್ನು, ಭಕ್ತ ಮಂಡಳಿ ಅದ್ದೂರಿಯಾಗಿ ಸ್ವಾಗತಿಸಿತು. ಅರಮನೆಯ ಕೋಟೆ ಆಂಜನೇಯ ಸ್ವಾಮಿ ದೇವಾಲಯ ಮುಂಭಾಗ ಅಪಾರ ಭಕ್ತ ಸಮೂಹ ಸೇರಿತ್ತು. ವೀರಗಾಸೆ, ಉತ್ತರ ಭಾರತದ ಸೀರವಿ ಗೇರ್ ನೃತ್ಯ ಸೇರಿದಂತೆ ವಿವಿಧ ಕಲಾ ತಂಡಗಳು ಮೆರವಣಿಗೆಯಲ್ಲಿ ಭಾಗವಹಿಸಿದ್ದವು. ಜೊತೆಗೆ 12 ಮಹಿಳೆಯರು ವಿಶೇಷ ಕುಂಭ ಕಳಸಗಳೊಂದಿಗೆ ಮೆರವಣಿಗೆಗೆ ಮೆರಗು ತಂದರು.

ಮೆರವಣಿಗೆ ಮೂಲಕ ಪುರಭವನ ಆವರಣ ತಲುಪಿದ ಮಹಾರಾಜ್, ವಿಭಿನ್ನ ಪೂಜಾ, ಭಕ್ತಿ, ಯಜ್ಞ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡರು. ದೇಶದ ಸುಭಿಕ್ಷೆಗಾಗಿ ಪ್ರಾರ್ಥಿಸಿದರು.

ಮೈಸೂರಲ್ಲಿ 8 ದಿನಗಳ ಕಾಲ ನಡೆಯುವ ಕಷ್ಟ ಭಂಜನ ಭೈರವ ಜನ್ಮಾಷ್ಟಮಿ ಕಾರ್ಯಕ್ರಮಕ್ಕೆ ಯಾವುದೇ ಜಾತಿ, ಪಂಥ ಭೇದಭಾವಗಳಿಲ್ಲದೆ ಭಾಗವಹಿಸಬಹುದಾಗಿದೆ ಎಂದು ಆಯೋಜಕ ದೀಪಕ್ ಜೈನ್ ಮನವಿ ಮಾಡಿದ್ದಾರೆ.

ಕಷ್ಟ ಭಂಜನ (ಕಷ್ಟನಾಶಕ) ಭೈರವ ಜನ್ಮಾಷ್ಟಮಿ ಪ್ರಯುಕ್ತ ಮೈಸೂರಿನಲ್ಲಿ ಇದೇ ಮೊದಲ ಬಾರಿಗೆ 8 (ನ.5 ರಿಂದ 12) ದಿನಗಳ ಕಾಲ ಆಯೋಜನೆಯಾಗಿರುವ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಕೃಷ್ಣಗಿರಿ ಪೀಠಾಧಿಪತಿ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ 1008 ಆಚಾರ್ಯ ಶ್ರೀ ವಸಂತ ವಿಜಯಾನಂದಗಿರಿಜೀ ಮಹಾರಾಜ್ ವಹಿಸಿಕೊಂಡಿದ್ದಾರೆ.

ಕಾರ್ಯಕ್ರಮದಲ್ಲಿ ಬಿ.ಎ.ಕೈಲಾಶಚಂದ್ ಜೈನ, ದೀಪಕ್ ಬೊಹರಾ, ಬಿ.ಕೆ. ಚಂದನ್ ಕುಮಾರ್ ಜೈನ, ಕೃಷ್ಣಗಿರಿ ಶಕ್ತಿ ಪೀಠದ ಭರತ್ ಜೈನ, ಅಜಯ್ ಕುಮಾರ್ ಜೈನ ಇನ್ನಿತರರು ಪಾಲ್ಗೊಂಡಿದ್ದರು.

ಹರಿಯಾಣ ಮತಗಳ್ಳತನ ಆರೋಪ; ಜನರ ವಂಚಿಸಲು ನನ್ನ ಹೆಸರು ಬಳಕೆ

ರಾಹುಲ್ ಉಲ್ಲೇಖಿಸಿದ್ದ ಬ್ರೆಜಿಲ್ ಮಾಡೆಲ್ ಲಾರಿಸ್ಸಾ ಸ್ಪಷ್ಟನೆ!



ಲಾರಿಸ್ಸಾ

ನವದೆಹಲಿ, ನ.6– ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಹರಿಯಾಣದಲ್ಲಿ ಭಾರೀ ಪ್ರಮಾಣದಲ್ಲಿ ಮತಗಳ್ಳತನ ನಡೆದಿರುವ ಆರೋಪ ಮಾಡಿ, ಉಲ್ಲೇಖಿಸಿದ್ದ ಬ್ರೆಜಿಲಿಯನ್ ಮಾಡೆಲ್ ಫೋಟೋ ಇದೀಗ ಭಾರೀ ಸದ್ದು ಮಾಡುತ್ತಿದೆ. ಈ ನಡುವೆ ಮಾಡೆಲ್ ಶಾಕಿಂಗ್ ಹೇಳಿಕೆಯೊಂದನ್ನು ನೀಡಿದ್ದಾರೆ.

ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ವೀಡಿಯೊ ಹಂಚಿಕೊಂಡಿರುವ ರಾಹುಲ್ ಉಲ್ಲೇಖಿಸಿರುವ ಬ್ರೆಜಿಲಿಯನ್ ಮಾಡೆಲ್ ಲಾರಿಸ್ಸಾ ಬೊನೆಸಿ, ಸ್ನೇಹಿತರೆ, ನಾನು ನಿಮಗೆ ಒಂದು ತಮಾಷೆ ಹೇಳಲಿದ್ದೇನೆ. ಅವರು (ರಾಹುಲ್ ಗಾಂಧಿ) ನನ್ನ ಹಳೆಯ ಚಿತ್ರವನ್ನು ಬಳಸುತ್ತಿದ್ದಾರೆ. ಆ ಫೋಟೊ ತೆಗೆದಾಗ ನನಗೆ ಸುಮಾರು 18–20 ವರ್ಷ ವಯಸ್ಸಾಗಿರಬೇಕು. ಇದು ಚುನಾವಣೆಯೋ, ಭಾರತದಲ್ಲಿ ಮತದಾನದ ಬಗ್ಗೆಯೋ ನನಗೆ ತಿಳಿದಿಲ್ಲ. ಭಾರತದಲ್ಲಿ ಜನರನ್ನು ವಂಚಿಸಲು ನನ್ನನ್ನು ಭಾರತೀಯ ಎಂದು ಚಿತ್ರಿಸುತ್ತಿದ್ದಾರೆ ಎಂದಿದ್ದಾರೆ.

ಹುಟ್ಟುಹಬ್ಬದ ಶುಭಾಶಯ



ಯುವ ಉದ್ಯಮಿ ಹಾಗೂ ಚಲನಚಿತ್ರ ನಿರ್ಮಾಪಕರಾದ ಸಂದೇಶ್ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅವರನ್ನು, ನಿರ್ದೇಶಕ ಮಹೇಶ್, ಚಲನಚಿತ್ರ ಕಾರ್ಮಿಕರಾದ ಪ್ರಕಾಶ್, ರವಿ, ಇಟ್ಟಿಗೆಗೂಡಿನ ಗೋಪಾಲ್ ರಾಜ ಅರಸ್, ಹೇಮಂತ್ ಕುಮಾರ್, ರವಿಕುಮಾರ್, ದರ್ಶನ್, ಬಸವರಾಜ್ ಮತ್ತಿತರರು ಅಭಿನಂದಿಸಿ, ಶುಭಾಶಯ ಕೋರಿದರು.

'ಗ್ರೇಟರ್ ಮೈಸೂರು' ಸ್ವಾಗತಾರ್ಹ, ಫ್ಲೈ ಓವರ್ ಅನಗತ್ಯ



ಮೈಸೂರು, ನ.6– 'ಗ್ರೇಟರ್ ಮೈಸೂರು' ಯೋಜನೆಯನ್ನು ಸ್ವಾಗತಿಸಿರುವ ಮೈಸೂರು ಹೋಟೆಲ್ ಮಾಲೀಕರ ಸಂಘ, ನಗರದ ಹೃದಯ ಭಾಗದಲ್ಲಿ ಫ್ಲೈ ಓವರ್ ನಿರ್ಮಾಣಕ್ಕೆ ವಿರೋಧ ವ್ಯಕ್ತಪಡಿಸಿದೆ.

ರಾಜ್ಯ ಸರ್ಕಾರದ ಈ ಪ್ರಸ್ತಾವನೆಗಳ ಬಗ್ಗೆ ಪತ್ರಿಕಾ ಹೇಳಿಕೆ ನೀಡಿರುವ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ನಗರದ ಝಾನ್ಸಿರಾಣಿ ಲಕ್ಷ್ಮೀಬಾಯಿ(ಜೆಎಲ್‌ಬಿ) ರಸ್ತೆ ಹಾಗೂ ವಿನೋಬಾ ರಸ್ತೆಗಳಲ್ಲಿ ಉದ್ದೇಶಿತ ಮೇಲ್ಸೇತುವೆ ನಿರ್ಮಾಣ ಯೋಜನೆಯನ್ನು ಕೈಬಿಡಬೇಕೆಂದು ಆಗ್ರಹಿಸಿದ್ದಾರೆ.

ನಗರದ ರಿಂಗ್ ರಸ್ತೆಯಲ್ಲಿ ಹಿನಕಲ್‌ನ ಜಂಕ್ಷನ್‌ನಲ್ಲಿ ಈಗಾಗಲೇ ಫ್ಲೈ ಓವರ್ ಇದೆ. ಹೀಗೆಯೇ ರಿಂಗ್ ರಸ್ತೆಯಲ್ಲಿ ಮಣಿಪಾಲ್ ಆಸ್ಪತ್ರೆ ಜಂಕ್ಷನ್, ಸಾತಗಳ್ಳಿ, ದೇವೇಗೌಡ ವೃತ್ತ ಆಲನಹಳ್ಳಿ ವೃತ್ತ, ಎಪಿಎಂಸಿ, ಶ್ರೀರಾಂಪುರ, ಬೋಗಾದಿ ಜಂಕ್ಷನ್‌ನಲ್ಲಿ ಶೀಘ್ರದಲ್ಲೇ ಫ್ಲೈ ಓವರ್ ನಿರ್ಮಿಸಿದರೆ ಅನುಕೂಲವಾಗಲಿದೆ. ಆದರೆ ನಗರದ ಹೃದಯ ಭಾಗದ ಪಾರಂಪರಿಕ ರಸ್ತೆಗಳಲ್ಲಿ ಫ್ಲೈ ಓವರ್ ನಿರ್ಮಾಣ ಸೂಕ್ತವಲ್ಲ. ಇದರಿಂದ ನಗರದ ಪಾರಂಪರಿಕ ಸೌಂದರ್ಯದ ಜೊತೆಗೆ ಸುಂದರ ಪರಿಸರವೂ ಹಾಳಾಗುತ್ತದೆ. ಇನ್ನೂ ಐವತ್ತು ವರ್ಷಗಳವರೆಗೂ ಈ ಮೇಲ್ಸೇತುವೆಗಳು ಅಗತ್ಯವಿಲ್ಲ ಎಂದು ತಿಳಿದುಬಂದಿದೆ. ಹಾಗಾಗಿ ಪಾರಂಪರಿಕ ರಸ್ತೆಗಳಲ್ಲಿ ಫ್ಲೈ ಓವರ್ ನಿರ್ಮಾಣದ ಚಿಂತನೆ ಕೈಬಿಟ್ಟು, ವೈಜ್ಞಾನಿಕವಾಗಿ ಗ್ರೇಟರ್ ಮೈಸೂರು ಅನುಷ್ಠಾನಗೊಳಿಸುವಂತೆ ಮನವಿ ಮಾಡಿದ್ದಾರೆ.

ವಿವಿಧ ಸೌಲಭ್ಯಗಳಿಗೆ ಅರ್ಜಿ ಆಹ್ವಾನ

ಮೈಸೂರು, ನ.6– 2025–26ನೇ ಸಾಲಿಗೆ ಅರ್ಹ ವಿಕಲಚೇತನ ವ್ಯಕ್ತಿಗಳಿಗೆ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ವಿವಿಧ ಸೌಲಭ್ಯಗಳನ್ನು 13 ಫಲಾನುಭವಿ ಆಧಾರಿತ ಯೋಜನೆಗಳನ್ನು ಡಿ.ಬಿ.ಟಿ (ನೇರ ನಗದು ವರ್ಗಾವಣೆ)ಗಾಗಿ ವಿವಿಧ ಯೋಜನೆಗಳಿಗೆ ಫಲಾನುಭವಿಗಳು ಆನ್ಲೈನ್ ಮೂಲಕ https://sevasindhu.karnataka.gov.in/Sevasindhu/Kannada ಪೋರ್ಟಲ್‌ನಲ್ಲಿ ನ.15 ರ ಒಳಗಾಗಿ ಅರ್ಜಿ ಸಲ್ಲಿಸಬಹುದು.

ಆಧಾರ ಯೋಜನೆ, ವೈದ್ಯಕೀಯ ಪರಿಹಾರ ನಿಧಿ ಯೋಜನೆ, ಪ್ರತಿಭಾವಂತ ಅಂಗವಿಕಲ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ಯೋಜನೆ, ನಿರುದ್ಯೋಗ ಭತ್ಯೆ, ಶಿಶುಪಾಲನಾ ಭತ್ಯೆ, ಮರಣ ಪರಿಹಾರ ನಿಧಿ, ಪ್ರತಿಭೆ ಯೋಜನೆ, ಅಂಧ ವಿದ್ಯಾರ್ಥಿಗಳಿಗೆ ಟಾಕಿಂಗ್ ಲ್ಯಾಪ್‌ಟಾಪ್ ಯೋಜನೆ, ದೃಷ್ಟಿದೋಷ ಹೊಂದಿರುವ ವಿಕಲಚೇತನರಿಗೆ ಬ್ರೈಲ್‌ಕಿಟ್ ಯೋಜನೆ, ದೈಹಿಕ ವಿಕಲಚೇತನರಿಗೆ ಯಂತ್ರ ಚಾಲಿತ ದ್ವಿಚಕ್ರ ವಾಹನ ಯೋಜನೆ, ಶ್ರವಣದೋಷವುಳ್ಳ ವ್ಯಕ್ತಿಗಳಿಗೆ ಸ್ವಯಂ ಉದ್ಯೋಗಕ್ಕಾಗಿ ಹೊಲಿಗೆ ಯಂತ್ರ ಯೋಜನೆ, ಸಾಧನ ಸಲಕರಣೆಗಳ ಯೋಜನೆ, ವಿಕಲಚೇತನ ವ್ಯಕ್ತಿಗಳಿಗೆ ಬ್ಯಾಟರಿ ಚಾಲಿತ ವೀಲ್ ಚೇರ್ ಯೋಜನೆಗಳಿಗೆ ಅರ್ಜಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ತಾಲೂಕಿನ ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರನ್ನು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಛೇರಿಯ ವಿಕಲಚೇತನರ ಸಹಾಯ ವಾಣಿ ಕೇಂದ್ರದ ದೂ.ಸಂ.: 0821–2490333 ನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೋಸ್ ಆಲುಕ್ಕಾಸ್ ಮೈಸೂರು ಶೋ ರೂಂ ವಾರ್ಷಿಕೋತ್ಸವ

ನಾಳೆ ಅದ್ದೂರಿ ಸಮಾರಂಭ ; ವಿಶೇಷ ಆಫರ್‌ಗಳ ಕೊಡುಗೆ



ಜೋಸ್ ಆಲುಕ್ಕಾಸ್

ಮೈಸೂರು,ನ.6(ಪಿಎಂ)– ಜೋಸ್ ಆಲುಕ್ಕಾಸ್ ಮೈಸೂರು ಶೋ ರೂಂ 15 ವರ್ಷಗಳ ಸಂಭ್ರಮ ಆಚರಿಸುತ್ತಿದ್ದು, ನ.8ರಂದು ಮೈಸೂರಿನ ಬಿಎನ್ ರಸ್ತೆಯಲ್ಲಿರುವ ಶೋ ರೂಂನಲ್ಲಿ ಅದ್ದೂರಿ ಸಮಾರಂಭ ಆಯೋಜಿಸಲಾಗಿದೆ.

ಅಲ್ಲದೆ, ಗ್ರಾಹಕರ ಆಪೇಕ್ಷೆಗೆ ಅನುಗುಣವಾಗಿ ಚಿನ್ನಾಭರಣ ಒದಗಿಸಲು ನ.8 ರಿಂದ 14ರವರೆಗೆ ವಿಶೇಷ ಆಫರ್ ಗಳನ್ನು ಜಾರಿಗೊಳಿಸಲಾಗಿದೆ. 1 ಲಕ್ಷ ಮೌಲ್ಯದ ಚಿನ್ನಾಭರಣಗಳನ್ನು ಖರೀದಿಸಿದರೆ ಚಿನ್ನದ ನಾಣ್ಯ ಉಚಿತವಾಗಿ ದೊರೆಯಲಿದೆ. ವಜ್ರಗಳ ಸಂಬಂಧ ಶೇ.20ರಷ್ಟು ರಿಯಾಯಿತಿ ಮತ್ತು ಪ್ರತಿ ಕ್ಯಾರೆಟ್‌ಗೆ 500 ಮಿಲಿಗ್ರಾಂ ಚಿನ್ನದ ನಾಣ್ಯ ಉಚಿತವಾಗಿ ನೀಡಲಾಗುತ್ತದೆ.

ಪ್ಲಾಟಿನಂ ಸಂಬಂಧ ಮೇಕಿಂಗ್ ಚಾರ್ಜಸ್ ಮೇಲೆ ಶೇ.15ರಷ್ಟು ರಿಯಾಯಿತಿ ಕಲ್ಪಿಸಲಾಗುತ್ತದೆ. ಚಿನ್ನದ ಎಕ್ಸ್‌ಚೇಂಜ್ ಮೇಲೆ ಶೇ.0 ಕಡಿತ ಇದ್ದು, ಗ್ರಾಹಕರು ಹಳೆಯ 22 ಕ್ಯಾರೆಟ್ ಚಿನ್ನದ ಆಭರಣ ಗಳನ್ನು ಇತ್ತೀಚಿನ ವಿನ್ಯಾಸಗಳ ಹೊಸ ಹೆಚ್‌ಯುಐಡಿ ಚಿನ್ನಾಭರಣಗಳೊಂದಿಗೆ ಎಕ್ಸ್‌ಚೇಂಜ್ ಮಾಡಿಕೊಳ್ಳಬಹುದು. ಇದಲ್ಲದೆ, ಜೋಸ್ ಆಲುಕ್ಕಾಸ್ ಚಿನ್ನದ ಉಳಿತಾಯ ಯೋಜನೆಗಳು ಇದ್ದು, ತೂಕ ಮತ್ತು ಮೊತ್ತದ ಆಧಾರದಲ್ಲಿ 11 ತಿಂಗಳ ಚಿನ್ನ ಖರೀದಿ ಯೋಜನೆಗಳೂ ಇವೆ.

ಜೋಸ್ ಆಲುಕ್ಕಾಸ್ ಮೈಸೂರಿನ ಭಾಗವಾಗಿ 15 ಸುವರ್ಣ ವರ್ಷ ಕಳೆದಿದೆ. ಈ ಮೈಲಿಗಲ್ಲು ಆಚರಿಸುತ್ತಿರುವ ಈ ಸಂದರ್ಭದಲ್ಲಿ ಜೋಸ್ ಆಲುಕ್ಕಾಸ್ ಮೈಸೂರಿನ ಜನತೆಗೆ ಕೃತಜ್ಞವಾಗಿರಲಿದೆ. ಈ ಸಂದರ್ಭದಲ್ಲಿ ಚಿನ್ನ ಮತ್ತು ವಜ್ರದ ಆಭರಣಗಳ ನಮ್ಮ ಇತ್ತೀಚಿನ ಸಂಗ್ರಹಗಳೊಂದಿಗೆ ನಾವು ಗ್ರಾಹಕರಿಗೆ ಅತ್ಯಾಕರ್ಷಕ ವಾರ್ಷಿಕೋತ್ಸವ ಆಫರ್‌ಗಳನ್ನು ನೀಡುತ್ತಿದ್ದೇವೆ ಎಂದು ಜೋಸ್ ಆಲುಕ್ಕಾಸ್ ಗ್ರೂಪ್ ಛೇರ್ಮನ್ ಜೋಸ್ ಆಲುಕ್ಕಾಸ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಜೋಸ್ ಆಲುಕ್ಕಾಸ್ ಮೈಸೂರು ಶೋ ರೂಂ.

ನಕ್ಕರೆ ಅದೇ ಸ್ವರ್ಗ

ಟೀಚರ್ : ಯಾಕೋ ಚಡ್ಡಿ ಹಾಕಿಕೊಳ್ಳದೆ ಶಾಲೆಗೆ ಬಂದಿದ್ದೀಯಾ? ಹೋಗಿ ನಿಮ್ಮ ಅವ್ವನಿಗೆ ಹೇಳು?
ಗುಂಡ : (ಮಾರನೆ ದಿನ) ಹೋಗಿ ಹೇಳಿದೆ ನಮ್ಮ ಅವ್ವನಿಗೆ
ಟೀಚರ್ : ಏನಂದ್ರು ನಿಮ್ಮ ಅವ್ವ?
ಗುಂಡ : ಮೇಷ್ಟ್ರಗೆ ಮುಖ ನೋಡ್ಕೊಂಡು ಪಾಠ ಮಾಡೋಕೆ ಹೇಳು ಅಂದ್ರು

ಮೈಸೂರು ಮಿತ್ರ
ಶುಕ್ರವಾರ, 7 ನವೆಂಬರ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ......

ಹುಟ್ಟು ಎಲ್ಲೋ ಸಾವು ಎಲ್ಲೋ, ಬದುಕಿನ ಪಯಣ ಇನ್ನೆಲ್ಲೋ, ಆದರೆ ಪಯಣದ ದಾರಿಯಲ್ಲಿ ಸಿಗುವ ಸ್ನೇಹ, ಪ್ರೀತಿ, ವಿಶ್ವಾಸ ಮಾತ್ರ ಮನಸ್ಸಿಗೆ ತುಂಬಾ ಹತ್ತಿರವಾಗಿರುತ್ತದೆ. ನೆನಪುಗಳೊಂದೇ ಇಲ್ಲಿ ಶಾಶ್ವತ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಚಿಂತೆ ಮಾಡಿದರೆ ಸಂತೆ ಸಾಗೀತೆ?

ನಿಮ್ಮ ಪತ್ರಗಳು

ಗುಂಡಿಮಯವಾಗಿರುವ ಆದಿಚುಂಚನಗಿರಿ ರಸ್ತೆ

ಮಾನ್ಯರೆ,



ಮೈಸೂರಿನ ಕುವೆಂಪು ನಗರದ ಪ್ರತಿಷ್ಠಿತ ಆದಿಚುಂಚನ ಗಿರಿ ಮುಖ್ಯ ರಸ್ತೆಯ ಕಾವೇರಿ ಶಾಲೆ, ಶ್ರೀಚಂದ್ರ ಮೌಳೇಶ್ವರ ದೇವಾಲಯ ಮತ್ತು ಮುಡಾ ಕಮಿಷನರ್ ಮನೆಯ ಮುಂಭಾಗದ ಕಾವೇರಿ ಶಾಲೆಯ ಸರ್ಕಲ್, ಆದಿಚುಂಚನ ಗಿರಿ ರಸ್ತೆಯಿಂದ ಜ್ಞಾನ ಗಂಗಾ ಶಾಲೆಯ ಕಡೆಗೆ ಹೋಗುವ ರಸ್ತೆಯನ್ನು, ಒಳ ಚರಂಡಿ ಪೈಪ್‌ಲೈನ್ ಅಳವಡಿಸಿ ಕಳೆದ ಆರು ತಿಂಗಳ ಹಿಂದೆ ಅಗೆದಿರುವುದರಿಂದ ಈ ರಸ್ತೆಯು ಗುಂಡಿಮಯವಾಗಿದೆ.

ಈ ಕಾರಣದಿಂದ ಪ್ರತಿ ದಿನವೂ ಇಲ್ಲಿ ಒಂದಿಲ್ಲೊಂದು ರೀತಿಯ ಅಪಘಾತಗಳು ಸಂಭವಿಸುತ್ತಲೇ ಇರುತ್ತದೆ. ಈ ರಸ್ತೆಯಲ್ಲೇ ಬಹುತೇಕ ನಗರ ಪಾಲಿಕೆಯ ಅಧಿಕಾರಿಗಳು ಸಂಚರಿಸುತ್ತಿದ್ದರೂ, ಕನಿಷ್ಠ ಪಕ್ಷ ಈ ಗುಂಡಿಗಳನ್ನು ಮುಚ್ಚುವಷ್ಟು ಕನಿಷ್ಠ ಅರಿವು ನಗರಪಾಲಿಕೆ ಅಧಿಕಾರಿಗಳಿಗೆ ಇಲ್ಲವೇ? ಇದು ಕೇವಲ ಆದಿಚುಂಚನಗಿರಿ ರಸ್ತೆಯ ಸಮಸ್ಯೆಯಲ್ಲ. ಒಳಚರಂಡಿ ವ್ಯವಸ್ಥೆಗಾಗಿ ರಸ್ತೆಯನ್ನು ಅಗೆದು ಹಾಗೆ ಬಿಟ್ಟಿರುವ ಹತ್ತಾರು ರಸ್ತೆಗಳು ಮೈಸೂರು ನಗರದಲ್ಲಿವೆ. ನಗರ ಭಾಗದಲ್ಲೇ ಇಷ್ಟೆಲ್ಲಾ ಸಮಸ್ಯೆಗಳಿದ್ದರೂ ಗ್ರೇಟರ್ ಮೈಸೂರು ಅನ್ನು ಮಾಡಲು ಹೊರಟಿರುವುದು ಯಾವ ಪುರುಷಾರ್ಥಕ್ಕಾಗಿ. ರಿಯಲ್ ಎಸ್ಟೇಟ್ ಉದ್ಯಮಿಗಳ ಜೇಬು ತುಂಬಿಸಲು ಗ್ರೇಟರ್ ಮೈಸೂರು ಮಾಡಲು ಹೊರಟಿರುವುದು ನಾಚಿಕೆಗೇಡಿನ ಸಂಗತಿ. ಮೊದಲು ಅಗೆದಿರುವ ರಸ್ತೆಗಳ ಗುಂಡಿಗಳನ್ನು ಮುಚ್ಚಿ ಸಾರ್ವಜನಿಕರು ಸರಾಗವಾಗಿ ಓಡಾಡಲು ಅನುಕೂಲ ಕಲ್ಪಿಸಿ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.

ಸರ್ಕಾರ ಸಾರಿಗೆ ಬಸ್‌ಗಳ ಮೇಲಿನ ಜಾಹೀರಾತುಗಳಿಗೆ ಕಡಿವಾಣ ಹಾಕಲಿ

ಮಾನ್ಯರೆ,

ತಂಬಾಕು ಉತ್ಪನ್ನಗಳಾದ ಪಾನ್ ಮಸಾಲ–ಗುಟ್ಕಾ ದಂತಹ ಪದಾರ್ಥಗಳು ಆರೋಗ್ಯಕ್ಕೆ ಹಾನಿಕರ ಎಂಬ ಅಂಶ ಗೊತ್ತಿದ್ದರೂ ಸರ್ಕಾರ ತನ್ನ ಸ್ವಾಮ್ಯದ ಸಾರಿಗೆ ಬಸ್ ಹಾಗೂ ರೈಲು ಗಾಡಿಗಳ ಮೇಲೆ ಭರಪೂರ ಪ್ರಚಾರಕ್ಕೆ ಅನುಮತಿ ನೀಡಿರುವುದು ವಿಪರ್ಯಾಸದ ಸಂಗತಿ. ಈ ಮಾದರಿಯ ಪ್ರಚಾರದಿಂದಾಗಿ ಸರ್ಕಾರವೇ ಈ ಉತ್ಪನ್ನಗಳಿಗೆ ಪರೋಕ್ಷವಾಗಿ ಮಾರುಕಟ್ಟೆ ಒದಗಿಸಿದಂತಾಗಿದೆ. ಅದರಲ್ಲೂ ವಿಮಲ್ ಎಂಬ ಬ್ರಾಂಡಿನ ಗುಟ್ಕಾ ಕಂಪನಿಯ ಜಾಹಿರಾತುಗಳಂತೂ ಬಹುತೇಕ ಸಾರಿಗೆ ಬಸ್‌ಗಳನ್ನು ಆಕ್ರಮಿಸಿಕೊಂಡು ಕಣ್ಣು ಕುಕ್ಕುವಂತೆ ರಾರಾಜಿಸುತ್ತಿದೆ.

ಇದು ಹಾನಿಕಾರಕ ಎಂದು ಗೊತ್ತಿದ್ದರೂ ಸಾರಿಗೆ ಬಸ್ ಹಾಗೂ ರೈಲುಗಾಡಿಗಳಲ್ಲಿ ಈ ಕಂಪನಿ ಉತ್ಪನ್ನಗಳ ಜಾಹಿರಾತಿಗೆ ಅನುಮತಿ ನೀಡುವ ಮೂಲಕ ಇದರ ಸೇವನೆಗೆ ಪ್ರಚೋದನೆ ನೀಡಿದಂತೆ ಕಂಡುಬರುತ್ತಿದೆ. ಹಿಂದಿ ಚಿತ್ರರಂಗದ ದಿಗ್ಗಜ ನಟರೆನಿಸಿಕೊಂಡಿರುವ ಶಾರೂಕ್ ಖಾನ್, ಅಜಯ್ ದೇವಗನ್, ಅಕ್ಷಯ್ ಕುಮಾರ್ ಸೇರಿದಂತೆ ಹಲವಾರು ಸೂಪರ್‌ಸ್ಟಾರ್ ನಟರು ಇದರ ಬ್ರಾಂಡ್ ರಾಯಭಾರಿ ಗಳಾಗಿರುವುದು ದುರ್ದೈವದ ಸಂಗತಿ.

ಟಿ.ವಿ ಚಾನಲ್‌ಗಳು, ಕೆಲ ವೃತ್ತಪತ್ರಿಕೆಗಳು ಸೇರಿದಂತೆ ಸಾಮಾಜಿಕ ಜಾಲತಾಣ, ಹೆದ್ದಾರಿಗಳ ಇಕ್ಕೆಲಗಳಲ್ಲಿ ಈ ಪ್ರಚಾರ ಫಲಕಗಳು ವಿಜೃಂಭಿಸುತ್ತಿದ್ದು ಸರ್ಕಾರ ಸಾರಿಗೆ ಬಸ್‌ಗಳ ಮೇಲಿನ ಜಾಹಿರಾತುಗಳಿಗೆ ಕಡಿವಾಣ ಹಾಕಲಿ.

– ಹೆಚ್.ಆರ್. ಪ್ರಸಾದ್, ವಿವೇಕಾನಂದನಗರ, ಮೈಸೂರು.

ಯುಜಿಡಿ ಪೈಪ್‌ಲೈನ್ ದುರಸ್ತಿಪಡಿಸಿ



ಮಾನ್ಯರೆ,

ಮೈಸೂರಿನ ಮಹಾನಗರ ಪಾಲಿಕೆಯಲ್ಲಿ ಜನಪ್ರತಿನಿಧಿಗಳಿಲ್ಲದೇ ಇರುವುದರಿಂದ ಯಾರಿಗೆ ಸಮಸ್ಯೆ ಹೇಳಬೇಕೆಂದು ತಿಳಿಯದೆ ಸಾಮಾನ್ಯ ಜನರು ಪರಿತಪಿಸುವಂತಾಗಿದೆ. ವಿಜಯ ನಗರ ಮೊದಲನೇ ಹಂತದ, 2ನೇ ಕ್ರಾಸ್, 10ನೇ ಮುಖ್ಯ ರಸ್ತೆಯಲ್ಲಿ ಇರುವ ಯುಜಿಡಿ ಪೈಪ್‌ಲೈನ್ ಒಡೆದುಹೋಗಿ ಬಹಳ ದಿನಗಳು ಕಳೆದಿದ್ದರೂ ದುರಸ್ತಿ ಕಾರ್ಯ ಆಗಿಲ್ಲ. ಈ ರಸ್ತೆಯಲ್ಲಿ ಸಂಚರಿಸುವವರು, ಅಕ್ಕಪಕ್ಕದಲ್ಲಿ ಇರುವ ಮನೆಗಳಲ್ಲಿ ವಾಸಿಸುವ ಜನತೆಯ ವೇದನೆ ಹೇಳತೀರದಾಗಿದೆ.

ಯುಜಿಡಿ ಪೈಪ್‌ಲೈನ್ ಹಾದು ಹೋಗಿರುವ ಪಕ್ಕದಲ್ಲಿ ಭಾರತೀಯ ವಿದ್ಯಾ ಭವನದ ಶಾಲೆ ಇದ್ದು, ಆಟದ ಮೈದಾನವೂ ಸಹ ಇದೆ. ಈ ಯುಜಿಡಿಯಿಂದ ಬರುವ ದುರ್ವಾಸನೆಯಿಂದ ಮಕ್ಕಳ ಆರೋಗ್ಯದಲ್ಲಿ ಏರುಪೇರಾಗುವುದರಲ್ಲಿ ಸಂಶಯವೇ ಇಲ್ಲ. ಆದಷ್ಟು ಬೇಗ ಮೈಸೂರು ಮಹಾನಗರ ಪಾಲಿಕೆಯ ಆಯುಕ್ತರು ಈ ಯುಜಿಡಿ ಪೈಪ್‌ಲೈನ್ ದುರಸ್ತಿಪಡಿಸುವ ಮೂಲಕ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಯನ್ನು ನಿವಾರಿಸಲು ಕ್ರಮಕೈಗೊಳ್ಳಬೇಕು.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

ಮನೆ ನೆಮ್ಮದಿಯ ಮಂದಿರವಾಗಿರಬೇಕು



"ಸಂಪಾದನೆಯ ಮೊತ್ತಕ್ಕೆ ಮೀರಿ ಖರ್ಚು ಎಂದಿಗೂ ಇರಕೂಡದು, ಇವತ್ತಿನ ಆಡಂಬರದ ಸುಖಕ್ಕಾಗಿ ಸಾಲ ಮಾಡುವುದು, ಮಾಡಿದ ಸಾಲವನ್ನು ಮುಂದೆ ತೀರಿಸುತ್ತೇನೆ ಎನ್ನುವುದು, ನಾಳೆಗೆ ನಾವೇ ತಂದುಕೊಳ್ಳುವ ಕಷ್ಟಗಳು. ಆದಾಯ ಮತ್ತು ವೆಚ್ಚಗಳು ನಮ್ಮ ಸುಖ–ದುಃಖಗಳನ್ನು ನಿರ್ಧರಿಸುವ ನಿರ್ದೇಶಕರು. ಆದ್ದರಿಂದ ಅವಶ್ಯಕತೆಗೆ ಅನುಗುಣವಾಗಿ, ಸಾಮರ್ಥ್ಯಕ್ಕೆ ತಕ್ಕಂತೆ ಮನೆಯನ್ನು ಕಟ್ಟಿಕೊಳ್ಳುವುದರಿಂದ ನೆಮ್ಮದಿ ಬದುಕು ಸಾಧ್ಯ


ಮಿರ್ಲೆ ಚಂದ್ರಶೇಖರ
ಲೇಖಕರು
ಮೊ: 9916129654

ಮಾನವನ ಜೀವನಕ್ಕೆ ಅನಿವಾರ್ಯ ಮೂಲಭೂತ ಅವಶ್ಯಕತೆಗಳಲ್ಲಿ ಮನೆಯು ಮೊದಲ ಆದ್ಯತೆಯ ಅವಶ್ಯಕತೆ. ನಮಗೆ ನಮ್ಮ ಕುಟುಂಬಕ್ಕೆ ಗಾಳಿ, ಮಳೆ ಬಿಸಿಲು, ಕಳ್ಳಕಾಕರು ಮತ್ತು ಕ್ರೂರ ಪ್ರಾಣಿಗಳಿಂದ ರಕ್ಷಣೆ ನೀಡುವ ತಾಣವೇ ಮನೆ. ಸಾವಿರಾರು ಮೈಲಿ ದೂರ ಸುತ್ತಿ, ಗುಡಿ–ಗೋಪುರಗಳನ್ನು ದರ್ಶನ ಮಾಡಿ ಬಂದರೂ, ನಮಗೆ ನಮ್ಮ ನಮ್ಮ ಮನೆಯೇ ಮಂತ್ರಾಲಯ. ಇಲ್ಲಿ ಸಿಗುವ ನೆಮ್ಮದಿ, ಮನಃಶಾಂತಿ ಬೇರೆಲ್ಲೂ ಸಿಗದು. ದೂರದೆಲ್ಲೆಲ್ಲೋ ಖುಷಿ ಸಿಗುವುದೆಂದು ಹುಡುಕಿಕೊಂಡು ಹೋಗುವಾಗಿನ ತವಕ, ಕಾತುರ ವಾಪಸ್ಸು ಬರುವಾಗ ಇರದು. ಯಾವಾಗಲೂ ಅಷ್ಟೇ ಕಣ್ಣಿಗೆ ದೂರದ ವಸ್ತುಗಳು ನುಣುಪು, ಸಮೀಪಿಸುತಿದ್ದಂತೆ ಅದರಲ್ಲಿನ ಒರಟು, ಏರು–ಪೇರು, ಹುಳುಕು ತಿಳಿಯಲಿದೆ. ಅದಕ್ಕಾಗಿಯೇ ನಮ್ಮ ಮನೆಯು ನಮಗೆ ನೆಮ್ಮದಿಯ ಮಂತ್ರಾಲಯ, ರಕ್ಷಾಲಯ. ವಾಸಿಸುವ ಮನೆಯು ಎಲ್ಲರ ಅತೀ ಪ್ರಮುಖ ಅವಶ್ಯಕತೆ. ಅದೂ ಬಾಡಿಗೆಗಿಂತ ಸ್ವಂತದ್ದಾದರೆ ಉತ್ತಮ.

ಬಾಡಿಗೆ ಮನೆಯೂ ಒಂದು ರೀತಿಯಲ್ಲಿ ಉತ್ತಮವೇ ಎನ್ನಬಹುದು. ಏಕೆಂದರೆ ನಮ್ಮ ಅಭಿಲಾಷೆಗಳು ಬದಲಾದಂತೆ ಹೊಸ ಹೊಸ ಮನೆಗಳನ್ನು ಬಾಡಿಗೆ ಪಡೆದು ಇರಬಹುದು. ಆದರೆ ಸ್ವಂತದ್ದಾದರೆ ಪದೇ ಪದೆ ಬದಲಾಯಿಸುವ ಪ್ರಮೇಯ ಇರುವುದಿಲ್ಲ. ಏನೇ ಆಗಲಿ ಸ್ವಂತ ಅಂತ ಒಂದು ಗೂಡು ಕಟ್ಟಿಕೊಳ್ಳಬೇಕು ಜೀವಿ ಆಗಿ ಹುಟ್ಟಿದ ಮೇಲೆ. ಬಾಡಿಗೆ ಮನೆ ಎನ್ನುವುದು, ಪ್ರತೀ ತಿಂಗಳೂ ಬಾಡಿಗೆ ಕೊಡುತ್ತಿದ್ದರೂ ಮನಸ್ಸಿನೊಳಗೆ ಒಂದು ರೀತಿಯ ನಮ್ಮದಲ್ಲದ ಸ್ವತ್ತು, ಹಂಗಿನ ಅರಮನೆ ಎನ್ನುವುದಿರುತ್ತದೆ.

ಪ್ರಾಣಿ–ಪಕ್ಷಿಗಳು ಸಹ ಆಶ್ರಯಕ್ಕೆ ಒಂದು ಗೂಡು ಕಟ್ಟಿಕೊಳ್ಳುವುದನ್ನು ಕಾಣುತ್ತೇವೆ. ಅವುಗಳಿಗೂ ವಿಶ್ರಾಂತಿ, ನೆಮ್ಮದಿ, ಸಂತಾನಾಭಿವೃದ್ಧಿ ಮತ್ತು ರಕ್ಷಣೆಗೆ ಬೇಕಾಗುತ್ತದೆ. ಇದಕ್ಕಾಗಿ ಮರದ ಮೇಲೆ ಗೂಡು, ನೆಲದೊಳಗೆ ಬಿಲಗಳ ರೂಪದಲ್ಲಿ ವೈರಿಗಳಿಂದ ರಕ್ಷಣೆ ಇರುವಂತೆ ವಿನ್ಯಾಸಗೊಳಿಸಿ ನಿರ್ಮಿಸಿಕೊಳ್ಳುತ್ತವೆ. ಆರಂಭದಲ್ಲಿ ಕಾಡು ಮನುಷ್ಯ ಪ್ರಾಣಿಗಳನ್ನು ಅನುಕರಿಸಿ, ಇವನೂ ಅವುಗಳಂತೆ ರಕ್ಷಣೆಗಾಗಿ ಸೊಪ್ಪು–ಸೆದೆಗಳಿಂದ ಗುಡಿಸಲುಗಳನ್ನು ಕಟ್ಟಿಕೊಂಡ. ಆದರೆ ನಂತರ ಮನೆ ನಿರ್ಮಾಣದಲ್ಲಿ ಅಗಾಧವಾದ ಬೆಳವಣಿಗೆಯನ್ನು ಕಂಡ. ಸಣ್ಣಪುಟ್ಟ ಗುಡಿಸಲುಗಳಲ್ಲಿ ವಾಸಿಸುತ್ತಿದ್ದವನು ಎಕರೆಗಟ್ಟಲೆ ವಿಸ್ತಾರದ, ಆಕಾಶದೆತ್ತರದ ಕಟ್ಟಡಗಳಲ್ಲಿ ಐಷಾರಾಮಿಯಾಗಿ ಜೀವಿಸುವ ತಂತ್ರಗಳನ್ನು ಕಂಡುಕೊಂಡ. ಪ್ರಾಣಿ–ಪಕ್ಷಿಗಳು ಅಭಿವೃದ್ಧಿಯನ್ನೇ ಕಾಣದೆ ಅದೇ ಗುಹೆಗಳು, ಗೂಡುಗಳು. ವಿನ್ಯಾಸದಲ್ಲಾಗಲೀ, ಆಕಾರದಲ್ಲಾಗಲೀ ಯಾವುದೇ ಬದಲಾವಣೆ ಮಾಡಿಕೊಳ್ಳದೆ ಹಾಗೆ ಜೀವಿಸುತ್ತಿವೆ. ಇಲ್ಲಿ ಒಂದು ವ್ಯತ್ಯಾಸವನ್ನು ಮಾತ್ರ ನಿಚ್ಚಳವಾಗಿ ಕಾಣಬಹುದು. ಅದುವೇ ಆವಿಷ್ಕಾರಗಳಿಂದಾಗಿ ಮನುಷ್ಯ ಆರೋಗ್ಯ ಮತ್ತು ನೆಮ್ಮದಿಗಳನ್ನು ಶಾಶ್ವತವಾಗಿ ಕಳೆದುಕೊಂಡಿರುವುದು ಸ್ಪಷ್ಟ. ಮೂಕ ಪ್ರಾಣಿಗಳು ಮಾತ್ರ ಏನನ್ನೂ ಅರಿಯದೇ ಸ್ವಚ್ಛಂದವಾಗಿ ಇವೆ. ಆದರೆ ಮನುಷ್ಯ ಮಾತ್ರ ಅವುಗಳ ನೆಲೆಗಳನ್ನು ಸಹ ಕಿತ್ತುಕೊಳ್ಳುತ್ತಿದ್ದಾನೆ. ಹಾಗಾಗಿಯೇ ಅವು ಕೆರಳಿ ಕಾಡಿನಿಂದ ನಾಡಿನೆಡೆಗೆ ದಾಳಿ ಇಡುತ್ತಿವೆ. ಈ ಒಂದು ಆತಂಕಕಾರಿ ಪರಿಸ್ಥಿತಿ ಮಾನವನ ದುರಾಸೆಯ ಫಲವೇ ಆಗಿದೆ.

ಪ್ರಾಣಿಪಕ್ಷಿಗಳು ತಮ್ಮ ಗುಹೆ, ಗೂಡುಗಳನ್ನು ನಿರ್ಮಿಸಿಕೊಳ್ಳುವಾಗ ಎಂದೂ ಅವು ದೈವದತ್ತವಾದ ಸೃಷ್ಟಿಯ ವಿರುದ್ಧ ನಿಲ್ಲುವುದಿಲ್ಲ. ಪ್ರಕೃತಿಯ ವಿರುದ್ಧವಾಗಿ ಯಾವುದೇ ಸಂಪನ್ಮೂಲವನ್ನು ಅಗೆದು, ಬಗೆದು ನಾಶ ಮಾಡುವುದಿಲ್ಲ. ಬರೇ ಒಣಗಿದ ಹುಲ್ಲು, ಕಡ್ಡಿಗಳನ್ನು ಬಳಸಿ ಪರಿಸರ ಪೂರಕ ಗೂಡು ನಿರ್ಮಿಸಿಕೊಳ್ಳುತ್ತವೆ. ತಿಳುವಳಿಕೆ, ಜ್ಞಾನವುಳ್ಳ ಮನುಷ್ಯ ಮಾತ್ರ ಬೃಹತ್ ಕಟ್ಟಡಗಳನ್ನು ನಿರ್ಮಿಸಲು ಸಿಮೆಂಟು, ಕಬ್ಬಿಣ, ಕಲ್ಲು, ಮರ ಮತ್ತು ಇತರೆ ವಸ್ತುಗಳಿಗಾಗಿ ಭೂಮಿಯಲ್ಲಿ ಸಿಗಬಹುದಾದ ಎಲ್ಲಾ ಖನಿಜ ಸಂಪತ್ತು ಮತ್ತು ಕಾಡನ್ನು ಕಡಿದು, ಭೂಮಿಯ ಅಗೆದು–ಬಗೆದು ಸೂರೆ ಮಾಡಿ, ಪ್ರಕೃತಿ ಸಮತೋಲನವನ್ನು ಹಾಳುಗೆಡವಿ ಪರಿಸರಕ್ಕೆ ಮಾರಕನಾಗಿದ್ದಾನೆ.

ಅನಾದಿ ಕಾಲದಿಂದಲೂ ವಾಸಕ್ಕೆ ನೆಲೆಯನ್ನು ಬಲು ಬುದ್ಧಿವಂತಿಕೆಯಿಂದ ನಿರ್ಮಿಸಿಕೊಂಡು ಬಂದಿರುವ ಮೃಗಗಳು ನಮ್ಮ ಇಂದಿನ ಆರ್ಕಿಟೆಕ್ಟ್‌ಗಳಿಗಿಂತ ಕಡಿಮೆ ಏನಿಲ್ಲ!. ಮನುಷ್ಯ ಇವುಗಳನ್ನೇ ಅನುಸರಿಸಿ ಇಂಜಿನಿಯರ್ ಎನಿಸಿಕೊಂಡನು. ಗೂಡುಕಟ್ಟಲು ಅವು ಆಯ್ಕೆ ಮಾಡುವ ಜಾಗ, ನಿರ್ಮಾಣ ಕ್ರಿಯೆ, ಒಂದೊಂದೇ ಹುಲ್ಲು ಕಡ್ಡಿಗಳನ್ನು ತಂದು ಗೂಡನ್ನು ಹೆಣೆಯುವ ಕೌಶಲ್ಯ ಅದ್ಭುತವೇ ಸರಿ!.

ಹಂಗಿನ ಅರಮನೆಗಿಂತ ಏಂಗಡದಗುಡಿ ಲೇಸು। ಭಂಗಪಟುಂಬ ಬಿಸಿ ಅನ್ನಕ್ಕಿಂತ ಆ। ತಂಗಳುವೇ ಲೇಸು.

ಪರರ ಹಂಗಿನಿಂದ ಅರಮನೆಯಲ್ಲಿರುವುದಕ್ಕಿಂತಲೂ ದೇವಸ್ಥಾನದಲ್ಲಿ ವಾಸಿಸುವುದು ಒಳ್ಳೆಯದು. ಹಾಗೇ ಅನ್ಯಾಯ, ಅಕ್ರಮದಿಂದ ಗಳಿಸಿದ ಬಿಸಿಬಿಸಿ ಅನ್ನಕ್ಕಿಂತ ನ್ಯಾಯವಾಗಿ ದಕ್ಕಿಸಿಕೊಂಡ ತಂಗಳನ್ನ ತಿನ್ನುವುದು ಸರಿಯೇ! ಈ ಕಾರಣದಿಂದಲೇ ಅಲ್ಲವೇ ಜೀವನದಲ್ಲಿ ಒಂದು ಮನೆಯನ್ನು ಕಟ್ಟಲೇಬೇಕೆಂಬ ಆಸೆ.

ಆದರೆ, ಕೆಲವರಿಗೆ ದುರಾಸೆ. ನಾಲ್ಕಾರು ಮನೆಗಳು, ಹತ್ತಾರು ಸೈಟ್‌ಗಳನ್ನು ಮಾಡಿಕೊಂಡಿರುತ್ತಾರೆ. ಕೆಲವರ ಈ ದುರ್ಬುದ್ಧಿಯಿಂದಾಗಿ ಅಗತ್ಯ ಇರುವವರು ಒಂದು ಪುಟ್ಟ ಮನೆ ಮಾಡಿಕೊಳ್ಳಲು ಆಗುತ್ತಿಲ್ಲ. ಸಂಸಾರ ಅಂದ ಮೇಲೆ ಪುಟ್ಟದಾದರೂ ಒಂದು ಸ್ವಂತ ಮನೆ ಹೊಂದುವುದು ಎಲ್ಲರ ಹೆಬ್ಬಯಕೆ. ಕೆಲವರು ಯಶಸ್ವಿಯಾಗುವರು, ಉಳಿದವರು ಮನೆಯನ್ನು ಮಾಡದೇ ಜೀವನ ಮುಗಿಸಿ ನಂಬಿದವರನ್ನು ನಡು ಬೀದಿಯಲ್ಲಿ ಬಿಟ್ಟು ಹೋದವರು ಇದ್ದಾರೆ. ವಯಸ್ಸಾದರೂ ಒಂದು ಮನೆಯನ್ನು ಕಟ್ಟಲಾಗದವರು ಹೆಂಡತಿ ಮಕ್ಕಳಿಂದ ನಿತ್ಯವೂ ತೇಜೋವಧೆಗೆ ಒಳಗಾಗುವರು. ಕೆಲವರು ದುಶ್ಚಟಗಳಿಂದ ಕಟ್ಟಲಾಗದಿದ್ದರೆ, ಅನೇಕರು ನ್ಯಾಯ, ನೀತಿ, ಧರ್ಮಗಳ ಅಡಿ ನಿಷ್ಠೆಯಿಂದ ದುಡಿದಿದ್ದರಿಂದ ಬಾಡಿಗೆ ಮನೆಗಳಲ್ಲೇ ಬದುಕು ಕಟ್ಟಿಕೊಂಡರು. ಎರಡನೇ ವರ್ಗದವರ ಮೇಲೆ ನಮ್ಮ ಅನುಕಂಪ ಇರಲಿ!.

'ಇಚ್ಚೆಯನರಿತ ಸತಿ ಇರಲು, ಬೆಚ್ಚನೆ ಮನೆಯಿರಲು, ವೆಚ್ಚಕ್ಕೆ ಹೊನ್ನಿರಲು, ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಸರ್ವಜ್ಞ।'

ಇದನ್ನೇ ಎಲ್ಲರೂ ಬಯಸುವುದು. ಮದುವೆ ಎನ್ನುವ ಹಂತ ಮುಗಿದು, ಮಕ್ಕಳಾಗುವ ಕಾಲಕ್ಕೆ ಮನೆಯ ಒಡೆಯನಾಗುವ ಬಯಕೆ ಚಿಗುರೊಡೆಯುವುದು, ಚಿಗುರದಿದ್ದರೂ, ಬಲವಂತವಾಗಿ ಯಾದರೂ ಮೊಳೆಯುವಂತೆ ಮಾಡುವವಳು ಹೆಂಡತಿ. ಕೆಲವರಿಗೋ ಬಾಡಿಗೆ ಮನೆಯೇ ಸುಖ. ಏಕೆಂದರೆ ತನಗಿಷ್ಟವಾದ ವಿನ್ಯಾಸದ ಮನೆಗಳನ್ನು ಹತ್ತಾರು ಬಾರಿ ಆಗಿಂದಾಗ್ಗೆ ಬದಲಾಯಿಸಿಕೊಳ್ಳಬಹುದು. ಭೋಗ್ಯದ್ದಾದರೆ ಹಣವೂ ಖರ್ಚಾಗದೆ ಮನೆ ಬಿಡುವಾಗ ಪೂರ್ಣ ಕೈಸೇರುವುದು. ಎಲ್ಲವೂ ಮುಗಿದ ನಂತರ ಕೊನೆಗೊಮ್ಮೆ ಕಟ್ಟಿಕೊಂಡರಾಯಿತು ಎನ್ನುವ ಧೋರಣೆ. ಇದು ಸಹಾ ಮೆಚ್ಚಬೇಕಾದ ನಿರ್ಧಾರವೇ!, ಸಾಯುವವರೆಗೂ ಒಂದೇ ಮನೆಯಲ್ಲಿನ ಅದೇ ವಿನ್ಯಾಸದ ರೂಂ, ಅದೇ ಕಿಚನ್, ಅದೇ ಹಾಲ್... ಬೇಜಾರಾಗುವುದಿಲ್ಲವೇ?. ಬದಲಾವಣೆ ಪ್ರಕೃತಿಯ ನಿಯಮವಲ್ಲವೇ?.

ನಮ್ಮ ಮನೆ.. ನಮ್ಮ ಮನೆ.... ನಂದಗೋಕುಲ ನಮ್ಮ ಮನೆ... ಹೌದು ಇದು ನಿಜವೇ! ಮನೆಯ ಮೇಲೆ ಬಡ್ಡಿ ಸಾಲವಿಲ್ಲದಿದ್ದರೆ, ಮನೆಯೊಳಗಿನ ಹೆಂಡತಿ, ಮಕ್ಕಳು ಒಳ್ಳೆಯವರಿದ್ದರೆ, ನೆರೆಹೊರೆಯವರ ಕಿರುಕುಳವಿಲ್ಲದಿದ್ದರೆ. ಅಕಸ್ಮಾತ್ ಇವುಗಳೆಲ್ಲವೂ ವಾಸಿಸುವವನಿಗೆ ವಿರುದ್ಧವಾಗಿದ್ದರೆ ಆ ಮನೆಯು ನಂದ ಗೋಕುಲನ ವಾಸಸ್ಥಾನವಾದ ಕಾರಗೃಹವಾಗುವುದರಲ್ಲಿ ಸಂಶಯವಿಲ್ಲ.

ನಂದಗೋಕುಲದ ಸೃಷ್ಟಿಯು ನಮ್ಮ ಕೈಯಲ್ಲೇ ಇದೇ. ಹೆಂಡತಿ, ಮಕ್ಕಳ ಅಭಿಲಾಷೆಗೆ ಅನುಗುಣವಾಗಿ ಅಗತ್ಯ ಅಳತೆಗೆ ಒಂದೇ ಒಂದು ಮನೆಯನ್ನು ಮಾತ್ರ ನಿರ್ಮಿಸುವುದು. ಹಣವಿದೆಯೆಂದು ಇನ್ನೊಬ್ಬರ ಅನುಕರಣೆ ಮಾಡಿ ಭಾರೀ ಬಂಗಲೆಯನ್ನು ಕಟ್ಟಿಕೊಂಡು, ಇದರಲ್ಲಿ ಒಬ್ಬಿಬ್ಬರು ಮಾತ್ರ ವಾಸಿಸುವುದು ತಕ್ಕದ್ದಲ್ಲ. ಇದರಿಂದ ವಾಸಿಸುವಾಗ ಒಂಟಿತನ ಕಾಡುವುದು. ಅಲ್ಲದೆ ಮುಂದಿನ ದಿನಗಳಲ್ಲಿ ನಿತ್ಯದ ಸ್ವಚ್ಛತೆ, ಸುಣ್ಣ–ಬಣ್ಣದ ನಿರ್ವಹಣೆಗೆ ಕಷ್ಟವೆನಿಸುವುದು. ಆದ್ದರಿಂದ ಕುಟುಂಬದಂತೆ ಮನೆಯೂ ಚಿಕ್ಕದಾಗಿದ್ದರೆ ಮನೆಯಲ್ಲಿ ಸುಖ–ಶಾಂತಿ ನೆಲೆಸುವುದು.

ಪ್ರಾಣಿ–ಪಕ್ಷಿಗಳು ಸಹ ವಾಸಿಸಲು ಹತ್ತಾರು ಗೂಡುಗಳನ್ನು ಕಟ್ಟಿಕೊಳ್ಳುವುದಿಲ್ಲ. ವಾಸಿಸುವುದು ಒಂದೇ ಮನೆಯಲ್ಲಾದರೂ, ಮನುಷ್ಯನಿಗೆ ಎಷ್ಟು ಸೈಟು, ಮನೆಗಳಿದ್ದರೂ ಇನ್ನೂ ಮಾಡಬೇಕೆನ್ನುವ ದುರಾಸೆ. ಕಡೆಗೆ ಕಾಲು–ಕೈ ಮಡಿಚಿ ಮಣ್ಣಿನೊಳಗೆ ಹೂಳುವಾಗ ನಾವಂದುಕೊಂಡಂತೆ ಆರಡಿ ಮೂರಡಿ ಸಾಕು... ಸಾಕು...! ಆದ್ದರಿಂದ ಉಳ್ಳವರು ಹೂಡಿಕೆಗಾಗಿ ಬಹಳಷ್ಟು ಸೈಟ್ ಮತ್ತು ಮನೆಗಳನ್ನು ಮಾಡುವುದನ್ನು ನಿಲ್ಲಿಸಬೇಕು. ಸಾಧ್ಯವಾದರೆ ಸರ್ಕಾರವೇ ಇದರ ಬಗ್ಗೆ ಚಿಂತಿಸಿ ಕಾನೂನು ತರಬೇಕು. ಈ ನಿರ್ಣಯದಿಂದ ಆಶ್ರಯವಿಲ್ಲದವರಿಗೆ ಮನೆ ಮಾಡಿಕೊಳ್ಳಲು ಸಹಕಾರಿಯಾಗುವುದು. ಹೆಣ್ಣಿರಲಿ, ಗಂಡಿರಲಿ ಮಗು ಒಂದೇ ಸಾಕು ಎನ್ನುವ ಈ ಕಾಲದಲ್ಲಿ ಕುಟುಂಬಕ್ಕೆ ಒಂದೇ ಮನೆ ಸಾಕು ಎನ್ನುವುದನ್ನು ರೂಢಿಸಿಕೊಳ್ಳೋಣ. ನಾವೂ ನೆಮ್ಮದಿಯ ನೆಲೆ ಕಂಡು ಉಳಿದವರಿಗೂ ನೆಲೆ ನೀಡೋಣ.....

ಅಡಿಜಾರಿ ಬೀಳುವುದು, ತಡವಿ ಕೊಂಡೇಳುವುದು
ಕಡುಬ ನುಂಗುವುದು, ಕಹಿಮದ್ದ ಕುಡಿಯುವುದು
ದುಡುಕಿ ಮತಿದಪ್ಪುವುದು, ತಪ್ಪನೊಪ್ಪನ್ನುವುದು
ಬದುಕೆಂಬುದಿದು ತಾನೆ?–ಮಂಕುತಿಮ್ಮ.

ಹೆಜ್ಜೆಯನ್ನು ತಪ್ಪಿಟ್ಟುಜಾರಿ ಬೀಳುವುದು, ಬಿದ್ದು ತಡವಿಕೊಂಡು ಮೇಲೇಳುವುದು, ಹಾಗೆಯೇ ಮಿತಿಮೀರಿ ಕಡುಬು ತಿನ್ನುವುದು, ಆರೋಗ್ಯ ಹದಗೆಟ್ಟಾಗ ಔಷಧಿ ಕುಡಿಯುವುದು, ಹಾಗೆಯೇ ಬುದ್ಧಿ ಕೆಡುವುದು, ತಪ್ಪು ತಿದ್ದಿಕೊಳ್ಳುವುದು. ಸಹಜ ಬದುಕೆಂದರೆ ಹಾಗೆಂಯೇ ತಾನೆ?. ಆದರೆ ಮನೆ ನಿರ್ಮಾಣದ ವಿಷಯದಲ್ಲಿ ತಪ್ಪು ಹೆಜ್ಜೆ ಇಟ್ಟವರು ಜೀವನ ಪೂರ ನೆಮ್ಮದಿ ಹಾಳು ಮಾಡಿಕೊಂಡವರೇ ಹೆಚ್ಚು. ಸಾಮರ್ಥ್ಯ ಮೀರಿ ಕೋಟ್ಯಾಂತರ ಸಾಲ ಮಾಡಿ ದೊಡ್ಡ ಮನೆ ನಿರ್ಮಿಸುವುದು, ಮಾಡಿದ ಸಾಲಕ್ಕೆ ಬಡ್ಡಿ ಏರಿ ಸಾಲ ತೀರಿಸಲಾರದೆ ಕಟ್ಟಿದ ಮನೆಯನ್ನೂ ಮಾರಿ ಬೀದಿಗೆ ಬರುವುದು. ತಪ್ಪು ಹೆಜ್ಜೆ ಇಟ್ಟಿದ್ದರ ಫಲ, ಇಂಥ ದುರ್ಗತಿ ಬರಲು ಮಿತಿ ಮೀರಿ ಕಡುಬು ತಿಂದಿದ್ದರ ಪರಿಣಾಮ ತಾನೆ?.

ಸಂಪಾದನೆಯ ಮೊತ್ತಕ್ಕೆ ಮೀರಿ ಖರ್ಚು ಎಂದಿಗೂ ಇರಕೂಡದು. ಇವತ್ತಿನ ಆಡಂಬರದ ಜೀವನಕ್ಕಾಗಿ ಸಾಲ ಮಾಡುವುದು, ಮಾಡಿದ ಸಾಲವನ್ನು ಮುಂದೆ ತೀರಿಸುತ್ತೇನೆ ಎನ್ನುವುದು, ನಾಳೆಗೆ ನಾವೇ ತಂದುಕೊಳ್ಳುವ ಕಷ್ಟಗಳು. ಆದಾಯ ಮತ್ತು ವೆಚ್ಚಗಳು ನಮ್ಮ ಸುಖ–ದುಃಖಗಳನ್ನು ನಿರ್ಧರಿಸುವ ನಿರ್ದೇಶಕರು. ಆದ್ದರಿಂದ ಅವಶ್ಯಕತೆಗೆ ಅನುಗುಣವಾಗಿ, ಸಾಮರ್ಥ್ಯಕ್ಕೆ ತಕ್ಕ ಹಾಗೆ ಮನೆಯ ಕಟ್ಟಿಕೊಳ್ಳುವುದರಿಂದ ನೆಮ್ಮದಿಯಾಗಿ ಬದುಕಲು ಸಾಧ್ಯ. ಹಾಗೆಂಯೇ ಹಣ ಇದೆಯೆಂದು ಹತ್ತಾರು ಸೈಟು, ಮನೆಗಳನ್ನು ಮಾಡುವುದನ್ನು ಬಿಟ್ಟು, ಸಾಮಾನ್ಯರು ತಮ್ಮ ಜೀವಿತಾವಧಿಯಲ್ಲಿ ಒಂದು ಮನೆಯನ್ನು ಹೊಂದಲು ಅವಕಾಶ ನೀಡೋಣ.

ಹಿಂದೂಸ್ಥಾನ್ ಕಾಲೇಜಲ್ಲಿ ಕನ್ನಡ ರಾಜ್ಯೋತ್ಸವ




ಮೈಸೂರಿನ ಹಿಂದೂಸ್ಥಾನ್ ಕಾಲೇಜಿನಲ್ಲಿ 70ನೇ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು.

ಮೈಸೂರು: ಮೈಸೂರಿನ ಹಿಂದೂಸ್ಥಾನ್ ಕಾಲೇಜಿನಲ್ಲಿ 70ನೇ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಈ ವೇಳೆ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರು ಹಾಗೂ ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಮಡ್ಡೀಕೆರೆ ಗೋಪಾಲ್ ಅವರು ಕನ್ನಡದ ಅಸ್ಮಿತೆ, ಸ್ಥಿತಿ–ಗತಿಗಳು, ನಾಡು–ನುಡಿಯ ಶ್ರೇಷ್ಠತೆ ಹಾಗೂ ಕನ್ನಡ ಭಾಷೆ–ಸಾಹಿತ್ಯವನ್ನು ಕುರಿತು ಮಾತನಾಡಿದರು. ವಿವಿಧ ಕನ್ನಡ ಸಾಹಿತ್ಯ (ಕನ್ನಡವಕ್ಕಿ, ಕರವೀರ, ಸಂವರ್ಧನ) ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನವನ್ನು ವಿತರಣೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಹಿಂದೂಸ್ಥಾನ್ ಕಾಲೇಜಿನ ಪ್ರಾಂಶುಪಾಲರಾದ ಡಾ. ಸಿ.ಜೆ. ಪ್ರಿಯ, ಕನ್ನಡ ಸಹಾಯಕ ಪ್ರಾಧ್ಯಾಪಕ ಡಾ.ಆರ್.ಶಿವಕುಮಾರ್, ಕನ್ನಡ ಸಹಾಯಕ ಪ್ರಾಧ್ಯಾಪಕರಾದ ಕೆ. ಪರಮೇಶ, ಸಾಹಿತ್ಯ ಕಾರ್ಯದರ್ಶಿ ಸಿ.ಸಂಜನ ಮತ್ತಿತರರು ಉಪಸ್ಥಿತರಿದ್ದರು.

ಜಯಪ್ರಕಾಶ್ ಅವರಿಗೆ ಅಭಿನಂದನೆ....



ಭಗೀರಥ ಚಿತ್ರದ ನಾಯಕ ನಟ, ಡೈರಿಂಗ್ ಸ್ಟಾರ್ ಎಸ್.ಜಯಪ್ರಕಾಶ್ ಅವರು ಶ್ರೀರಂಗಪಟ್ಟಣದ ಪ್ರವಾಸಿ ಮಂದಿರದಲ್ಲಿ ಮಂಡ್ಯ ಜಿಲ್ಲೆಯ ರೈತ ಮುಖಂಡರನ್ನು ಭೇಟಿ ಮಾಡಿ, ಕಾವೇರಿ ಕ್ರಿಯಾ ಸಮಿತಿಯಿಂದ ಕಾವೇರಿ ನೀರು ಹಾಗೂ ಮೇಕೆದಾಟು ಅಣೆಕಟ್ಟು ಯೋಜನೆಯ ಹೋರಾಟದ ಬಗ್ಗೆ ಚರ್ಚಿಸಿದರು. ಈ ವೇಳೆ ಮುಖಂಡರು ಜಯಪ್ರಕಾಶ್ ಅವರನ್ನು ಅಭಿನಂದಿಸಿದರು.

ಲೋಕಾಯುಕ್ತಕ್ಕೆ ಆಸ್ತಿ ವಿವರ ಸಲ್ಲಿಸದ ಐವರು ಸಚಿವರು, 67 ಶಾಸಕರು



ಬೆಂಗಳೂರು, ನ.6– ಸಚಿವರಾದ ಕೆ.ಹೆಚ್. ಮುನಿಯಪ್ಪ, ದಿನೇಶ್ ಗುಂಡೂರಾವ್, ಬಿ.ಝಡ್. ಜಮೀರ್ ಅಹಮದ್ ಖಾನ್, ರಹೀಂ ಖಾನ್, ಕೆ.ವೆಂಕಟೇಶ್ ಸೇರಿ ಐವರು ಸಚಿವರು ಮತ್ತು 67 ಶಾಸಕರು ನಿಗದಿತ ಗಡುವು ಮುಗಿದರೂ ತಮ್ಮ ಆಸ್ತಿ ವಿವರವನ್ನು ಲೋಕಾಯುಕ್ತಕ್ಕೆ ಸಲ್ಲಿಸಿಲ್ಲ.

2024–25ನೇ ಸಾಲಿನ ಆಸ್ತಿ ಮತ್ತು ಋಣ ಬಾಧ್ಯತೆಯ ವಿವರಗಳನ್ನು ಸಲ್ಲಿಸದ ಚುನಾಯಿತ ಪ್ರತಿನಿಧಿಗಳ ಪಟ್ಟಿಯನ್ನು ಕರ್ನಾಟಕ ಲೋಕಾಯುಕ್ತ ಬಿಡುಗಡೆ ಮಾಡಿದೆ. ಅವಧಿ ಮುಗಿದರೂ 2024–25ರ ಅವಧಿಯ ಆಸ್ತಿ ವಿವರ ಸಲ್ಲಿಸದ ಶಾಸಕರಿಗೆ ನೋಟಿಸ್ ಜಾರಿಗೊಳಿಸಲಾಗಿತ್ತು ಗಡುವು ಮುಗಿದ ಬಳಿಕ ಸಚಿವ ಡಿ.ಸುಧಾಕರ್, ಮೂವರು ಶಾಸಕರು ಹಾಗೂ ವಿಧಾನ ಪರಿಷತ್‌ನ ಸದಸ್ಯರೊಬ್ಬರು ಆಸ್ತಿ ವಿವರ ಸಲ್ಲಿಸಿದ್ದಾರೆ.

ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಪ್ರಕಾರ ವಿಧಾನ ಸಭೆ ಮತ್ತು ವಿಧಾನ ಪರಿಷತ್‌ನ ಎಲ್ಲಾ ಸದಸ್ಯರು ಪ್ರತಿ ವರ್ಷ ಜೂನ್ 30 ರೊಳಗೆ ತಮ್ಮ ಆಸ್ತಿ ಹಾಗೂ ಸಾಲದ ವಿವರಗಳ ಪ್ರಮಾಣಪತ್ರ ಸಲ್ಲಿಸಬೇಕು. ಆದರೆ, ಹಲವರು ಆಸ್ತಿ ವಿವರದ ಪ್ರಮಾಣಪತ್ರ ಸಲ್ಲಿಸಿಲ್ಲ. ಇತ್ತೀಚೆಗೆ ನಿಧನರಾದ ಬಾಗಲಕೋಟೆ ಶಾಸಕ ಎಚ್.ವೈ.ಮೇಟಿ ಸಹ ಆಸ್ತಿ ವಿವರಕ್ಕೆ ಸಂಬಂಧಿಸಿದ ದಾಖಲೆ ನೀಡಿರಲಿಲ್ಲ.

ಲೋಕಾಯುಕ್ತ ಬಿಡುಗಡೆ ಮಾಡಿದ ಪಟ್ಟಿಯಲ್ಲಿ ವಿಧಾನ ಸಭೆಯ ಮುಖ್ಯ ಸಚೇತಕ ಅಶೋಕ ಪಟ್ಟಣ, ವಿಧಾನ ಪರಿಷತ್‌ನ ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹಮದ್ ಹೆಸರುಗಳೂ ಇವೆ.

ಈ ಪಟ್ಟಿಯಲ್ಲಿ ಕಾಂಗ್ರೆಸ್ ಪ್ರತಿನಿಧಿಸುವ ಶಾಸಕರಾದ, ಮುಖ್ಯಮಂತ್ರಿಯವರ ಆರ್ಥಿಕ ಸಲಹೆಗಾರರಾಗಿರುವ ಬಸವರಾಜ ರಾಯರೆಡ್ಡಿ, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್, ಬಿಡಿಎ ಅಧ್ಯಕ್ಷ ಎನ್.ಎ.ಹ್ಯಾರಿಸ್, ಮಾಜಿ ಸಚಿವ ಕೆ.ಎನ್. ರಾಜಣ್ಣ, ಸತೀಶ್ ಸೈಲ್, ಟಿ.ಡಿ. ರಾಜೇಗೌಡ, ಸಿ.ಪುಟ್ಟರಂಗ ಶೆಟ್ಟಿ, ಕೆ.ಎಂ. ಉದಯ್, ಕೆ.ಹೆಚ್. ಪುಟ್ಟಸ್ವಾಮಿಗೌಡ, ಸಿ.ಪಿ. ಯೋಗೇಶ್ವರ್, ಡಾ.ಹೆಚ್.ಡಿ. ರಂಗನಾಥ್, ಎಸ್.ಎನ್. ಸುಬ್ಬಾರೆಡ್ಡಿ, ಕೆ.ಎಂ.ರೂಪಕಲಾ, ಕೆ.ಗೋವಿಂದರಾಜು ಹೆಸರುಗಳಿವೆ.

ಬಿಜೆಪಿಯ ಜನಾರ್ದನ ರೆಡ್ಡಿ, ಹೆಚ್.ವಿಶ್ವನಾಥ್, ಎಂಟಿಬಿ ನಾಗರಾಜು, ಪ್ರದೀಪ ಶೆಟ್ಟರ್, ಜೆಡಿಎಸ್ ಶಾಸಕಾಂಗ ಪಕ್ಷ ನಾಯಕ ಸಿ.ಬಿ. ಸುರೇಶ್‌ಬಾಬು, ಶಾಸಕರಾದ ಹೆಚ್.ಡಿ. ರೇವಣ್ಣ, ಎ.ಮಂಜು, ಸಿ.ಎನ್. ಬಾಲಕೃಷ್ಣ ಪಟ್ಟಿಯಲ್ಲಿದ್ದಾರೆ.

ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಸೆಕ್ಷನ್ 22ರ ಪ್ರಕಾರ ಪ್ರತಿಯೊಬ್ಬ ಸಾರ್ವಜನಿಕ ಸೇವಕನು ಪ್ರತಿ ವರ್ಷ ಜೂನ್ 30ರೊಳಗೆ ಆಸ್ತಿ ಮತ್ತು ಋಣ ಬಾಧ್ಯತೆಯ ವಿವರಗಳನ್ನು ಸಲ್ಲಿಸಬೇಕು. ಪ್ರಮಾಣಪತ್ರ ಸಲ್ಲಿಸಲು ವಿಫಲರಾದ ಸಾರ್ವಜನಿಕ ಸೇವಕರಿಗೆ ಸಂಬಂಧಿಸಿದಂತೆ ಲೋಕಾಯುಕ್ತರು ಸಕ್ಷಮ ಪ್ರಾಧಿಕಾರಿಯಾಗಿರುವ ರಾಜ್ಯಪಾಲರಿಗೆ ವರದಿ ಸಲ್ಲಿಸಬೇಕು. ಅಂತಹ ಶಾಸಕರ ಹೆಸರುಗಳನ್ನು ರಾಜ್ಯದಾದ್ಯಂತ ಪ್ರಸರಣ ಹೊಂದಿರುವ ಮೂರು ದಿನಪತ್ರಿಕೆಗಳಲ್ಲಿ ಪ್ರಕಟಿಸಬೇಕು ಎಂದು ಹೇಳಲಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ ಶುಕ್ರವಾರ 7 ನವೆಂಬರ್ 2025

ನ.9 ಚಾಮುಂಡಿಬೆಟ್ಟದ ಮಹಾನಂದಿಗೆ 20ನೇ ವರ್ಷದ ಮಹಾಭಿಷೇಕ



ಮೈಸೂರು,ನ.6(ಜಿಎ)–ಮೈಸೂರು ಚಾಮುಂಡಿಬೆಟ್ಟದ ಬಳಗ ಚಾರಿಟಬಲ್ ಟ್ರಸ್ಟ್ ವತಿಯಿಂದ ನ.9ರಂದು ಬೆಳಗ್ಗೆ 10.30ಕ್ಕೆ ಚಾಮುಂಡಿಬೆಟ್ಟದ ಮಹಾನಂದಿಗೆ 20ನೇ ವರ್ಷದ ಮಹಾಭಿಷೇಕ ನೆರವೇರಿಸಲಾಗುತ್ತಿದೆ ಎಂದು ಕಾರ್ಯದರ್ಶಿ ಎನ್.ಗೋವಿಂದ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶ್ರೀ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿದ್ಧಲಿಂಗ ಸ್ವಾಮೀಜಿ, ಚಿದಾನಂದ ಸ್ವಾಮೀಜಿ, ಸೋಮನಾಥಾನಂದ ಸ್ವಾಮೀಜಿ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸುವರು. ನಂದಿಗೆ 6 ಹಂತಗಳಲ್ಲಿ 32 ಬಗೆಯ ಅಭಿಷೇಕ ನೆರವೇರಲಿದ್ದು, ಪಾದ್ಯ, ಅರ್ಘ್ಯ, ಪಂಚಾಮೃತಾಭಿಷೇಕ, ಫಲ ಪೂಜಾಮೃತ, ರಸ ಪಂಚಾಮೃತ, ಪಿಷ್ಟ ಪಂಚಕಾಭಿಷೇಕಗಳು ಒಳಗೊಂಡಿವೆ ಎಂದರು.

ಮಹಾಭಿಷೇಕದಲ್ಲಿ ಪಂಚಾಮೃತ ಸ್ನಾನದಲ್ಲಿ ಹಾಲು, ಮೊಸರು, ತುಪ್ಪ, ಜೇನುತುಪ್ಪ, ಸಕ್ಕರೆ. ಫಲ ಪೂಜಾಮೃತದಲ್ಲಿ ಬಾಳೆಹಣ್ಣು, ದ್ರಾಕ್ಷಿ, ಬೇಲದ ಹಣ್ಣು, ಖರ್ಜೂರ, ಸೌತೆಕಾಯಿ ಸೇರಿದಂತೆ ಎಲ್ಲಾ ತರಹದ ಹಣ್ಣುಗಳು ಬಳಸಲಾಗುತ್ತದೆ. ರಸ ಪಂಚಾಮೃತಗಳಾಗಿ ಕಬ್ಬಿನ ರಸ, ಎಳನೀರು, ನಿಂಬೆಹಣ್ಣು ಎಳ್ಳೆಣ್ಣೆ ಪಾಯಸ, ಪಿಷ್ಟ ಪಂಚಕಾಬಿಷೇಕ ಗೋಧಿ ಹಿಟ್ಟು, ಕಡಲೆಹಿಟ್ಟು, ಹೆಸರಿಟ್ಟು, ದರ್ಬೆ ಅಭಿಷೇಕ ನೆರವೇರಿಸಲಾಗುತ್ತದೆ. ಸುಮಾರು 4 ಸಾವಿರ ಮಂದಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿದ್ದು, ಭಕ್ತಾದಿಗಳಿಗೆ ತಾವರೆಕಟ್ಟೆ ಕಡೆಯಿಂದ ಪ್ರವೇಶ ನೀಡುವಂತೆ ಅರಣ್ಯ ಇಲಾಖೆ ಅನುಮತಿ ಕೋರಲಾಗಿದೆ ಎಂದರು.

ಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಶಂಕರ್, ಮಹೇಶ್, ಸುಂದರ್‌ಶೆಟ್ಟಿ, ಶಿವಮೂರ್ತಿ, ಸತ್ಯನಾರಾಯಣ, ರಾಜಣ್ಣ ಇದ್ದರು.

ಹೆಚ್.ವಿ.ರಾಜೀವ್‌ಗೆ ಅಭಿನಂದನೆ...



ಕೆಪಿಸಿಸಿ ಸದಸ್ಯರಾಗಿ ನೇಮಕಗೊಂಡ ಮುಡಾ ಮಾಜಿ ಅಧ್ಯಕ್ಷ ಎಚ್.ವಿ.ರಾಜೀವ್ ಅವರನ್ನು ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಅಭಿನಂದಿಸಲಾಯಿತು ಈ ವೇಳೆ ಸಂಘದ ಅಧ್ಯಕ್ಷ ಜೆ.ಎಸ್.ಹೋಮದೇವ, ಉಪಾಧ್ಯಕ್ಷ ಎಂ.ನಾಗರಾಜು, ಪ್ರಧಾನ ಕಾರ್ಯದರ್ಶಿ ಸಿ.ಶಿವಣ್ಣ, ಪತ್ರಿಕಾ ಕಾರ್ಯದರ್ಶಿ ಶ್ರೀಕಾಂತ, ನಿರ್ದೇಶಕರಾದ ಹರಿರಾವ್, ಗೋವಿಂದ್‌ಶೆಟ್ಟಿ, ಜಯಚಂದ್ರ ಪೂಜಾರಿ ಇನ್ನಿತರರು ಉಪಸ್ಥಿತರಿದ್ದರು.

ನಾಳೆ ಆರ್.ಪ್ರೇಕ್ಷಾ ಭರತನಾಟ್ಯ ರಂಗಪ್ರವೇಶ



ಮೈಸೂರು,ನ.6–ಮೈಸೂರಿನ ನೃತ್ಯಗಿರಿ ಪ್ರದರ್ಶನ ಕಲೆಗಳ ಸಂಶೋಧನಾ ಕೇಂದ್ರ ರಾಮಕೃಷ್ಣನಗರದ ರಮಾಗೋವಿಂದ ರಂಗ ಮಂದಿರದಲ್ಲಿ ನ.8ರಂದು ಬೆಳಗ್ಗೆ 10.30ಕ್ಕೆ ಆಯೋಜಿಸಿರುವ ಕಾರ್ಯಕ್ರಮದಲ್ಲಿ ವಿದುಷಿ ಡಾ. ಕೃಪಾ ಫಡ್ಕೆ ಅವರ ಶಿಷ್ಯೆ ಆರ್.ಪ್ರೇಕ್ಷಾ ಅವರ ಭರತನಾಟ್ಯ ರಂಗಪ್ರವೇಶ ನಡೆಯಲಿದೆ.

ಮೈಸೂರಿನ ಹೆಚ್.ಎನ್.ರವಿ ಮತ್ತು ಎನ್.ಶೃತಿ ದಂಪತಿ ಪುತ್ರಿಯಾದ ಈಕೆ, ಕಳೆದ 14 ವರ್ಷದಿಂದ ವಿದುಷಿ ಡಾ.ಕೃಪಾ ಫಡ್ಕೆ ಅವರಲ್ಲಿ ನೃತ್ಯಾಭ್ಯಾಸ ಮಾಡುತ್ತಿದ್ದು, ಶಾಸ್ತ್ರೀಯ ಸಂಗೀತದಲ್ಲೂ ಅತೀವ ಆಸಕ್ತಿ ಹೊಂದಿರುವ ಈಕೆ, ವಿದುಷಿ ಶ್ರೀಮತಿ ಭಾಗ್ಯಲಕ್ಷ್ಮಿ ಅವರ ಬಳಿ ಶಾಸ್ತ್ರೀಯ ಸಂಗೀತ ಅಭ್ಯಾಸ ಮಾಡುತ್ತಿದ್ದಾರೆ. ತಮ್ಮ ಗುರು ಡಾ.ಕೃಪಾ ಫಡ್ಕೆ ಅವರೊಂದಿಗೆ ತಿರುಪತಿ ಪದ್ಮಾವತಿ ದೇವಾಲಯ, ಕಾರ್ತೀಕ ಮಹೋತ್ಸವ, ಚಾಮುಂಡಿಬೆಟ್ಟದ ದಸರಾ ಮಹೋತ್ಸವ, ವಿಶ್ವ ಹಿಂದೂ ಪರಿಷತ್ ಚಳ್ಳಕೆರೆ ಶಾಖೆ, ಸ್ವದೇಶಿ ಮೇಳ, ಬೆಂಗಳೂರಿನ ಶಂಕರ ಮಠದಲ್ಲಿ ನಡೆದ ಅಭಿಜಾತೆ ಕಾರ್ಯಕ್ರಮ, ವಚನ ವೈಭವ, ಮೈಲ್ಯಾಕ್ ಅಮೃತ ಮಹೋತ್ಸವ ಕಾರ್ಯಕ್ರಮ, ಶಿವಮೊಗ್ಗದ ವಿಭಿನ್ನ ವೇದಿಕೆಗಳಲ್ಲಿ ಪ್ರೇಕ್ಷಾ ಕಾರ್ಯಕ್ರಮ ನಡೆಸಿದ್ದಾರೆ.

ಪ್ರೊ.ಮಲೆಯೂರು ಗುರುಸ್ವಾಮಿ ಪ್ರಶಸ್ತಿಗೆ ವಿದ್ವಾಂಸ ಡಾ.ರಹಮತ್ ತರೀಕೆರೆ ಆಯ್ಕೆ



ಮೈಸೂರು, ನ. 6– ಪ್ರೊ. ಮಲೆಯೂರು ಗುರುಸ್ವಾಮಿಯವರ ವಿದ್ಯಾರ್ಥಿಗಳು ಮತ್ತು ಅಭಿಮಾನಿಗಳ ಬಳಗ ತಮ್ಮ ಗುರುಗಳ ಹೆಸರನ್ನು ಸಾರ್ಥಕಗೊಳಿಸುವ ನಿಟ್ಟಿನಲ್ಲಿ ಪ್ರತಿಷ್ಠಾನವೊಂದನ್ನು ಸ್ಥಾಪಿಸಿದೆ. ಈ ಪ್ರತಿಷ್ಠಾನವು ಸಾಹಿತ್ಯ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಸಾಧಕರನ್ನು ಗುರುತಿಸಿ ಪ್ರತಿ ವರ್ಷವೂ ಪ್ರೊ. ಮಲೆಯೂರು ಗುರುಸ್ವಾಮಿ ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಾ ಬಂದಿದೆ. ಮೂರನೇ ವರ್ಷದ 2025ನೇ ಸಾಲಿನ ಪ್ರಶಸ್ತಿಗೆ ನಾಡಿನ ಖ್ಯಾತ ವಿದ್ವಾಂಸರಾದ ಡಾ.ರಹಮತ್ ತರೀಕೆರೆ ಅವರನ್ನು ಆಯ್ಕೆ ಮಾಡಿದೆ. ಪ್ರಶಸ್ತಿ ಪ್ರದಾನ ಸಮಾರಂಭವು ನ. 9ರಂದು ಜೆಎಸ್‌ಎಸ್ ಆಸ್ಪತ್ರೆಯ ರಾಜೇಂದ್ರ ಭವನದಲ್ಲಿ ನಡೆಯಲಿದೆ.

ಕನ್ನಡದ ಕಟ್ಟಾಳುಗಳನ್ನು ಸ್ಮರಿಸೋಣ: ಸಂದೀಪ್



ದೇವರಾಜ ಮಾರ್ಕೆಟ್ ಯುವ ಬ್ರಿಗೇಡ್‌ನಿಂದ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು.

ಮೈಸೂರು, ನ.6– ತಮ್ಮ ಇಡೀ ಬದುಕನ್ನು ಕನ್ನಡ ನಾಡಿನ ನಿರ್ಮಾಣಕ್ಕಾಗಿ ಮೀಸಲಿಟ್ಟ ಕನ್ನಡದ ಕಟ್ಟಾಳುಗಳನ್ನು ನಾವೆಲ್ಲರೂ ನಿರಂತರವಾಗಿ ಗೌರವಿಸೋಣ ಎಂದು ದೇವರಾಜ ಮಾರ್ಕೆಟ್ ಯುವ ಬ್ರಿಗೇಡ್ ಅಧ್ಯಕ್ಷ ಈ.ಸಂದೀಪ್ ಹೇಳಿದರು.

ದೇವರಾಜ ಮಾರ್ಕೆಟ್ ಯುವ ಬ್ರಿಗೇಡ್ ವತಿಯಿಂದ 17ನೇ ವರ್ಷದ ಕನ್ನಡ ರಾಜ್ಯೋತ್ಸವ ಅಂಗವಾಗಿ ಆಯೋಜಿಸಿದ್ದ ಭವ್ಯ ಮೆರವಣಿಗೆಯಲ್ಲಿ ವಿವಿಧ ಕಲಾತಂಡದೊಂದಿಗೆ ತಾಯಿ ಭುವನೇಶ್ವರಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಭಾರತರತ್ನ ಸರ್ ಎಂ ವಿಶ್ವೇಶ್ವರಯ್ಯನವರ ಮೂರ್ತಿಗಳ ಮೆರವಣಿಗೆಯನ್ನು ನಗರದ ಹಳೆ ಸಂತೆಪೇಟೆಯಲ್ಲಿರುವ ನಂಜುಂಡೇಶ್ವರ ಸ್ವಾಮಿ ದೇವಸ್ಥಾನದ ಮುಂಭಾಗದಿಂದ ಆರಂಭಿಸಿ ದೇವರಾಜ ಮಾರ್ಕೆಟ್ ಮುಂಭಾಗ ಅಂತ್ಯಗೊಳಿಸಲಾಯಿತು. ಈ ಸಂದರ್ಭದಲ್ಲಿ ಮಾಜಿ ಮಹಾಪೌರರಾದ ರವಿಕುಮಾರ್, ಮಾಜಿ ನಗರಪಾಲಿಕಾ ಸದಸ್ಯರಾದ ಪ್ರಶಾಂತ್ ಗೌಡ, ಅಧ್ಯಕ್ಷರಾದ ಬಿ.ಸಂದೀಪ್, ಮಾದೇವಣ್ಣ, ಆನಂದ್, ಮಂಜು, ರಾಮರಾಜ, ರಮೇಶ್, ಸುಮನ್, ದೀಪಕ್‌ಗೌಡ, ಹಿಬ್ಬಿ, ನಾಗರಾಜ್ ಹಾಗೂ ಇನ್ನಿತರರು ಹಾಜರಿದ್ದರು.

ನೇಗಿಲ ಯೋಗಿ ಸಂಸ್ಥೆಯಿಂದ ಮಕ್ಕಳಿಗೆ ವಿವಿಧ ಸ್ಪರ್ಧೆ

ಮೈಸೂರು, ನ.6(ಎಸ್‌ಪಿಎನ್)– ಕನ್ನಡ ರಾಜ್ಯೋತ್ಸವ ಹಾಗೂ ಮಕ್ಕಳ ದಿನಾಚರಣೆ ಅಂಗವಾಗಿ ವಿವಿಧ ಶಾಲಾ ಮಕ್ಕಳಿಗೆ ವಿವಿಧ ಸ್ಪರ್ಧೆಗಳನ್ನು ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್, ನೇಗಿಲಯೋಗಿ ಮಹಿಳಾ ಹಿತೈಷಿಗಳ ಬಳಗದ ವತಿಯಿಂದ ಆಯೋಜಿಸಲಾಗಿದೆ. 9–12 ವರ್ಷ ಮತ್ತು 12ರಿಂದ 15 ವರ್ಷ ವಿದ್ಯಾರ್ಥಿಗಳಿಗೆ ಡ್ರಾಯಿಂಗ್ ಸ್ಪರ್ಧೆ, 2ರಿಂದ 5 ವರ್ಷ ಮತ್ತು 5ರಿಂದ 9 ವರ್ಷದವರಿಗೆ ಫ್ಯಾನ್ಸಿ ಡ್ರೆಸ್ ಸ್ಪರ್ಧೆ, 9–12 ವರ್ಷ, 12–15 ವರ್ಷ ವಿದ್ಯಾರ್ಥಿಗಳಿಗೆ ಪ್ರಸಿದ್ಧ ಕವಿಗಳ ಭಾವಗೀತೆ ಸ್ಪರ್ಧೆ ಆಯೋಜಿಸಲಾಗಿದೆ. ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ನ.12ರೊಳಗೆ 150 ಶುಲ್ಕದೊಂದಿಗೆ ಹೊಸ ನ್ಯಾಯಾಲಯದ ಎದುರಿನ ನೇಗಿಲ ಯೋಗಿ ಮರುಳೇಶ್ವರ ಸೇವಾಭವನದಲ್ಲಿ ನೋಂದಾಯಿಸಿಕೊಳ್ಳಬೇಕು. ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ನ.16ರಂದು ನಡೆಯುವ ಕಾರ್ಯ ಕ್ರಮದಲ್ಲಿ ಬಹುಮಾನ ವಿತರಿಸಲಾಗುವುದು. ವಿವರಗಳಿಗೆ ಮೊ.ಸಂ: 95131–12155/95139–26655 ಅನ್ನು ಸಂಪರ್ಕಿಸಬಹುದು.

ರಿಯಲ್ ಎಸ್ಟೇಟ್‌ಗೆ ಒತ್ತಾಸೆಯಾಗಿ ಗ್ರೇಟರ್ ಮೈಸೂರು ಮಾಡಬೇಡಿ

- ಮಾಜಿ ಸಚಿವ ಸಾ.ರಾ.ಮಹೇಶ್ ಸಲಹೆ
- ಗ್ಯಾರಂಟಿ ಯೋಜನೆ ಹೊರತು ಅಭಿವೃದ್ಧಿ ಶೂನ್ಯವಾಗಿದೆ
- ಗುತ್ತಿಗೆದಾರರ ಸಾವಿರಾರು ಕೋಟಿ ಬಿಲ್ ಬಾಕಿ ಇದೆ
- 'ಗ್ರೇಟರ್ ಮೈಸೂರು' ಮಾಡಲು ಸಾವಿರಾರು ಕೋಟಿ ಎಲ್ಲಿ ತರುತ್ತಾರೆ
- ನಗರಪಾಲಿಕೆ ಚುನಾವಣೆ ಮುಂದೂಡುತ್ತಾ ಹೋಗುವ ಹುನ್ನಾರ

ಹೆಚ್‌ಡಿಕೆ ಅಧ್ಯಕ್ಷತೆಯಲ್ಲಿ ಇಂದು ದಿಶಾ ಸಭೆ

ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ನಾಳೆ (ನವೆಂಬರ್ 7) ಮೈಸೂರಿನಲ್ಲಿ ದಿಶಾ (ಡಿಸ್ಟಿಕ್ ಡೆವಲಪ್‌ಮೆಂಟ್ ಕೋ ಆರ್ಡಿನೇಷನ್ ಅಂಡ್ ಮಾನಿಟರಿಂಗ್ ಕಮಿಟಿ) ಸಭೆ ನಡೆಸಲಿದ್ದಾರೆ. ನಾಳೆ ಬೆಳಿಗ್ಗೆ ಚಾಮುಂಡಿಬೆಟ್ಟಕ್ಕೆ ತೆರಳಿ ನಾಡದೇವತೆ ತಾಯಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸುವ ಕುಮಾರಸ್ವಾಮಿ ಅವರು ನಂತರ ದಿಶಾ ಸಭೆಯಲ್ಲಿ ಭಾಗಿಯಾಗುವರು.



ಮೈಸೂರಿನ ರಮಾವಿಲಾಸ ರಸ್ತೆಯ ತಮ್ಮ ಕಚೇರಿಯಲ್ಲಿ ಗುರುವಾರ ಮಾಜಿ ಸಚಿವ ಸಾ.ರಾ.ಮಹೇಶ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಗ್ರೇಟರ್ ಮೈಸೂರು ನಕ್ಷೆ ಅಮೀಬಾದಂತಿದೆ

ಗ್ರೇಟರ್ ಮೈಸೂರು ನಕ್ಷೆ ಅಮೀಬಾದಂತಿದೆ ಎಂದು ಟೀಕಿಸಿದ ಮಾಜಿ ಸಚಿವ ಸಾ.ರಾ.ಮಹೇಶ್, ನಕ್ಷೆಯೇ ಈ ರೀತಿ ಇರಬೇಕಾದರೆ ಇನ್ನು ಗ್ರೇಟರ್ ಮೈಸೂರು ರಚನೆ ಹೇಗಿರಬಹುದು ಎಂದು ಲೇವಡಿ ಮಾಡಿದರು. ಯಾರದೋ ಒತ್ತಡಕ್ಕೆ ಮಣಿದು ಗ್ರೇಟರ್ ಮೈಸೂರು ನಕ್ಷೆ ತಯಾರಿಸಬಾರದು. ನಗರವನ್ನು ಯೋಜನಾಬದ್ಧವಾಗಿ ಅಭಿವೃದ್ಧಿ ಮಾಡುವ ಗ್ರೇಟರ್ ಮೈಸೂರು ನಕ್ಷೆ ವೈಜ್ಞಾನಿಕವಾಗಿರಬೇಕು. ಅದು ಬಿಟ್ಟು ಅವೈಜ್ಞಾನಿಕವಾಗಿರಬಾರದು ಎಂದು ಸಲಹೆ ನೀಡಿದರು.

ಈಗ ಗ್ರೇಟರ್ ಬೆಂಗಳೂರು ಪಾಧಿಕಾರ ಮಾಡಿದ್ದಾರೆ. ಆದರೆ ಹೊಸ ರಸ್ತೆ ಇರಲಿ, ಗುಂಡಿ ಮುಚ್ಚಿದರೆ ಸಾಕು ಎಂಬ ಪರಿಸ್ಥಿತಿ ಇದೆ. ಮೈಸೂರಿನ ಪರಿಸ್ಥಿತಿ ಕೂಡ ಇದಕ್ಕಿಂತ ಭಿನ್ನವಾಗಿಲ್ಲ. ಈ ಹಿನ್ನೆಲೆ ಗ್ರೇಟರ್ ಮೈಸೂರು ಮಾಡುವುದಿರಲಿ, ಮೊದಲು ಗುಂಡಿ ಮುಚ್ಚಿಸಲಿ ಎಂದು ಸಾ.ರಾ.ಮಹೇಶ್ ಟೀಕಿಸಿದರು.

ಮೈಸೂರು, ನ.6(ಬಿಎಲ್‌ಯು)– ರಿಯಲ್ ಎಸ್ಟೇಟ್‌ಗೆ ಒತ್ತಾಸೆಯಾಗಿ, ಗ್ರೇಟರ್ ಮೈಸೂರು ಮಾಡಬೇಡಿ ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಲಹೆ ನೀಡಿದ್ದಾರೆ.

ಮೈಸೂರಿನ ರಮಾವಿಲಾಸ ರಸ್ತೆಯ ತಮ್ಮ ಕಚೇರಿಯಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರೇಟರ್ ಮೈಸೂರು ರಚನೆ ಮಾಡಿ ವ್ಯವಸ್ಥಿತವಾಗಿ ನಗರ ನಿರ್ಮಾಣ ಮಾಡಲು ಸಾವಿರಾರು ಕೋಟಿ ರೂಪಾಯಿ ಅವಶ್ಯವಿದೆ. ಗ್ಯಾರಂಟಿ ಬಿಟ್ಟು, ಅಭಿವೃದ್ಧಿ ಶೂನ್ಯವಾಗಿರುವಾಗ ಈ ಸರ್ಕಾರ ಗ್ರೇಟರ್ ಮೈಸೂರುಗೆ ಹಣ ಎಲ್ಲಿಂದ ತರುತ್ತದೆ ಎಂದು ಪ್ರಶ್ನಿಸಿದರು.

ಹಾಗೆಂದ ಮಾತ್ರಕ್ಕೆ ನಾನು ಗ್ರೇಟರ್ ಮೈಸೂರು ವಿರೋಧಿಯಲ್ಲ. ಲೋಕೋಪಯೋಗಿ ಇಲಾಖೆ ಗುತ್ತಿಗೆದಾರರಿಗೆ 2 ಸಾವಿರ ಕೋಟಿ ಬಿಲ್ ಬಾಕಿ ಇದೆ. ಇತರೆ ಇಲಾಖೆಯಲ್ಲಿ ಕೂಡ ಸಾವಿರಾರು ಕೋಟಿ ಬಿಲ್ ನೀಡದೆ ಸತಾಯಿಸುತ್ತಿದ್ದಾರೆ. ಪರಿಸ್ಥಿತಿ ಹೀಗಿರುವಾಗ ಗ್ರೇಟರ್ ಮೈಸೂರು ಮಾಡಲು ಹಣ ಎಲ್ಲಿಂದ ತರುತ್ತಾರೆ ಎಂದು ಮರು ಪ್ರಶ್ನಿಸಿದರು.

ಪಾಲಿಕೆ ಚುನಾವಣೆ ಮುಂದೂಡುವ ಹುನ್ನಾರ: ಗ್ರೇಟರ್ ಮೈಸೂರು ರಚನೆ ಉದ್ದೇಶವಿದ್ದಿದ್ದರೆ ನಗರಸಭೆ, ಪಟ್ಟಣ ಪಂಚಾಯಿತಿಗಳ ರಚನೆ ಏಕೆ ಮಾಡ ಬೇಕಾಗಿತ್ತು. ಪಾಲಿಕೆ ಚುನಾವಣೆ ಮುಂದೂಡಲು ಈ ಹುನ್ನಾರ ಎಂದು ಆರೋಪಿಸಿದರು.

ನಗರಸಭೆ, ಪಟ್ಟಣ ಪಂಚಾಯಿತಿ, ಗ್ರಾಮ ಪಂಚಾಯಿತಿಗಳನ್ನು ಸೇರಿಸಿ ಗ್ರೇಟರ್ ಮೈಸೂರು ಮಾಡಲು ಕನಿಷ್ಠ ಇನ್ನು ಎರಡು ವರ್ಷವಾಗುತ್ತದೆ. ಈ ಸರ್ಕಾರದ ಅವಧಿ ಮುಗಿಯುವ ತನಕ ನಗರಪಾಲಿಕೆ ಚುನಾವಣೆ ಮಾಡದೇ ಇರಲು ಇಂತಹ ಯೋಜನಾಬದ್ಧ ತಂತ್ರ ರೂಪಿಸಿದ್ದಾರೆ ಎಂದು ಆಪಾದಿಸಿದರು.

ನಗರ ಪಾಲಿಕೆ ಚುನಾವಣೆ ನಡೆಸಲು ನಿಮಗೆ ಅಂಜಿಕೆ ಏಕೆ? ಚುನಾವಣೆ ನಡೆದರೆ ಕಾಂಗ್ರೆಸ್ ಹೀನಾಯವಾಗಿ ಸೋಲುತ್ತದೆ ಎಂಬ ಕಾರಣದಿಂದ ಈ ರೀತಿಯ ಷಡ್ಯಂತ್ರ ರೂಪಿಸಿದ್ದಾರೆ ಎಂದು ಸಾ.ರಾ.ಮಹೇಶ್ ದೂರಿದರು.

ಮೈಸೂರಿನ ಕಲಾಮಂದಿರ ಬಳಿಯಿಂದ ಹೂಟಗಳ್ಳಿವರೆಗೆ ಫ್ಲೈಓವರ್ ನಿರ್ಮಾಣ ಮಾಡಲು ಉದ್ದೇಶಿಸಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು, ಮೈಸೂರಿನ ಪಾರಂಪರಿಕ ಸೌಂದರ್ಯಕ್ಕೆ ಧಕ್ಕೆಯಾಗುತ್ತದೆ ಎಂದು ಸಂಸದ ಯದುವೀರ್ ವಿರೋಧ ಮಾಡಿದ್ದಾರೆ. ಈಗಲೇ ಫ್ಲೈವರ್ ಅವಶ್ಯವಿಲ್ಲ ಎಂಬುದು ನನ್ನ ಅಭಿಪ್ರಾಯವೂ ಆಗಿದೆ. ಅಗತ್ಯವಿದ್ದ ಕಡೆ ಮಾಡಿದರೆ ನಮ್ಮ ವಿರೋಧವಿಲ್ಲ ಎಂದು ಸ್ಪಷ್ಟಪಡಿಸಿದರು.

ರಾಜ್ಯದಲ್ಲಿ ನವಂಬರ್‌ನಲ್ಲಿ ಯಾವ ಕ್ರಾಂತಿಯೂ ಆಗುವುದಿಲ್ಲ. ಆದರೆ ಅಧಿಕಾರ ಹಸ್ತಾಂತರವಾಗಬಹುದು. ಐದು ವರ್ಷ ನಾನೇ ಸಿಎಂ ಎಂದು ಹೇಳುತ್ತಿರುವ ಸಿದ್ದರಾಮಯ್ಯ ಅವರು ಡಿ.ಕೆ.ಶಿವಕುಮಾರ್ ಅವರಿಗೆ ಅಧಿಕಾರ ಬಿಟ್ಟು ಕೊಡುತ್ತಾರೆಯೇ? ಸಂಶಯ ವ್ಯಕ್ತಪಡಿಸಿದರು.

ಒಂದು ವೇಳೆ ಸ್ಥಳೀಯ ಸಂಸ್ಥೆ ಚುನಾವಣೆ ನಡೆದರೆ ಬಿಜೆಪಿ ಮತ್ತು ಜೆಡಿಎಸ್ ಮೈತ್ರಿಯಾಗುವ ಸಂಬಂಧ ಎಂದು ಈಗಾಗಲೇ ಎರಡು ಪಕ್ಷದ ವರಿಷ್ಠರು ನಿರ್ಧಾರ ಮಾಡಿದ್ದಾರೆ ಎಂದು ತಿಳಿಸಿದರು.

ಮತ್ತೆ ಭೂಮಿಪೂಜೆ: ಮೈಸೂರಿನ ಕೆಆರ್.ನಗರ ಕ್ಷೇತ್ರದಲ್ಲಿ ನಾನು ಶಾಸಕನಾಗಿದ್ದಾಗ ಬಹಳಷ್ಟು ಅಭಿವೃದ್ಧಿ ಮಾಡಿದ್ದೇನೆ. ಕೆಲವು ಅಭಿವೃದ್ಧಿ ಕೈಗೆತ್ತಿಕೊಳ್ಳುವ ಹಂತದಲ್ಲಿವೆ. ಹೀಗಿರುವಾಗ ನಾನು ಯಾವುದೇ ಅಭಿವೃದ್ಧಿ ಮಾಡಿಲ್ಲ ಎಂದು ಶಾಸಕ ರವಿಶಂಕರ್ ನನ್ನ ವಿರುದ್ಧ ಆರೋಪಿಸುತ್ತಾರೆ. ಸಿದ್ದರಾಮಯ್ಯ ಗುದ್ದಲಿಪೂಜೆ ನೆರವೇರಿಸುವ ಯೋಜನೆಗಳಿಗೆ ಮತ್ತೆ ರವಿಶಂಕರ್ ಅವರು ಭೂಮಿಪೂಜೆ ನಡೆಸುತ್ತಿದ್ದಾರೆ ಎಂದು ಸಾ.ರಾ.ಮಹೇಶ್ ಟೀಕಿಸಿದರು.

ದುಂದು ವೆಚ್ಚದಲ್ಲಿ ಸಿದ್ದರಾಮಯ್ಯ ದಾಖಲೆ

ಕರ್ನಾಟಕದಲ್ಲಿ ಅತೀ ಹೆಚ್ಚು ಸಾಲ ಮಾಡಿದ ಹಾಗೂ ಅತೀ ಹೆಚ್ಚು ಚಾಪರ್ (ವಿಶೇಷ ವಿಮಾನ) ಬಳಸುವ ಮುಖ್ಯಮಂತ್ರಿ ಸಿದ್ದರಾಮಯ್ಯ ದಾಖಲೆ ನಿರ್ಮಾಣ ಮಾಡಿದ್ದಾರೆ ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ದೂರಿದರು.

ಕರ್ನಾಟಕ ಸರ್ಕಾರ ಈಗ ಒಟ್ಟು 7.81 ಲಕ್ಷ ಕೋಟಿ ಸಾಲ ಮಾಡಿದೆ. ಇದರಲ್ಲಿ ಸಿದ್ದರಾಮಯ್ಯ ಒಬ್ಬರೆ 4.91 ಕೋಟಿ ಸಾಲ ಮಾಡಿದ್ದಾರೆ. ದೇವರಾಜ ಅರಸ್ ಹಾಗೂ ಮೈಸೂರು ರಾಜರನ್ನು ಮೀರಿಸಿದ ಅಭಿವೃದ್ಧಿ ಮಾಡಿದ್ದಾರೆ ಎಂದು ಸಿದ್ದರಾಮಯ್ಯ ಹಿಂಬಾಲಕರು ತಮ್ಮ ಗುರುವಿನ ಬಗ್ಗೆ ಕೊಂಡಾಡುತ್ತಾರೆ. ಆದರೆ ಇಷ್ಟೊಂದು ಸಾಲ ಮಾಡಿ, ಪ್ರತಿ ದಿನ ವಿಮಾನದಲ್ಲೇ ಹಾರಾಡುವ ಸಿದ್ದರಾಮಯ್ಯ ಅವರನ್ನು ಜನರು ಹೊಗಳುತ್ತಿಲ್ಲ ಎಂದರು. ಈ ಸರ್ಕಾರ ಜನ ವಿರೋಧಿ ಮಾತ್ರವಲ್ಲ, ರೈತ ವಿರೋಧಿ ಕೂಡ. ಈಗ ನಂದಿನಿ ತುಪ್ಪದ ಬೆಲೆ ಹೆಚ್ಚಳ ಮಾಡಿದ್ದಾರೆ. ಆದರೆ, ಏರಿಕೆಯಾಗುವ ಹಣವನ್ನು ರೈತರಿಗೆ ನೀಡುತ್ತಿಲ್ಲ. ಹೀಗಿರುವಾಗ ಇದು ರೈತ ಪರ ಸರ್ಕಾರ ಹೇಗೆ ಆಗುತ್ತದೆ ಎಂದು ಸಾ.ರಾ.ಮಹೇಶ್ ಪ್ರಶ್ನಿಸಿದರು.

ಹುಟ್ಟುಹಬ್ಬದ ಶುಭಾಶಯ...



ತನ್ನ 50ನೇ ಹುಟ್ಟುಹಬ್ಬ ಆಚರಿಸಿಕೊಂಡ ರಾಜ್ಯ ಬಿಜೆಪಿ ಅಧ್ಯಕ್ಷರೂ ಆದ ಶಿಕಾರಿಪುರ ಕ್ಷೇತ್ರದ ಶಾಸಕರಾದ ಬಿ.ವೈ.ವಿಜಯೇಂದ್ರ ಅವರನ್ನು ಬೆಂಗಳೂರಿನ ಅವರ ನಿವಾಸದಲ್ಲಿ ಮೈಸೂರು ಜಿಲ್ಲಾ ಬಿಜೆಪಿ ಗ್ರಾಮಾಂತರ ನಿಕಟಪೂರ್ವ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ನೆನಪಿಕ ಕಾಣಿಕೆ ನೀಡಿ, ಅಭಿನಂದಿಸಿ, ಹುಟ್ಟುಹಬ್ಬದ ಶುಭಾಶಯ ಕೋರಿದರು.

ನ.10ರಿಂದ ಮೂತ್ರಾಶ್ಮರಿ ತಜ್ಞವೈದ್ಯರಿಂದ ಉಚಿತ ತಪಾಸಣೆ, ಚಿಕಿತ್ಸಾ ಶಿಬಿರ

ಮೈಸೂರು, ನ.6– ಮೈಸೂರು ನ್ಯೂ ಸಂಯ್ಯಾಜಿರಾವ್ ರಸ್ತೆ, ವಿಶ್ವೇಶ್ವರಯ್ಯ ವೃತ್ತದ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯ ಶಲ್ಯತಂತ್ರ ಹೊರರೋಗಿ ವಿಭಾಗದಲ್ಲಿ ನ.10ರಿಂದ ಡಿ.12 ರವರೆಗೆ 'ಮೂತ್ರಾಶ್ಮರಿ' ರೋಗಕ್ಕೆ ವಿಶೇಷ ಚಿಕಿತ್ಸಾ ಶಿಬಿರವನ್ನು ಬೆಳಗ್ಗೆ 10 ರಿಂದ ಸಂಜೆ 4 ಗಂಟೆಯವರೆಗೆ ಆಯೋಜಿಸಲಾಗಿದೆ ಮಾಹಿತಿಗಾಗಿ ಡಾ. ಕೆರೋಲಿನ್, ಸಹಾಯಕ ಪ್ರಾಧ್ಯಾಪಕರು (ಮೊಬೈಲ್ ಸಂಖ್ಯೆ: 9449412309)ರನ್ನು ಸಂಪರ್ಕಿಸಬಹುದಾಗಿದೆಎಂದು ಪ್ರಕಟಣೆ ತಿಳಿಸಿದೆ

ವರದಿಗಾರರ ಕೂಟದ ಲಾಂಛನ ಬಿಡುಗಡೆ



ಬೆಂಗಳೂರು ವರದಿಗಾರರ ಕೂಟದ ಸುವರ್ಣ ಮಹೋತ್ಸವ–55 ಲಾಂಛನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಗೃಹ ಕಚೇರಿ ಕೃಷ್ಣಾದಲ್ಲಿ ಬಿಡುಗಡೆ ಮಾಡಿ ಶುಭ ಹಾರೈಸಿದರು. ಈ ವೇಳೆ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, ಕೂಟದ ಅಧ್ಯಕ್ಷ ಆರ್.ಟಿ.ವಿಠ್ಠಲಮೂರ್ತಿ, ಪ್ರಧಾನ ಕಾರ್ಯದರ್ಶಿ ಹೆಚ್.ವಿ.ಕಿರಣ್, ಪದಾಧಿಕಾರಿಗಳು, ವರದಿಗಾರರು ಇದ್ದರು.

ಎನ್‌ಎಸ್‌ಎಸ್ ಘಟಕ ಉದ್ಘಾಟನೆ...



ಮೈಸೂರಿನ ಡಾ.ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಲಾ ವತಿಯಿಂದ ವಾಜಮಂಗಲದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಗಿಡಕ್ಕೆ ನೀರೆರೆಯುವ ಮೂಲಕ ಎನ್‌ಎಸ್‌ಎಸ್ ಘಟಕ ಉದ್ಘಾಟಿಸಲಾಯಿತು. ಲಾ ಕಾಲೇಜು ಪ್ರಾಂಶುಪಾಲ ಡಾ.ಗುರುಸ್ವಾಮಿ,ಪಂಚಾಯತಿ ಅಭಿವೃದ್ಧಿ ಅಧಿಕಾರಿ ಬಸವರಾಜು, ಶಾಲೆಯ ಮುಖ್ಯ ಶಿಕ್ಷಕ ಗಿರೀಶ್, ಲಾ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಮಾಧವಮೂರ್ತಿ, ಚೈತ್ರ, ಕಾನೂನು ಪದವಿ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಜನಗಣಮನ ಬ್ರಿಟಿಷ್ ಅಧಿಕಾರಿ ಸ್ವಾಗತಕ್ಕೆ ರಚಿಸಿದ್ದ ಗೀತೆ

ವಿವಾದ ಸೃಷ್ಟಿಸಿದ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿಕೆ; ಪ್ರಿಯಾಂಕ್ ಖರ್ಗೆ ಕಿಡಿ




ಕಾರವಾರ, ನ.6– ಜನಗಣಮನ ಬ್ರಿಟಿಷ್ ಅಧಿಕಾರಿ ಸ್ವಾಗತಕ್ಕೆ ರಚಿಸಿದ್ದ ಗೀತೆಯಾಗಿದೆ ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಹೇಳಿದ್ದು, ಈ ಹೇಳಿಕೆ ಈಗ ವಿವಾದ ಸೃಷ್ಟಿಸಿದೆ.

ಹೊನ್ನಾವರದಲ್ಲಿ ಬುಧವಾರ ಸರ್ದಾರ್ ವಲ್ಲಭಭಾಯಿ ಪಟೇಲ್ 150ನೇ ಜನ್ಮ ದಿನಾಚರಣೆ ಅಂಗವಾಗಿ ನಡೆದ ಏಕತೆಗಾಗಿ ನಡಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಕಾಗೇರಿಯವರು ಮಾತನಾಡಿದ್ದಾರೆ.

ಬಂಕಿಮ್ ಚಂದ್ರ ಚಟರ್ಜಿ ಬರೆದ ವಂದೇ ಮಾತರಂ ಜನಗಣ ಮನಕ್ಕೆ ಸಮನಾಗಿದೆ. ವಂದೇ ಮಾತರಂ ಅನ್ನು ರಾಷ್ಟ್ರಗೀತೆಯನ್ನಾಗಿ ಮಾಡಲು ಸಾಕಷ್ಟು ಒತ್ತಡವಿತ್ತು. ಆದರೆ, ನಮ್ಮ ಪೂರ್ವ ಜರು ಬ್ರಿಟಿಷ್ ಅಧಿಕಾರಿ ಸ್ವಾಗತಕ್ಕೆ ಜನ ಗಣ ಮನ ಹಾಗೂ ರಾಷ್ಟ್ರೀಯ ಗೀತೆಯಾಗಿ ವಂದೇ ಮಾತರಂ ಅನ್ನು ರಚಿಸಿದ್ದರು. ಆದ್ದರಿಂದ ನಾವು ಎರಡೂ ರಾಷ್ಟ್ರಗೀತೆಗಳನ್ನು ಹೊಂದಿದ್ದೇವೆಂದರು. ಸ್ವಾತಂತ್ರ್ಯ ಹೋರಾಟಕ್ಕೆ ವಂದೇ ಮಾತರಂ ಗೀತೆ ಪ್ರೇರಣೆ ನೀಡಿತ್ತು. ಸ್ವಾತಂತ್ರ್ಯ ಹೋರಾಟಕ್ಕೆ ನೀಡಿದ ಕೊಡುಗೆಗಳಿಂದಾಗಿ ವಂದೇ ಮಾತರಂ ಯಾವಾಗಲೂ ನಮಗೆ ಸ್ಫೂರ್ತಿ ನೀಡಿದೆ ಎಂದರು. ಕಾಗೇರಿ ಹೇಳಿಕೆಗೆ ತೀವ್ರವಾಗಿ ಕಿಡಿಕಾರಿರುವ ಸಚಿವ ಪ್ರಿಯಾಂಕ್ ಖರ್ಗೆ, ನಮ್ಮ ರಾಷ್ಟ್ರಗೀತೆಯು 'ಬ್ರಿಟಿಷ್' ಸ್ವಾಗತಗೀತೆ ಎಂದು ಪ್ರತಿಪಾದಿಸಿದ್ದಾರೆ. ಇದು ಶುದ್ಧ ಅಸಂಬದ್ಧ ಎಂದು ಕಿಡಿಕಾರಿದ್ದಾರೆ.

ವಕೀಲ, ಉದ್ಯಮಿ ಹರೀಶ್‌ಕುಮಾರ್ ಹೆಗ್ಡೆ ಹುಟ್ಟುಹಬ್ಬ ಆಚರಣೆ





ಮೈಸೂರಿನ ಚಾಮರಾಜಪುರಂನಲ್ಲಿರುವ ಹೋಟೆಲ್ ಏರ್‌ಲೈನ್ಸ್ ಆವರಣದಲ್ಲಿ ಖ್ಯಾತ ವಕೀಲ ಎಂ.ಡಿ.ಹರೀಶ್‌ಕುಮಾರ್ ಹೆಗ್ಡೆ ಅವರ ಹುಟ್ಟುಹಬ್ಬವನ್ನು ಆಚರಿಸಲಾಯಿತು. ಮತ್ತೊಂದು ಚಿತ್ರದಲ್ಲಿ ರಾಜ್ಯೋತ್ಸವ ಪುರಸ್ಕಾರ ಪಡೆದ ವಕೀಲರಾದ ತಿಮ್ಮಯ್ಯ, ಕುಮಾರ ದಾಸನಕೊಪ್ಪಲು ಮತ್ತು ರಾಜ್ಯ ಸರ್ಕಾರಿ ವಕೀಲರ ಸಂಘದ ಅಧ್ಯಕ್ಷರಾಗಿ ಆಯ್ಕೆಗೊಂಡಿರುವ ಎಂ.ಮಹದೇವಸ್ವಾಮಿ ಅವರನ್ನು ಅಭಿನಂದಿಸಲಾಯಿತು.

ಭಾಷ್ಯಂ ಸ್ವಾಮೀಜಿ, ಶಾಸಕರು, ಮುಖಂಡರು ಭಾಗಿ

ಮೈಸೂರು,ನ.6(ಜಿಎ)–ಮೈಸೂರಿನ ಚಾಮರಾಜಪುರಂನಲ್ಲಿರುವ ಹೋಟೆಲ್ ಏರ್‌ಲೈನ್ಸ್‌ನ 25ನೇ ವಾರ್ಷಿಕೋತ್ಸವ ಮತ್ತು ಖ್ಯಾತ ವಕೀಲ ಎಂ.ಡಿ. ಹರೀಶ್‌ಕುಮಾರ್ ಹೆಗ್ಡೆ ಅವರ ಹುಟ್ಟುಹಬ್ಬವನ್ನು ಹೋಟೆಲ್ ಆವರಣದಲ್ಲಿ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಶ್ರೀ ಯೋಗನರಸಿಂಹ ಸ್ವಾಮಿ ದೇವಸ್ಥಾನದ ಸಂಸ್ಥಾಪಕರಾದ ಪ್ರೊ.ಭಾಷ್ಯಂ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಿ, ಎಂ.ಡಿ.ಹರೀಶ್‌ಕುಮಾರ್ ಹೆಗ್ಡೆ ಕುಟುಂಬಕ್ಕೆ ಆಶೀರ್ವದಿಸಿದರು. ಶಾಸಕರಾದ ಜಿ.ಟಿ. ದೇವೇಗೌಡ, ಕೆ.ಹರೀಶ್‌ಗೌಡ, ಟಿ.ಎಸ್.ಶ್ರೀವತ್ಸ, ಮೈಸೂರು ವಕೀಲರ ಸಂಘದ ಅಧ್ಯಕ್ಷ ಲೋಕೇಶ್, ಮಾಜಿ ಅಧ್ಯಕ್ಷ ಎಂ.ಮಹದೇವಸ್ವಾಮಿ, ಮಾಜಿ ಕಾರ್ಯದರ್ಶಿ ಉಮೇಶ್ ಸೇರಿದಂತೆ ಉದ್ಯಮಿಗಳು, ನೂರಾರು ಅಭಿಮಾನಿಗಳು ಶುಭ ಕೋರಿದರು.

ಈ ವೇಳೆ ಶಾಸಕ ಕೆ.ಹರೀಶ್‌ಗೌಡ ಮಾತನಾಡಿ, ಹರೀಶ್‌ಕುಮಾರ್ ಹೆಗಡೆ ಅವರು ಸಮಾಜಮುಖಿ ಸಾಕಷ್ಟು ಕೆಲಸವನ್ನು ಮಾಡಿದ್ದಾರೆ. ನಾನು ಪಕ್ಷೇತರ ಅಭ್ಯರ್ಥಿ ಮತ್ತು ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಾಗ ಸ್ವತಃ ಅವರೇ ಕರೆದು ಸಹಾಯ ಮಾಡಿದ್ದಾರೆ. ಅವರ ಆಶೀರ್ವಾದದಿಂದ ಶಾಸಕ ಆಗಿದ್ದೇನೆ. ದೇವರು ಅವರಿಗೆ ಮತ್ತಷ್ಟು ಸಮಾಜ ಸೇವೆ ಮಾಡಲು ಹೆಚ್ಚಿನ ಆರೋಗ್ಯ, ಐಶ್ವರ್ಯ ನೀಡಲಿ ಎಂದು ಶುಭ ಹಾರೈಸಿದರು.

ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಹರೀಶ್ ಕುಮಾರ್ ಹೆಗ್ಡೆ ವಕೀಲ ವೃತ್ತಿಯಿಂದ ಸಾವಿರಾರು ಜನರಿಗೆ ನ್ಯಾಯ ಒದಗಿಸುವ ಮೂಲಕ ನೊಂದವರ ಧ್ವನಿಯಾಗಿದ್ದಾರೆ. ಸಮಾಜಕ್ಕೆ ವಕೀಲ ವೃತ್ತಿ, ಉದ್ಯಮಿಯಾಗಿ ಮಾರ್ಗದರ್ಶಕರಾಗಿ ಸಾಕಷ್ಟು ಕೊಡುಗೆ ನೀಡಿರುವ ಅವರು ಸ್ನೇಹಕ್ಕೆ ಬೆಲೆ ನೀಡುತ್ತಾರೆ ಎಂದರು.

ವಕೀಲರ ಸಂಘದ ಅಧ್ಯಕ್ಷ ಲೋಕೇಶ್ ಮಾತನಾಡಿ, ನಾನು 1998ರಲ್ಲಿ ವಕೀಲ ವೃತ್ತಿ ಆರಂಭಿಸಿದ್ದು, ಆಗ ಹರೀಶ್‌ಕುಮಾರ್ ಹೆಗ್ಡೆ ವಕೀಲ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡಿದ್ದರು. ಅವರು ವಕೀಲರು ಉದ್ಯಮ ಕ್ಷೇತ್ರದ ಜೊತೆ ಸಮಾಜಕ್ಕೆ ಕೊಡುಗೆ ನೀಡಿದ್ದಾರೆ. ಪ್ರತಿದಿನ ಹೆಚ್ಚು ಅಧ್ಯಯನ ನಡೆಸಿದ ಪರಿಶ್ರಮ ದಿಂದ ಅವರು ಹೆಚ್ಚು ಖ್ಯಾತಿ ಗಳಿಸಿದ್ದಾರೆ. ಎಲ್ಲಾ ಪ್ರಕರಣಗಳನ್ನು ಉತ್ತಮವಾಗಿ ನಿರ್ವಹಣೆ ಮಾಡಿ ದ್ದಾರೆ ಎಂದು ವೃತ್ತಿ ಜೀವನವನ್ನು ವರ್ಣಿಸಿದರು.

ಕಾವೇರಿ ಆಸ್ಪತ್ರೆ ಮುಖ್ಯಸ್ಥ ಡಾ.ಚಂದ್ರಶೇಖರ್ ಮಾತನಾಡಿ, ಹೋಟೆಲ್ ಸೇರಿದಂತೆ ಇತರೆ ಉದ್ಯಮಗಳನ್ನು ಆರಂಭಿಸಿ ಸಾವಿರಾರು ಉದ್ಯೋಗಗಳನ್ನು ಸೃಷ್ಟಿಸಿರುವ ಅವರು, ಮಾಲೀಕರು, ಉದ್ಯೋಗಿಗಳು ಎಂಬ ಯಾವುದೇ ಬೇಧಭಾವವಿಲ್ಲದೆ ಉದ್ಯೋಗಿಗಳ ಜೊತೆ ಸಂತೋಷ ಸಮಯವನ್ನು ಕಳೆಯುತ್ತಾರೆ ಎಂದರು.

ಕಾರ್ಯಕ್ರಮದಲ್ಲಿ ಇತ್ತೀಚೆಗೆ ರಾಜ್ಯಮಟ್ಟದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಮೈಸೂರಿನ ವಕೀಲರಾದ ತಿಮ್ಮಯ್ಯ, ಕುಮಾರ ದಾಸನಕೊಪ್ಪಲು, ಗೋಕುಲ್ ಗೋವರ್ಧನ್ ಮತ್ತು ರಾಜ್ಯ ಸರ್ಕಾರಿ ವಕೀಲರ ಸಂಘದ ಅಧ್ಯಕ್ಷರಾಗಿ ಆಯ್ಕೆಗೊಂಡಿರುವ ಎಂ.ಮಹದೇವಸ್ವಾಮಿ ಅವರನ್ನು ಅಭಿನಂದಿಸಲಾಯಿತು. ಪಾಲಿಕೆ ಮಾಜಿ ಸದಸ್ಯ ಲೋಕೇಶ್ ಪಿಯಾ ಹಾಗೂ ಹರೀಶ್‌ಕುಮಾರ್ ಹೆಗಡೆ ಅವರ ಅಭಿಮಾನಿಗಳು ಬೃಹತ್ ಹೂವಿನ ಹಾರ ಹಾಕಿ ದೊಡ್ಡ ಕೇಕ್ ಕತ್ತರಿಸುವ ಮೂಲಕ ಹುಟ್ಟುಹಬ್ಬ ಆಚರಿಸಿದರು. ಈ ವೇಳೆ ಹಿರಿಯ ವಕೀಲರು ಮತ್ತು ಲಾಗೈಡ್ ಮಾಸಿಕ ಪತ್ರಿಕೆ ಸಂಪಾದಕರಾದ ವೆಂಕಟೇಶ್ ಉಪಸ್ಥಿತರಿದ್ದರು.

ಮಂಡ್ಯದಲ್ಲಿ ಕೈಗಾರಿಕೆ ಸ್ಥಾಪನೆಗೆ ನೂರು ಎಕರೆ ಜಾಗ ಗುರುತಿಸಿ

ದಿಶಾ ಸಭೆಯಲ್ಲಿ ಜಿಲ್ಲಾಧಿಕಾರಿ, ಕೆಐಎಡಿಬಿ ಅಧಿಕಾರಿಗೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಸೂಚನೆ

ಮಂಡ್ಯ, ನ.6– ಸ್ಥಳೀಯ ಜನರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಕಾರ್ಖಾನೆಯನ್ನು ಸ್ಥಾಪಿಸುವ ನಿಟ್ಟಿನಲ್ಲಿ ಜಿಲ್ಲೆಯ ನಾಗಮಂಗಲ ಅಥವಾ ಮಳವಳ್ಳಿ ತಾಲೂಕಿನಲ್ಲಿ ಕನಿಷ್ಟ ನೂರು ಎಕರೆ ಜಾಗವನ್ನು ಗುರುತು ಮಾಡುವಂತೆ ಜಿಲ್ಲಾಧಿಕಾರಿ ಹಾಗೂ ಕೆಐಎಡಿಬಿ ಅಧಿಕಾರಿಗೆ ಕೇಂದ್ರದ ಉಕ್ಕು ಹಾಗೂ ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ. ಕುಮಾರಸ್ವಾಮಿ ಸೂಚಿಸಿದರು.

ಗುರುವಾರ ನಗರದ ಜಿಲ್ಲಾ ಪಂಚಾಯತ್‌ನ ಕಾವೇರಿ ಸಭಾಂಗಣದಲ್ಲಿ ನಡೆದ ದಿಶಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಅಧಿಕಾರಿಗಳು ಜಾಗ ಗುರುತಿಸಿ, ಡಿನೋಟಿಫೈಗೆ ಎಲ್ಲಾ ಪ್ರಕ್ರಿಯೆ ನಡೆಸಿ, ನನಗೆ ತಿಳಿಸಿದರೆ ಮುಂದೆ ಆಗಬೇಕಾದ ಕೆಲಸವನ್ನು ಕೇಂದ್ರ ಸರ್ಕಾರದ ವತಿಯಿಂದ ನಾನು ಮಾಡುವೆ ಎಂದು ಸ್ಪಷ್ಟಪಡಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಡಾ.ಕುಮಾರ ಮಂಡ್ಯದಲ್ಲಿ ಸರ್ಕಾರಿ ಹಾಗೂ ಖಾಸಗಿ ಸೇರಿ ನಾಲ್ಕು ಸಕ್ಕರೆ ಕಾರ್ಖಾನೆಗಳಿವೆ. ಇವು ಸೇರಿ ಒಟ್ಟು 12 ಕೈಗಾರಿಕಾ ಪ್ರದೇಶಗಳು ಜಿಲ್ಲೆಯಲ್ಲಿದ್ದು, ಮತ್ತೊಂದು ಕಾರ್ಖಾನೆ ಸ್ಥಾಪಿಸುವ ನಿಟ್ಟಿನಲ್ಲಿ ಮಂಡ್ಯ ತಾಲೂಕಿನ ಹಟ್ನದಲ್ಲಿ 1220 ಎಕರೆ ಡಿನೋಟಿಫೈ ಆಗಿದೆ, ಮದ್ದೂರು ತಾಲೂಕಿನ ಕುದುರುಗುಂಡಿಯಲ್ಲಿ 109 ಎಕರೆ ಡಿನೋಟಿಫೈ ಆಗಿ ಎಕರೆಗೆ 35 ಲಕ್ಷ ಹಣವೂ ನಿಗದಿಯಾಗಿದೆ. ಆದರೆ ಪ್ರಕರಣ ನ್ಯಾಯಾಲಯದಲ್ಲಿದೆ. ಮಳವಳ್ಳಿಯ ಪಂಡಿತನಹಳ್ಳಿಯಲ್ಲಿ ಗುರುತಿಸಿರುವ 1249 ಎಕರೆ ಡಿನೋಟಿಫೈ ಆಗಿದೆ. ಮಂಡ್ಯ ತಾಲೂಕಿನ ನೊದೆ ಕೊಪ್ಪಲಿನಲ್ಲಿ 284 ಎಕರೆ ಡಿನೋಟಿಫೈಗೆ ವಿರೋಧ ವ್ಯಕ್ತವಾಗಿದೆ. ಮಳವಳ್ಳಿಯ ಪಂಡಿತನಹಳ್ಳಿಯ ರೈತರೊಂದಿಗೆ ತಾವು ಮಾತನಾಡಿದರೆ ಆ ಜಾಗ ಕಾರ್ಖಾನೆ ಸ್ಥಾಪಿಸಲು ಸುಲಭವಾಗಿ ಸಿಗಬಹುದೆಂದು ಹೆಚ್ಡಿಕೆಗೆ ಮಾಹಿತಿ ನೀಡಿದರು. ಮಳವಳ್ಳಿ ಸೇರಿದಂತೆ ನಾಗಮಂಗಲದಲ್ಲೂ ಜಾಗ ಗುರುತು ಮಾಡಿ, ಸಂಬಂಧಪಟ್ಟವರೊಂದಿಗೆ ನಾನು ಸಹ ಮಾತನಾಡುವೆ ಎಂದು ಡಿಸಿಗೆ ಸೂಚಿಸಿದರು.

ಕಡೆ ಭಾಗಕ್ಕೆ ನೀರು ಬರುತ್ತಿಲ್ಲ: ಕಾರ್ಖಾನೆ ಸ್ಥಾಪನೆ ವಿಚಾರ ಮುಗಿಯುತ್ತಿದ್ದಂತೆ ಮಾಜಿ ಶಾಸಕ ಹಾಗೂ ದಿಶಾ ಕಮಿಟಿ ಸದಸ್ಯ ಡಾ.ಕೆ.ಅನ್ನದಾನಿ ಮಾತನಾಡಿ, ಮಳವಳ್ಳಿಯ ಕಡೆ ಭಾಗಕ್ಕೆ ನೀರು ತಲುಪುತ್ತಿಲ್ಲ. ಈ ಬಗ್ಗೆ ಪ್ರತಿ ದಿಶಾ ಸಭೆಯಲ್ಲೂ ಚರ್ಚೆ ಮಾಡಿದರೂ ಪ್ರಯೋಜನವಾಗುತ್ತಿಲ್ಲ ಎಂದು ಕಾವೇರಿ ಜಲಾನಯನ ನಿಗಮದ ರಘುರಾಂ ಮತ್ತು ಇನ್ನಿತರೆ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.



ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಗುರುವಾರ ಮಂಡ್ಯದಲ್ಲಿ ದಿಶಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಈ ಸಂದರ್ಭದಲ್ಲಿ ಇದಕ್ಕೆ ಪ್ರತಿಕ್ರಿಯಿಸಿದ ನಿಗಮದ ಅಧಿಕಾರಿಗಳು ಮಳವಳ್ಳಿಯ 174 ಕೆರೆಗಳ ಪೈಕಿ 154 ಕೆರೆಗಳು ಭರ್ತಿಯಾಗಿವೆ. ಇನ್ನು ಕೆಲ ಕೆರೆಗಳು ಮಾತ್ರ ಭರ್ತಿಯಾಗಬೇಕೆಂದು ಸಭೆಗೆ ಮಾಹಿತಿ ನೀಡಿದರು. ಆಗ ಮಧ್ಯ ಪ್ರವೇಶಿಸಿದ ಅನ್ನದಾನಿ, 154 ಕೆರೆಗಳು ಭರ್ತಿಯಾಗಿವೆ ಎನ್ನುವುದು ಸುಳ್ಳು ಮಾಹಿತಿ. 30ರಿಂದ 50% ತುಂಬಿವೆ. ಉಳಿದ 20 ಕೆರೆಗಳು ಏಕೆ ಭರ್ತಿಯಾಗಿಲ್ಲ ಎಂದು ಪ್ರಶ್ನಿಸಿದರು. ನಾಲಾ ಕಾಮಗಾರಿ ನಡೆಯುತ್ತಿರುವುದರಿಂದ ಜೊತೆಗೆ ಕೆಲ ಕೆರೆಗಳು ಭರ್ತಿಯಾಗಿ ಜನ ನೀರು ಬಳಕೆ ಮಾಡಿಕೊಂಡಿರುವುದರಿಂದ ಭರ್ತಿಯಾಗಿಲ್ಲ. ಈ ಬಗ್ಗೆ ಗಮನ ಹರಿಸುವುದಾಗಿ ಅಧಿಕಾರಿಗಳು ಸಭೆಗೆ ತಿಳಿಸಿದರು.

ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಮಾತನಾಡಿ, ಕೊಪ್ಪ ಭಾಗದ ಏಳು ಕೆರೆಗಳು ಸಮರ್ಪಕವಾಗಿ ಭರ್ತಿಯಾಗಿಲ್ಲ, ಈ ಬಗ್ಗೆ ನಾನು ಅಲ್ಲಿಗೆ ಭೇಟಿ ಕೊಟ್ಟು ಪರಿಶೀಲನೆ ನಡೆಸಿದ್ದೇನೆ ಎಂದಾಗ ನಿಗಮದ ರಘುರಾಂ ಮಾತನಾಡಿ, 7 ಕೆರೆಗಳ ಪೈಕಿ 5 ಕೆರೆ ಭರ್ತಿಯಾಗಿದ್ದು, ಇನ್ನುಳಿದ ಎರಡು ಕೆರೆ ತುಂಬಿಸುವುದಾಗಿ ಹೇಳಿದರು. ಇದಕ್ಕೆ ಆಕ್ಷೇಪಿಸಿದ ವಿವೇಕಾನಂದ ಕೆರೆಗಳು ಸಮರ್ಪಕವಾಗಿ ತುಂಬಿಲ್ಲ, ನಾನೇ ಪರಿಶೀಲನೆ ಮಾಡಿದ್ದು, ಸಭೆಗೆ ಸುಳ್ಳು ಮಾಹಿತಿ ಕೊಡದೇ ಕೂಡಲೇ ಕೆರೆ ತುಂಬಿಸುವ ಕೆಲಸ ಮಾಡಿ ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಈ ಎಲ್ಲಾ ವಿಚಾರಗಳ ಕುರಿತು ಮಾತನಾಡಿದ ಹೆಚ್.ಡಿ.ಕುಮಾರಸ್ವಾಮಿ, ಈ ವರ್ಷ ಮಳೆಯ ಕೊರತೆ ಇಲ್ಲ, ತಮಿಳುನಾಡಿಗೆ ಕೊಡಬೇಕಾದ ಈ ಸಾಲಿನ ನೀರನ್ನು ಕೊಡಲಾಗಿದೆ. ಅವರ ಕ್ಯಾತೆಯೂ ಇಲ್ಲದ ಕಾರಣ ನಮ್ಮ ಜಿಲ್ಲೆಯ ಎಲ್ಲಾ ಕೆರೆಗಳು ಮತ್ತು ನಾಲೆಗಳಿಗೆ ನೀರು ತುಂಬಿಸಿ ಭರ್ತಿ ಮಾಡುವಂತೆ ಸೂಚನೆ ನೀಡಿದರು.

ತಡೆಗೋಡೆ ನಿರ್ಮಿಸಲು ಕ್ರಮ ವಹಿಸಿ: ವಿ.ಸಿ.ನಾಲಾ ವ್ಯಾಪ್ತಿಯ ರಸ್ತೆಗಳಲ್ಲಿ ತಡೆಗೋಡೆ ಇಲ್ಲದ ಪರಿಣಾಮ ಅಪಘಾತ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನಲೆಯಲ್ಲಿ ಶಾಸಕ ರವಿಕುಮಾರ್ ಗಣಿಗ ಸಭೆಯ ಗಮನಕ್ಕೆ ತಂದರು. ಇದಕ್ಕೆ ಉತ್ತರಿಸಿದ ಕಾವೇರಿ ನೀರಾವರಿ ನಿಗಮದ ರಘುರಾಂ, ಕನಗನಮರಡಿ ನಾಲಾ ದುರಂತ ನಡೆದ ವ್ಯಾಪ್ತಿಯ ಐದು ಕಿಲೋ ಮೀಟರ್ ತಡೆಗೋಡೆ ನಿರ್ಮಿಸಲಾಗಿದೆ ಎಂದರು. ಆಗ ಶಾಸಕ ರವಿ ಅಲ್ಲಿ ಮಾತ್ರ ಅಲ್ಲಾ, ಜಿಲ್ಲೆಯ ಎಲ್ಲಾ ಕಡೆ ನಾಲಾ ಪಕ್ಕದ ರಸ್ತೆಯಲ್ಲಿ ತಡೆಗೋಡೆ ನಿರ್ಮಾಣಕ್ಕೆ ಸೂಚಿಸಿದರು.

ಶಾಸಕರಾದ ರವಿಕುಮಾರ್ ಗಣಿಗ, ಹೆಚ್.ಟಿ. ಮಂಜು, ಡಿಸಿ ಡಾ.ಕುಮಾರ, ಜಿಪಂ ಸಿಇಓ ಕೆ.ಆರ್.ನಂದಿನಿ, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಭಾಗವಹಿಸಿದ್ದರು.

ಅರಣ್ಯ ಭೂಮಿ ಉಳುಮೆ ಮಾಡುತ್ತಿದ್ದ ರೈತ ಮಂಜೇಗೌಡ

ಜಿಲ್ಲಾಧಿಕಾರಿ ಕಚೇರಿ ಮುಂದೆ ಆತ್ಮಹತ್ಯೆಗೆ ಶರಣಾದ ಕೆ.ಆರ್.ಪೇಟೆ ಮೂಲದ ರೈತ ಮಂಜೇಗೌಡನ ಸಮಸ್ಯೆ ಬಗ್ಗೆ ಸಭೆಗೆ ಮಾಹಿತಿ ನೀಡುವಂತೆ ಡಾ.ಅನ್ನದಾನಿ ಕೇಳಿದರು. ಈ ಬಗ್ಗೆ ಉತ್ತರಿಸಿದ ಜಿಲ್ಲಾಧಿಕಾರಿ ಕುಮಾರ, ಮಂಜೇಗೌಡನ ಆತ್ಮಹತ್ಯೆ ವಿಷಾದಕರವಾಗಿದ್ದು, ತಹಸೀಲ್ದಾರ್ ಕಚೇರಿಯಿಂದ ಅವರ ಐದು ಅಂಶ ಲಭ್ಯವಾಗಿದೆ. 1976ರಲ್ಲಿ ಅವರ ಜಮೀನು ಭೂಸ್ವಾಧೀನವಾಗಿದ್ದು, ಕಾನೂನು ಬದ್ಧವಾಗಿ ಅನುಮೋದನೆ ಮಾಡಿ, ದಾಖಲೆ ಸಮೇತ ಪರಿಹಾರ ನೀಡಲಾಗಿದೆ. ಅದಾಗ್ಯೂ ಇವರು ಅರಣ್ಯ ಜಾಗದಲ್ಲಿ ಉಳುಮೆ ಮಾಡುತ್ತಿದ್ದರಿಂದ ಅಧಿಕಾರಿಗಳು ತಿಳುವಳಿಕೆ ಹೇಳಿದ್ದಾರೆ. ಆದರೆ ನಮ್ಮ ಕುಟುಂಬದಲ್ಲಿ 10 ಮಂದಿ ಇದ್ದಾರೆ ಎಂದು ಹೆಚ್ಚಿನ ಪರಿಹಾರಕ್ಕೆ ಇತ್ತೀಚಿನ ದಿನಗಳಲ್ಲಿ ಆಗ್ರಹಿಸಿದ್ದರು. ಜೊತೆಗೆ ಅವರಿಗೆ ಜಮೀನು ಮಂಜೂರು ಮಾಡಲು ಆಗಲ್ಲ, ಏಕೆಂದರೆ 4 ಎಕರೆ ಅವರ ಬಳಿಯೇ ಜಮೀನಿದೆ. ಇದಲ್ಲದೇ 3.5 ಲಕ್ಷ ಸಾಲ ಮಾಡಿ, ಬಡ್ಡಿ ಸೇರಿ 7.79 ಲಕ್ಷ ಆಗಿದೆ ಎಂದು ವಿವರಿಸಿದರು.

ಮೈಷುಗರ್ ಶಾಲೆಯ ಶಿಕ್ಷಕರ ವೇತನ ಬಾಕಿ ಪಾವತಿಸಲು ತಮ್ಮ ವೇತನ ಮೀಸಲಿಟ್ಟ ಹೆಚ್ಡಿಕೆ



ಮಂಡ್ಯ,ನ.6– ಕಳೆದ ಹಲವು ತಿಂಗಳಿಂದ ವೇತನ ಇಲ್ಲದೆ ಸಂಕಷ್ಟದಲ್ಲಿ ಸಿಲುಕಿರುವ ನಗರದ ಐತಿಹಾಸಿಕ ಮೈಷುಗರ್ ಶಾಲೆಯ ಶಿಕ್ಷಕರ ನೆರವಿಗೆ ಧಾವಿಸಿರುವ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು, ಲೋಕಸಭೆ ಸದಸ್ಯನಾಗಿ ತಮ್ಮ ಈವರೆಗಿನ ವೇತನವನ್ನು ಶಿಕ್ಷಕರ ವೇತನ ಪಾವತಿಸಲು ಕೊಡುವುದಾಗಿ ಘೋಷಿಸಿದರು.

ಮೈಷುಗರ್ ಶಾಲೆಯ ಆವರಣದಲ್ಲಿ ಗುರುವಾರ ಬೆಳಗ್ಗೆ ನಡೆದ ಕಾರ್ಯಕ್ರಮದಲ್ಲಿ ಸಿಎಸ್ಆರ್ ನಿಧಿಯಿಂದ ಅತ್ಯಾಧುನಿಕ ಶಾಲಾ ವಾಹನವನ್ನು ಮೈಷುಗರ್ ಶಾಲೆಯ ಆಡಳಿತ ಮಂಡಳಿಗೆ ಹಸ್ತಾಂತರ ಮಾಡಿದ ನಂತರ, ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಕೇಂದ್ರ ಸಚಿವರು ಮಾತನಾಡಿದ ಅವರು ಶಿಕ್ಷಕರು ವೇತನವಿಲ್ಲದೆ ಕೆಲಸ ಮಾಡುತ್ತಿರುವುದು ಬಹಳ ನೋವಿನ ವಿಚಾರ. ಈವರೆಗೂ ಸುಮಾರು 20 ಲಕ್ಷ ಬಾಕಿ ವೇತನವಿದೆ. ಹೀಗಾಗಿ ನನ್ನ ವೇತನದ ಮೊತ್ತವನ್ನೇ ದೇಣಿಗೆಯಾಗಿ ನೀಡುತ್ತಿದ್ದೇನೆ. ಅನೇಕ ತಿಂಗಳಿಂದ ಶಿಕ್ಷಕರಿಗೆ ವೇತನ ನೀಡದಿರುವ ವ್ಯಕ್ತಿಗಳು ನನ್ನ ಬಗ್ಗೆ ಲಘುವಾಗಿ ಮಾತನಾಡುವುದು ಬೇಡ. ನನ್ನ ಬಗ್ಗೆ ಕೆಟ್ಟದಾಗಿ ಮಾತನಾಡುವ ಅಗತ್ಯವಿಲ್ಲ. ಮಾಧ್ಯಮಗಳ ಮುಂದೆಯೂ ಮಾತನಾಡುವ ಅಗತ್ಯವಿಲ್ಲ. ನಾನು ಈ ಶಾಲೆಯ ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದಾಗ 13 ತಿಂಗಳಿಂದ ಶಿಕ್ಷಕರಿಗೆ ವೇತನ ನೀಡಲಾಗಿಲ್ಲ ಎನ್ನುವ ಮಾಹಿತಿ ಸಿಕ್ಕಿತು. ಸಿಎಸ್ಆರ್ ನಿಧಿಯಿಂದ ವೇತನ ಕೊಡುವ ಅವಕಾಶ ಇಲ್ಲ ಎಂದು ಮಾಹಿತಿ ನೀಡಿದರು.

ಬಿಡದಿ ಟೌನ್‌ಶಿಪ್ ಹೆಸರಲ್ಲಿ ಫಲವತ್ತಾದ ಭೂಮಿ ಹೊಡೆಯಲು ಹುನ್ನಾರ

ಯಾರೂ ಒಂದು ಇಂಚು ಭೂಮಿ ಕೊಡಬೇಡಿ, ನಿಮ್ಮ ಜೊತೆ ನಾವಿದ್ದೇವೆ: ಹೆಚ್‌ಡಿಕೆ

ಮಂಡ್ಯ, ನ.6– ಬಿಡದಿ ಟೌನ್‌ಶಿಪ್ ಹೆಸರಿನಲ್ಲಿ ಈ ಸರ್ಕಾರ ರೈತರ ಫಲವತ್ತಾದ ಭೂಮಿಯನ್ನು ಲೂಟಿ ಹೊಡೆಯಲು ಹೊರಟಿದೆ ಯಾರೂ ಕೂಡ ಒಂದು ಇಂಚು ಭೂಮಿ ಕೊಡಬೇಡಿ. ಯಾರೂ ಹೆದರುವ ಅಗತ್ಯ ಇಲ್ಲ. ಜನರ ಜತೆ ನಾನಿದ್ದೇನೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಹೇಳಿದರು.

ನಗರದಲ್ಲಿ ದಿಶಾ ಸಮಿತಿ ಸಭೆಯ ನಂತರ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರದ ಬಿಡದಿ ಟೌನ್‌ಶಿಪ್‌ಗೆ ರೈತರು ವಿರೋಧ ಮಾಡುತ್ತಿದ್ದಾರೆ. ಕಳೆದ ಎರಡು ತಿಂಗಳಿನಿಂದ ರೈತರು ಅಹೋರಾತ್ರಿ ಧರಣಿ ನಡೆಸುತ್ತಿದ್ದಾರೆ.

ಬಿಡದಿ ಟೌನ್‌ಶಿಪ್ ಮಾಡುವುದು ಕುಮಾರಸ್ವಾಮಿ ಅವರ ಕಾಲದಲ್ಲಿ ಆಗಿರುವ ತೀರ್ಮಾನ ಎಂದು ನನ್ನ ಹೆಸರಿನಲ್ಲಿ ಶೆಲ್ಟರ್ ತೆಗೆದುಕೊಳ್ಳಬೇಡಿ. ನನ್ನ ಕಾಲದ ತೀರ್ಮಾನವೇ ಬೇರೆ, ಇವತ್ತಿನ ತೀರ್ಮಾನಗಳು ಬೇರೆ ಇವೆ. ಅಂದು ಭೂಮಿ ಬೆಲೆ ದೊಡ್ಡ ಮಟ್ಟದಲ್ಲಿರಲಿಲ್ಲ. ಆದರೆ, ಇವತ್ತು ಭೂಮಿಗೆ ಭಾರೀ ಬೆಲೆ ಬಂದಿದೆ. 9 ಸಾವಿರ ಎಕರೆ ಭೂಮಿಯನ್ನು ಟೌನ್‌ಶಿಪ್‌ಗೆ ಸ್ವಾಧೀನ ಮಾಡಿಕೊಳ್ಳಲು ಹೊರಟಿದ್ದಾರೆ. ರೈತರು ಇದಕ್ಕೆ ವಿರೋಧ ಇದ್ದಾರೆ. ನಾನು ರೈತರ ಪರ ಇದ್ದೇನೆ ಎಂದು ಸಚಿವರು ಹೇಳಿದರು.

ಈಗಲ್‌ಟನ್‌ಗೆ ನಿಗದಿ ಮಾಡಿದಷ್ಟು ಪರಿಹಾರ ನೀಡಲಿ: ಬಿಡದಿಯಲ್ಲಿ ಸರ್ಕಾರ ಸ್ವಾಧೀನ ಮಾಡಿಕೊಳ್ಳಲು ಹೊರಟಿರುವ ಭೂಮಿಯ ವ್ಯಾಪ್ತಿಯಲ್ಲಿಯೇ ಈಗಲ್‌ಟನ್ ಗಾಲ್ಫ್ ಕ್ಲಬ್ ಇದೆ. ಅದು ಸರಕಾರಿ ಕರಾಬು ಭೂಮಿ ಅತಿಕ್ರಮಿಸಿದೆ ಆರೋಪ ಮಾಡಲಾಗಿತ್ತು. ಆ ಸಂಸ್ಥೆಯ ಮೇಲೆ ಆರೋಪಗಳನ್ನು ಹೊರೆಸಿ 2018ರಲ್ಲಿ ಚದರ ಅಡಿ ಲೆಕ್ಕದಲ್ಲಿ ದಂಡ ವಿಧಿಸಿದ್ದಾರೆ. ಈಗಿನ ಉಪ ಮುಖ್ಯಮಂತ್ರಿ ಹಿಂದೆ ಡಿ.ಕೆ. ಶಿವಕುಮಾರ್ ಅದೇ ಈಗಲ್ ಟನ್ ಕ್ಲಬ್‌ಗೆ ಊಟಕ್ಕೆ ಹೋದಾಗ ಅಲ್ಲಿನ ಸಿಬ್ಬಂದಿ 98 ಸಾವಿರ ರೂಪಾಯಿ ಬಿಲ್ ಕೊಟ್ಟಿದ್ದರು. ನನಗೇ ಬಿಲ್ ಕೊಡುತ್ತೀರಾ ಎಂದು 70 ಎಕರೆ ಕರಾಬು ಭೂಮಿಗೆ 984 ಕೋಟಿ ದಂಡ ವಿಧಿಸಿದರು. ಅಂದರೆ, ಪ್ರತೀ ಎಕರೆಗೆ 13 ಕೋಟಿ ದಂಡ ವಿಧಿಸಬೇಕು ಎಂದು ಸಂಪುಟ ಸಭೆ ತೀರ್ಮಾನ ಕೈಗೊಂಡಿತು. ನಿಮ್ಮ ಪಕ್ಷವೇ ಅಧಿಕಾರದಲ್ಲಿ ಇದ್ದಾಗ ನಿಮ್ಮವರೇ ಸಿಎಂ, ಸಚಿವರು ಇದ್ದಾಗ ನೀವೆ ನಿಗದಿ ಮಾಡಿದ ದರ ಅದಲ್ಲವೇ? ಈಗ ನೀವೇ ರೈತರಿಗೆ 1:3 ಅನುಪಾತದಲ್ಲಿ ಪರಿಹಾರ ಕೊಟ್ಟುಬಿಡಿ ಎಂದು ಒತ್ತಾಯಿಸಿದರು.



ಕನಕಪುರದಲ್ಲಿ ಒಣಭೂಮಿ ಇದ್ರೆ ಅಲ್ಲಿ ಟೌನ್ ಶಿಪ್ ಮಾಡಲಿ: ಹಿಂದೆ ಕನಕಪುರದಲ್ಲಿ ಹಾಲಿನ ಡೇರಿ ಮಾಡುವಾಗ ರೈತರಿಗೆ ಎಷ್ಟು ದುಡ್ಡು ಕೊಟ್ಟಿರಿ? ನಿಮ್ಮ ಪಟಾಲಂಗೆ ಎಷ್ಟು ಪರಿಹಾರ ಕೊಟ್ಟಿರಿ? ಅಲ್ಲೆಲ್ಲೂ ಒಣ ಬೇಸಾಯದ ಭೂಮಿ ಇದೆ ಅಂತ ನಿಮ್ಮ ಅಧಿಕಾರಿಗಳೇ ಹೇಳುತ್ತಿದ್ದಾರೆ. ಆ ಭೂಮಿಯನ್ನೇ ವಶಕ್ಕೆ ತೆಗೆದುಕೊಂಡು ಟೌನ್ ಶಿಪ್ ಮಾಡಬಹುದು ಅಲ್ಲವೇ? ರಾಜ್ಯದಲ್ಲಿ ಬೇರೆ ಬೇರೆ ಇಂತಹ ಒಣ ಭೂಮಿ ಬೇಕಾದಷ್ಟು ಇದೆ. ಅಲ್ಲೆಲ್ಲ ಮಾಡುವುದು ಬಿಟ್ಟು ಬಿಡದಿಯ ಮೇಲೆಯೇ ಯಾಕೆ ಬಿದ್ದಿದ್ದೀರಿ ಎಂದು ಕೆಂಡ ಕಾರಿದರು.

ಕಬ್ಬು ಬೆಳೆಗಾರರ ನಿರ್ಲಕ್ಷ್ಯ; ರಾಜ್ಯ ಸರ್ಕಾರ ರೈತ ವಿರೋಧಿ ಎಂದ ಹೆಚ್ಡಿಕೆ: ನಾನು ಎರಡು ಬಾರಿ ರಾಜ್ಯದ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಇವತ್ತು ದರ ನಿಗದಿ ಕೇಳ್ತಿದ್ದಾರೆ ಅಷ್ಟೇ. ನಾನು ಅಧಿಕಾರದಲ್ಲಿ ಇದ್ದಾಗ ಕಬ್ಬು ಮಾರಾಟ ಮಾಡಲು ಆಗದ ಪರಿಸ್ಥಿತಿ ಇತ್ತು. ನಾನೇ ಅಂದು ಹಳ್ಳಿಗಳಿಗೆ ಭೇಟಿ ಕೊಟ್ಟಾಗ ಕಬ್ಬು ಒಣಗಿದ್ದದನ್ನು ಕಂಡೆ. ಆ ಸಂದರ್ಭದಲ್ಲಿ 25 ಸಾವಿರ ಕೋಟಿ ಸಾಲಮನ್ನಾ, ಕಬ್ಬು ಮಾರಾಟವಾಗದಿದ್ರೆ 25 ಸಾವಿರ ಸಹಾಯಧನ ಕೊಟ್ಟೆ, ಕಬ್ಬು ಬೆಳೆಗಾರರಿಗೆ ಒಟ್ಟು 250 ಕೋಟಿ ಕೊಟ್ಟೆ.ರೈತರನ್ನು ವಿಧಾನಸೌಧಕ್ಕೆ ಕರೆಸಿ ಮಾತುಕತೆ ನಡೆಸಿದೆ ಎಂದು ಹೇಳಿದರು.

ಸ್ವತಂತ್ರ ಸರ್ಕಾರ ಇಲ್ಲದ ವೇಳೆಯೂ ರೈತರ ಉಳಿವಿಗಾಗಿ ಶ್ರಮ ವಹಿಸಿದೆ. 136 ಸೀಟಿನ ಸ್ವತಂತ್ರ ಸರ್ಕಾರ, ಇವರಿಗೇನಾಗಿದೆ ದರಿದ್ರ ರೈತರನ್ನು 7 ದಿನದಿಂದ ರಸ್ತೆಯಲ್ಲಿ ಮಲಗಿಸಬೇಕಿತ್ತ? ರೈತರ ಬಗ್ಗೆ ಕಾಳಜಿ ಇದ್ದಿದ್ದರೆ ಸರ್ಕಾರ ಈ ರೀತಿ ಮಾಡುತ್ತಿರಲಿಲ್ಲ. ನಿನ್ನೆಯ ದಿನ ಆ ಭಾಗದಲ್ಲೇ ಸಿಎಂ ಪ್ರವಾಸ ಮಾಡಿದರೂ ಸ್ಥಳಕ್ಕೆ ಹೋಗಿ ರೈತರ ಕಷ್ಟ ಕೇಳಲಿಲ್ಲ. ಶಾಸಕ ಮೇಟಿ ಅವರ ಅಂತಿಮ ದರ್ಶನಕ್ಕೆ ಹೋದವರು ಅಲ್ಲೇ ಪಕ್ಕದಲ್ಲೇ ನಡೆಯುತ್ತಿದ್ದ ಪ್ರತಿಭಟನೆ ಜಾಗಕ್ಕೆ ಹೋಗಬಹುದಿತ್ತಲ್ವಾ? ಅಹಿಂದಾ ಹೆಸರಲ್ಲಿ ದೊಡ್ಡ ರ‍್ಯಾಲಿ ಮಾಡುವೆ ಎನ್ನುತ್ತಾರೆ. ಅದೆಲ್ಲಾ ಯಾವ ಪುರುಷಾರ್ಥಕ್ಕೆ? ಎಂದು ಪ್ರಶ್ನಿಸಿದರು.

ರೈತರ ಬದುಕಿನ ಜತೆ ಕಾಂಗ್ರೆಸ್ ಸರ್ಕಾರ ಚೆಲ್ಲಾಟ ಆಡುತ್ತಿದೆ ಎಂದು ಹರಿಹಾಯ್ದ ಕುಮಾರಸ್ವಾಮಿ ಪತ್ರಿಕಾಗೋಷ್ಠಿ ಉದ್ದಕ್ಕೂ ಸರ್ಕಾರದ ವಿರುದ್ಧ ಕಿಡಿಕಾರಿದರು.

ಒಂದನೇ ಪುಟದಿಂದ

ಅಂದಕ್ಕೆ ಅಪಚಾರ ಈ ಮಾಹಿತಿ ಕೇಂದ್ರ!



ರಾಮಸ್ವಾಮಿ ವೃತ್ತದ ಬಳಿ ನೂತನವಾಗಿ ನಿರ್ಮಿಸಿರುವ ಪೊಲೀಸ್ ಮಾಹಿತಿ ಕೇಂದ್ರ.

ಹಿಂದೊಮ್ಮೆ ಪಾರಂಪರಿಕ ಸರ್ಕಾರಿ ಅತಿಥಿ ಗೃಹದ ಉತ್ತರ ದ್ವಾರದಲ್ಲಿ ಪೊಲೀಸ್ ಪಹರೆಗೆಂದು ತಂಗುದಾಣ ನಿರ್ಮಾಣ ಮಾಡಲಾಗಿತ್ತು. ಇದು ಪಾರಂಪರಿಕ ಭವನಕ್ಕೆ ಅಪಚಾರ ಮಾಡಿದಂತಿತ್ತು. ಇದರ ಬಗ್ಗೆ ಸಾರ್ವಜನಿಕ ವಲಯದಿಂದ ಎಷ್ಟೇ ವಿರೋಧ ವ್ಯಕ್ತವಾದರೂ ಸಂಬಂಧಿಸಿದ ಅಧಿಕಾರಿವರ್ಗ ತಾವು ಮಾಡಿದ್ದೆ ಸರಿ ಎಂಬ ಧೋರಣೆ ತಾಳಿದರು. ಆದರೆ ಕೊನೆಗೊಮ್ಮೆಅದನ್ನು ತೆರವು ಮಾಡುವ ಅನಿವಾರ್ಯ ಬಂತು. ಅರಮನೆ ಮುಂದೆ ಈ ರೀತಿಯ ಮಾಹಿತಿ ಕೇಂದ್ರ ಅತ್ಯಂತ ಮುಜುಗರದ ಸಂಗತಿ.

ದಸರಾ ವೇಳೆ ತಾತ್ಕಾಲಿಕ ಕೇಂದ್ರದ ಉಪಯೋಗ ಹೆಚ್ಚಾಗಿತ್ತು: ದಸರಾ ವೇಳೆ ಇಲ್ಲಿ ತಾತ್ಕಾಲಿಕ ಕಿಯೋಸ್ಕ್ ನಿರ್ಮಿಸಲಾಗಿತ್ತು. ನೂರಾರು ಮಂದಿ ಇಲ್ಲಿ ಸಲಹೆ ಪಡೆದಿದ್ದರಲ್ಲದೆ, ವಿವಿಧ ವಸ್ತುಗಳನ್ನು ಕಳೆದುಕೊಂಡವರು ದೂರು ನೀಡಿದ್ದರು. ಈ ಹಿನ್ನೆಲೆಯಲ್ಲಿ ಅರಮನೆ ಮುಂಭಾಗ ಶಾಶ್ವತ ಪೊಲೀಸ್ ಮಾಹಿತಿ ಕೇಂದ್ರ ಸ್ಥಾಪಿಸಲು ದೇವರಾಜ ಪೊಲೀಸರು ಉದ್ದೇಶಿಸಿದ್ದರು. ಅದಕ್ಕೆ ಖಾಸಗಿ ಸಂಸ್ಥೆಯೊಂದು ನೆರವು ನೀಡಿದೆ.

ರಾಮಸ್ವಾಮಿ ವೃತ್ತ: ಮೈಸೂರಿನ ರಾಮಸ್ವಾಮಿ ವೃತ್ತದಲ್ಲೂ ಲಕ್ಷ್ಮೀಪುರಂ ಪೊಲೀಸ್ ಠಾಣಾ ವತಿಯಿಂದಲೂ ಪೊಲೀಸ್ ಮಾಹಿತಿ ಕೇಂದ್ರವನ್ನು ಸ್ಥಾಪಿಸಲಾಗಿದೆ. ಅಲ್ಲಿಯೂ ಧ್ವನಿವರ್ಧಕ ಅಳವಡಿಸಿದ್ದು, ಸಾರ್ವಜನಿಕರಿಗೆ ಅಪರಾಧ ಕೃತ್ಯಗಳ ಬಗ್ಗೆ, ಸಂಚಾರ ನಿಯಮ ಪಾಲನೆ ಬಗ್ಗೆ ಜಾಗೃತಿ ಮೂಡಿಸಲು ಕ್ರಮ ಕೈಗೊಳ್ಳಲಾಗಿದೆ.

ಮೀಸಲಾದ ವಾರ್ಡ್ ಖಾಲಿ... ಖಾಲಿ...!

ಅಗತ್ಯವಿರುವಷ್ಟು ವಾರ್ಮರ್ ಪಡೆದುಕೊಳ್ಳುವಂತೆ ಸಲಹೆ ನೀಡಿದರು.

ಆಸ್ಪತ್ರೆ ಪರಿಶೀಲನೆ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿ, ರಾಜ್ಯ ಸರ್ಕಾರ ಮಕ್ಕಳ ಅಪೌಷ್ಟಿಕತೆ ನಿವಾರಣೆಗೆ ಹಲವು ಯೋಜನೆಗಳನ್ನು ಜಾರಿಗೆ ತಂದಿದೆ. ಸರ್ಕಾರದ ಸವಲತ್ತು ಅರ್ಹ ಮಕ್ಕಳಿಗೆ ತಲುಪುವಂತೆ ಅಧಿಕಾರಿಗಳು ಕ್ರಮ ಕೈಗೊಳ್ಳಲು ಸೂಚನೆ ನೀಡಲಾಗಿದೆ. ಜಿಲ್ಲೆಯಲ್ಲಿ ಇಂತಹ ಮಕ್ಕಳ ಸಂಖ್ಯೆ ಕಡಿಮೆಯಾಗಬೇಕು ಹಾಗೂ ಗುರುತಿಸಲಾಗುವ ಅಪೌಷ್ಠಿಕ ಮಕ್ಕಳಿಗೆ ಸರಿಯಾದ ಆರೈಕೆ ನೀಡಿ, ಅವರನ್ನು ಗುಣಮುಖರಾಗುವಂತೆ ನೋಡಿಕೊಳ್ಳಬೇಕು ಎಂದರು.

ಜಿಲ್ಲೆಯಲ್ಲಿ 91 ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ಆದರೆ ಆಸ್ಪತ್ರೆಯಲ್ಲಿ ಇದಕ್ಕಾಗಿ ಮೀಸಲಿರುವ ವಾರ್ಡ್‌ಗಳಲ್ಲಿ ಒಂದೂ ಮಗು ದಾಖಲಾಗಿಲ್ಲ. ಸರ್ಕಾರ ನೀಡುತ್ತಿರುವ ಸವಲತ್ತು ಆ ಮಕ್ಕಳಿಗೆ ತಲುಪುತ್ತಿಲ್ಲ. ಇನ್ನು 3 ದಿನದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಸಭೆ ನಡೆಸಿ 91 ಮಕ್ಕಳನ್ನು ಗುರುತಿಸಿ, ಪಾಳಿ ವ್ಯವಸ್ಥೆಯಲ್ಲಿ ಚಿಕಿತ್ಸೆ ನೀಡಿ ವರದಿ ನೀಡಬೇಕು. ಇಲ್ಲದಿದ್ದರೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಸಿದರು.

ಚೆಲುವಾಂಬ ಆಸ್ಪತ್ರೆಯಲ್ಲಿ ಅಳವಡಿಸಲಾಗಿರುವ ಮಕ್ಕಳ ಅಪೌಷ್ಟಿಕ ಪುನರ್ವಸತಿ ಕೇಂದ್ರ ಎಂಬ ಫಲಕವನ್ನು ತೆಗೆದು ಮಕ್ಕಳ ಅಪೌಷ್ಟಿಕ ಪುನಶ್ಚೇತನ ಘಟಕ ಎಂದು ನಾಮಫಲಕವನ್ನು ಅಳವಡಿಸುವಂತೆ ತಿಳಿಸಿದರು.

ಈ ಸಂದರ್ಭದಲ್ಲಿ ರಾಜ್ಯ ಮಕ್ಕಳ ಹಕ್ಕುಗಳ ಆಯೋಗದ ಸದಸ್ಯ ಡಾ.ತಿಪ್ಪೇಸ್ವಾಮಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಕುಮಾರಸ್ವಾಮಿ, ಚೆಲುವಾಂಬ ಆಸ್ಪತ್ರೆಯ ಅಧೀಕ್ಷಕರಾದ ಡಾ.ಸುಧಾ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಕ್ಯಾನ್ಸರ್ ಚಿಕಿತ್ಸಾ ಕೇಂದ್ರ ಸ್ಥಾಪನೆ

ಗಾಂಧಿ ನಗರ ವಿಕಾಸ ಯೋಜನೆ–2ನ್ನು ಅನುಷ್ಠಾನಗೊಳಿಸಲು ನೇಮಕಗೊಂಡಿರುವ ತಾಂತ್ರಿಕ ಹಾಗೂ ಉನ್ನತಾಧಿಕಾರ ಸಮಿತಿ ಕಾರ್ಯವ್ಯಾಪ್ತಿ ಪರಿಷ್ಕರಿಸಲು ಸಮ್ಮತಿಸಿದೆ. ಬೆಂಗಳೂರಿನ ಪಶು ವೈದ್ಯಕೀಯ ಆಸ್ಪತ್ರೆ ಆವರಣದಲ್ಲಿನ ನಾಲ್ಕು ಎಕರೆ ಭೂಮಿಯನ್ನು ಉಚ್ಚನ್ಯಾಯಾಲಯದ ಇಲಾಖಾ ಅಧಿಕಾರಿಗಳ ವಸತಿ ಗೃಹ ನಿರ್ಮಾಣಕ್ಕೆ ಹಸ್ತಾಂತರಿಸಲು ಸಂಪುಟ ಒಪ್ಪಿಗೆ ನೀಡಿದೆ. ಮಂಗಳೂರಿನ ಬಜ್ಪೆ ಬಳಿ ಹಜ್ ಭವನ ನಿರ್ಮಿಸಲು 2 ಎಕರೆ ಭೂಮಿ ಮತ್ತು 20 ಕೋಟಿ ರೂ. ಬಿಡುಗಡೆ ಮಾಡಿದೆ.

ವರಿಷ್ಠರು ನಿರ್ಧರಿಸ್ತಾರೆ!

ಇದರ ಹೊರತಾಗಿ ಬೇರೆ ಯಾವುದೇ ಕ್ರಾಂತಿ ಆಗುವುದಿಲ್ಲ. ಸಂಪುಟ ವಿಸ್ತರಣೆ ನಿರೀಕ್ಷೆಯಲ್ಲಿ ಇರುವವರಿಗೆ ಏನು ಕೊಡಬೇಕು. ಏನು ನೀಡಬೇಕು ಎಂಬುದನ್ನು ವರಿಷ್ಠರು ನಿರ್ಧರಿಸುತ್ತಾರೆ. ಇದರಲ್ಲಿ ನಮ್ಮ ಪಾತ್ರವೇ ಇರುವುದಿಲ್ಲ. ನಾನು ದೆಹಲಿ ಪ್ರವಾಸ ಕೈಗೊಂಡಿರುವುದು ನನ್ನ ಇಲಾಖೆ ಮತ್ತು ಪಕ್ಷ ಸಂಘಟನೆ ವಿಚಾರ ಕುರಿತು ಮಾತ್ರ. ಬೇರೇನೂ ಇಲ್ಲ ಎಂದರು.

ನಾನು ಪಕ್ಷದ ಯಾವ ವರಿಷ್ಠ ನಾಯಕರನ್ನೂ ಭೇಟಿ ಮಾಡುವುದಿಲ್ಲ. ನನ್ನ ಬಳಿ ಯಾರೂ ಸಚಿವ ಸಂಪುಟ ವಿಸ್ತರಣೆ ಬಗ್ಗೆ ಚರ್ಚೆ ಮಾಡಿಲ್ಲ. ನನಗೆ ಯಾವುದೇ ನಾಯಕರನ್ನು ಭೇಟಿ ಮಾಡುವ ಕಾರ್ಯಕ್ರಮ ಇಲ್ಲ. ಪಕ್ಷ ಸಂಘಟನೆ ವಿಚಾರವಾಗಿ ಚರ್ಚೆ ಮಾಡಲಾಗುವುದು.

ಮತಗಳ್ಳತನ ವಿಚಾರವಾಗಿ ನಿನ್ನೆ ರಾತ್ರಿಯೂ ಸಭೆ ಮಾಡಿದ್ದೇವೆ. ಇಂದು ಸಭೆ ಮಾಡಿದ್ದೇವೆ. ಸಂಪುಟ ವಿಸ್ತರಣೆ ಹಾಗೂ ನಾಯಕತ್ವ ಬದಲಾವಣೆ ವಿಚಾರ ಚರ್ಚೆ ಏನಿದ್ದರೂ ಮಾಧ್ಯಮದ್ದು. ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಆಗುತ್ತದೆ, ಎಂಬುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆಯೇ ಅಥವಾ ನಾನು ಹೇಳಿದ್ದೇನೆಯೇ, ಎಲ್ಲಾ ನೀವೇ ಊಹಿಸಿಕೊಳ್ಳುತ್ತೀರಿ. ನಮಗೆ ಕೊಟ್ಟ ಕೆಲಸ ಮಾಡಿಕೊಂಡು ಹೋಗುತ್ತಿರಬೇಕು. ನಾನು ಪಕ್ಷದ ಶಿಸ್ತಿನ ಸಿಪಾಯಿ. ಪಕ್ಷದ ಲಕ್ಷ್ಮಣ ರೇಖೆ ಬಿಟ್ಟು ನಾನು ಎಂದಿಗೂ ಹೋಗುವುದಿಲ್ಲ ಎಂದರು.

ಸಿಎಂ ತುಮಕೂರು ಪ್ರವಾಸ

ಬೆಂಗಳೂರು, ನ.6– ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ತುಮಕೂರು ಪ್ರವಾಸ ಕೈಗೊಂಡಿದ್ದಾರೆ.

ಹೆಲಿಕಾಪ್ಟರ್ ಮೂಲಕ ಮಧ್ಯಾಹ್ನ 2.25ಕ್ಕೆ ತುಮಕೂರಿಗೆ ತೆರಳಲಿರುವ ಸಿಎಂ, ಕ್ಯಾತಸಂದ್ರದ ಮಾಜಿ ಸಚಿವ ಕೆ.ಎನ್.ರಾಜಣ್ಣ ಅವರ ಮನೆಗೆ ಭೇಟಿ ನೀಡಲಿದ್ದಾರೆ. ಮಧ್ಯಾಹ್ನ 3.30ಕ್ಕೆ ತುಮಕೂರು ಜಿಲ್ಲಾ ಆಸ್ಪತ್ರೆಯ ವಿವಿಧ ಕಾಮಗಾರಿಗಳ ಉದ್ಘಾಟನೆ ಸೇರಿದಂತೆ ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು, ಸಂಜೆ 5ಕ್ಕೆ ಬೆಂಗಳೂರಿಗೆ ವಾಪಸ್ಸಾಗಲಿದ್ದಾರೆ.

ಸಿಎಂ ಸೇರಿ ನಾವೆಲ್ಲ ಪಾಲ್ಗೊಳ್ಳುತ್ತೇವೆ

ಕ್ಯಾತಸಂದ್ರ ನಿವಾಸದಲ್ಲಿ ಈ ಔತಣಕೂಟ ಏರ್ಪಡಿಸಿದ್ದಾರೆ. ಯಾರ‍್ಯಾರನ್ನು ಆಹ್ವಾನ ಮಾಡಿದ್ದಾರೆಂಬ ಕುರಿತು ಮಾಹಿತಿ ಇಲ್ಲ. ಆದರೆ, ನಾವೆಲ್ಲಾ ಹೋಗುತ್ತೇವೆ.

ರಾಜಕೀಯ ಉದ್ದೇಶ ಇಲ್ಲ: ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ದೆಹಲಿ ಪ್ರವಾಸ ಕೈಗೊಂಡಿರುವ ಹಿಂದೆ ರಾಜಕೀಯ ಇದೆ ಎನ್ನಿಸುವುದಿಲ್ಲ.

ಅವರು ಪ್ರವಾಸ ತೆರಳುವುದಕ್ಕೂ ಮುನ್ನ ಏಕೆ ಹೋಗುತ್ತಿದ್ದಾರೆ ಎಂಬುದನ್ನು ತಿಳಿಸಿದ್ದಾರೆ. ನೀರಾವರಿ ಯೋಜನೆಗಳಿಗೆ ಸಂಬಂಧಿಸಿದ ಮೊಕದ್ದಮೆ ಸಂಬಂಧ ಕಾನೂನು ತಜ್ಞರೊಂದಿಗೆ ಚರ್ಚಿಸುವ ವಿಷಯವನ್ನೂ ಪ್ರಸ್ತಾಪಿಸಿದ್ದಾರೆ.

ನನ್ನ ಇಲಾಖೆಗೆ ಸಂಬಂಧಿಸಿದಂತೆ ದೆಹಲಿಯಲ್ಲಿ ಹೆಚ್ಚಿನ ಕೆಲಸ ಇರುವುದಿಲ್ಲ. ಇದ್ದರೆ ನಾನೂ ಹೋಗುತ್ತಿದ್ದೆ ಎಂದರು.

ಧರ್ಮಸ್ಥಳ ಪ್ರದೇಶದಲ್ಲಿ ನಡೆದಿದೆ ಎನ್ನಲಾದ ಅಸಹಜ ಸಾವು ಪ್ರಕರಣಗಳಿಗೆ ಸಂಬಂಧಿಸಿದಂತೆ ಎಸ್ಐಟಿ ತನಿಖೆ ಬಹುತೇಕ ಪೂರ್ಣಗೊಂಡಿದೆ. ಕೆಲವು ತಾಂತ್ರಿಕ ವಿಷಯಗಳಿದ್ದು ಅವುಗಳ ಕುರಿತು ಗಮನಹರಿಸಿದ್ದಾರೆ. ಈ ಸಂಬಂಧ ಮುಖ್ಯಮಂತ್ರಿ ಅವರೊಂದಿಗೆ ಚರ್ಚಿಸಿ ಪ್ರಕರಣ ಕುರಿತು ತೀರ್ಮಾನ ಕೈಗೊಳ್ಳಲಾಗುವುದು ಎಂದರು.

ತೆರವುಗೊಳಿಸಲು ಹೈಕೋರ್ಟ್ ನಕಾರ

ಅರ್ಜಿದಾರರಿಗೆ ಮಾತ್ರ ಸೀಮಿತಗೊಳಿಸಲು ಆದೇಶಗಳನ್ನು ಹೊರಡಿಸುವುದನ್ನು ಪರಿಗಣಿಸುವಂತೆ ಪೀಠವನ್ನು ಒತ್ತಾಯಿಸಿದರು. ವಿಭಾಗೀಯ ಪೀಠವು ಅವರ ಮನವಿ ನಿರಾಕರಿಸಿತು.

ಅ.18ರ ಸರ್ಕಾರಿ ಆದೇಶವು ರಾಷ್ಟ್ರೀಯ ಸ್ವಯಂಸೇವಕ ಸಂಘ (RSS) ತನ್ನ 100 ವರ್ಷಗಳ ವಾರ್ಷಿಕೋತ್ಸವವನ್ನು ಆಚರಿಸಲು ಪ್ರಸ್ತಾಪಿಸಲಾದ ಮೆರವಣಿಗೆಗಳ ಹಿನ್ನೆಲೆಯಲ್ಲಿ ಈ ಆದೇಶವನ್ನು ಅಂಗೀಕರಿಸಿದೆ ಎಂದು ವರದಿಯಾಗಿದೆ.


ಸರ್ಕಾರಿ ಆದೇಶ ಪ್ರಶ್ನಿಸಿ ಪ್ರಶ್ನೆ: ಸರ್ಕಾರದ ಆದೇಶವನ್ನು ನಾಲ್ವರು ಅರ್ಜಿದಾರರು ಪ್ರಶ್ನಿಸಿದ್ದರು. ಪುನಶ್ಚೇತನ ಸೇವಾ ಸಂಸ್ಥೆ, ವೀ ಕೇರ್ ಫೌಂಡೇಶನ್, ಧಾರವಾಡದ ರಾಜೀವ್ ಮಲ್ಹಾರ್ ಪಾಟೀಲ್ ಕುಲಕರ್ಣಿ ಮತ್ತು ಬೆಳಗಾವಿಯ ಸಮಾಜ ಸೇವಕಿ ಉಮಾ ಸತ್ಯಜಿತ್ ಚವಾಣ್. ಸರ್ಕಾರದ ನಿರ್ಧಾರವು ಶಾಂತಿಯುತ ಸಭೆ ಸೇರುವ ಮೂಲಭೂತ ಹಕ್ಕಿನ ಮೇಲೆ ಪರಿಣಾಮ ಬೀರುತ್ತದೆ ಎಂದು ಅವರು ವಾದಿಸಿದ್ದರು. ಅಕ್ಟೋಬರ್ 28ರಂದು, ಏಕಸದಸ್ಯ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರು ಆದೇಶಕ್ಕೆ ತಡೆ ನೀಡಿದ್ದರು.

ಸರ್ಕಾರಿ ಆದೇಶವು ಸಾರ್ವಜನಿಕ ಆಸ್ತಿಯ ಅನಧಿಕೃತ ಬಳಕೆಯನ್ನು ತಡೆಯುವ ಗುರಿಯನ್ನು ಹೊಂದಿದ್ದರೂ, ಮೇಲ್ನೋಟಕ್ಕೆ ಇದು ಭಾರತದ ಸಂವಿಧಾನದಡಿಯಲ್ಲಿ ಖಾತರಿಪಡಿಸಲಾದ ಮೂಲಭೂತ ಹಕ್ಕುಗಳನ್ನು, ವಿಶೇಷವಾಗಿ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಶಾಂತಿಯುತವಾಗಿ ಸಭೆ ಸೇರುವ ಸ್ವಾತಂತ್ರ್ಯವನ್ನು ಉಲ್ಲಂಘಿಸುತ್ತದೆ ಎಂದು ನ್ಯಾಯಮೂರ್ತಿ ನಾಗಪ್ರಸನ್ನ ಅಭಿಪ್ರಾಯಪಟ್ಟಿದ್ದರು.

ಸರಿಯಾದ ಶಾಸಕಾಂಗದ ಬೆಂಬಲವಿಲ್ಲದೆ ಸರ್ಕಾರಿ ನಿರ್ದೇಶನದ ಮೂಲಕ ಮೂಲಭೂತ ಹಕ್ಕುಗಳನ್ನು ಕಸಿದುಕೊಳ್ಳಲು ಸಾಧ್ಯವಿಲ್ಲ ಎಂದು ನ್ಯಾಯಾಧೀಶರು ಒತ್ತಿ ಹೇಳಿದರು. ಇದನ್ನು ಪ್ರಶ್ನಿಸುವ ಅರ್ಜಿಯ ಮುಂದಿನ ವಿಚಾರಣೆ ನಡೆಯುವವರೆಗೆ ಅವರು ಆದೇಶಕ್ಕೆ ತಡೆ ನೀಡಿದರು.

ಈ ಮಧ್ಯಂತರ ಆದೇಶವನ್ನು ರಾಜ್ಯ ಸರ್ಕಾರ ವಿಭಾಗೀಯ ಪೀಠದ ಮುಂದೆ ಪ್ರಶ್ನಿಸಿತ್ತು. ಇಂದು ಈ ವಿಷಯದಲ್ಲಿ ಅದು ಹಸ್ತಕ್ಷೇಪ ಮಾಡಲು ನಿರಾಕರಿಸಿದೆ.

ಹುಟ್ಟುಹಬ್ಬದ ಶುಭಾಶಯಗಳು...



ಚಲನಚಿತ್ರ ನಿರ್ಮಾಪಕರೂ ಆದ ಯುವ ಉದ್ಯಮಿ ಎನ್. ಸಂದೇಶ್ ಅವರ ಹುಟ್ಟುಹಬ್ಬದ ಪ್ರಯುಕ್ತ ಅವರನ್ನು ಪತ್ನಿ ರಶ್ಮಿ ಸಂದೇಶ್ ಅವರೊಂದಿಗೆ ನಗರ ಪಾಲಿಕೆ ಮಾಜಿ ಸದಸ್ಯ ಸಾತ್ವಿಕ್, ಪಾಂಡವಪುರ ದರ್ಶನ್, ಕ್ಯಾಂಟೀನ್ ರವಿಕುಮಾರ್, ನಿರ್ದೇಶಕ ಪ್ರಸಾದ್ ಅಭಿನಂದಿಸಿ, ಶುಭಾಶಯ ಕೋರಿದರು.

ಮೈಸೂರಿನ ನೂತನ ಡಿಡಿಪಿಐ ಡಿ.ಉದಯಕುಮಾರ್



ಮೈಸೂರು,ನ.6(ಪಿಎಂ)– ಕೊಡಗು ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆ ಉಪನಿರ್ದೇಶಕ ಡಿ. ಉದಯಕುಮಾರ್ ಅವರನ್ನು ಶಾಲಾ ಶಿಕ್ಷಣ ಇಲಾಖೆಯ ಮೈಸೂರು ಉಪನಿರ್ದೇಶಕರಾಗಿ (ಆಡಳಿತ) ವರ್ಗಾಯಿಸಿ ಸರ್ಕಾರ ಆದೇಶ ಹೊರಡಿಸಿದೆ. ಶಾಲಾ ಶಿಕ್ಷಣ ಇಲಾಖೆಯ ಮೈಸೂರು ಉಪನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದ ಜವರೇಗೌಡ ಅವರು ಇತ್ತೀಚೆಗೆ ನಿವೃತ್ತರಾದ ಹಿನ್ನೆಲೆಯಲ್ಲಿ ಸದರಿ ಸ್ಥಾನಕ್ಕೆ ಡಿ.ಉದಯಕುಮಾರ್ ಅವರನ್ನು ವರ್ಗಾಯಿಸಲಾಗಿದೆ.

ಸಿಎಂ ಸಭೆ

ಭೇಟಿಗೂ ಅವಕಾಶ ಕೋರಿ ನಾಳೆಯೇ ಪತ್ರ ಬರೆಲಾಗುವುದು. ಸಮಯ ನೀಡಿದರೆ, ರೈತರ ಸಮಸ್ಯೆ ಕುರಿತು ಚರ್ಚಿಸಲಾಗುವುದು. ಟನ್ ಕಬ್ಬಿಗೆ ಕನಿಷ್ಠ 3,500 ರೂ. ದರ ನಿಗದಿಗೆ ರೈತರು ಒತ್ತಾಯಿಸುತ್ತಿದ್ದಾರೆ. ನಾವು 3,200 ರೂ. ನೀಡಲು ಸಿದ್ಧವಿರುವುದಾಗಿ ರೈತ ಮುಖಂಡರಿಗೆ ಜಿಲ್ಲಾಧಿಕಾರಿಗಳ ಮೂಲಕ ತಿಳಿಸಲಾಗಿದೆ. 10.25 ರಿಕವರಿ ಬಂದರೆ 3,200 ರೂ. ದರ ನಿಗದಿ ಮಾಡಲಾಗುತ್ತದೆ. 11.25 ರಿಕವರಿ ಬಂದರೆ 3,500 ರೂ. ದರ ನಿಗದಿ ಮಾಡಲಾಗುವುದು. ಇದರಲ್ಲಿ ಇಳುವರಿ ಮತ್ತು ಸಾರಿಗೆ ವೆಚ್ಚವೂ ಸೇರಿರುತ್ತದೆ.

ಮಹಾರಾಷ್ಟ್ರಕ್ಕೂ ನಮಗೂ ರಿಕವರಿ ಪ್ರಮಾಣದಲ್ಲಿ ವ್ಯತ್ಯಾಸವಿದೆ. ಅಲ್ಲಿ 40ಕ್ಕೂ ಹೆಚ್ಚು ಸಕ್ಕರೆ ಕಾರ್ಖಾನೆಗಳಿವೆ. ರಿಕವರಿ ಮೇಲೆ ದರ ನಿಗದಿ ಆಗುತ್ತದೆ. 2,015 ರೂ.ನಿಂದ 3,635 ರೂ.ವರೆಗೆ ರಿಕವರಿ ಆಧರಿಸಿ ನೀಡಲಾಗುತ್ತದೆ.

ವಿರೋಧ ಪಕ್ಷಗಳು ರೈತರ ದಾರಿ ತಪ್ಪಿಸುತ್ತಿವೆ. ಅವರ ಮಾತು ಕೇಳಬಾರದು. ನಾವು ರೈತರೊಂದಿಗೆ ಚರ್ಚಿಸಿ ನಿರ್ಧರಿಸಲಾಗುವುದು ಎಂದರು.

ಶೀಘ್ರ ಐವಿಎಫ್ ಕೇಂದ್ರ ಆರಂಭ

ಕ್ರಮವಹಿಸಲಾಗುವುದು. ನಾಲ್ಕೈದು ತಿಂಗಳಲ್ಲಿ ಐವಿಎಫ್ ಚಿಕಿತ್ಸಾ ಸೇವೆಯನ್ನು ಚೆಲುವಾಂಬ ಆಸ್ಪತ್ರೆಯಲ್ಲಿ ಆರಂಭಿಸಲಾಗುವುದು ಎಂದು ಮಾಹಿತಿ ನೀಡಿದರು.

1 ರಿಂದ 2 ಲಕ್ಷ ರೂ.ಖರ್ಚು: ಐವಿಎಫ್ ಮತ್ತು ಫರ್ಟಿಲಿಟಿ ಚಿಕಿತ್ಸೆಗೆ ಖಾಸಗಿ ಸಂಸ್ಥೆಗಳಲ್ಲಿ 1 ರಿಂದ 2 ಲಕ್ಷ ರೂ.ವರೆಗೆ ಖರ್ಚಾಗಲಿದೆ. ಇದರಿಂದ ಮಕ್ಕಳಿಲ್ಲದ ಬಡ ದಂಪತಿಗೆ ಕಷ್ಟವಾಗುತ್ತಿದೆ. ಆದ್ದರಿಂದ ಸರ್ಕಾರವು ಕೈಗೆಟಕುವ ದರದಲ್ಲಿ ಈ ಚಿಕಿತ್ಸೆ ನೀಡಲು ಮುಂದಾಗಿದೆ ಎಂದು ತಿಳಿಸಿದ ಡಾ.ಸುಧಾ, ಚೆಲುವಾಂಬ ಆಸ್ಪತ್ರೆಯಲ್ಲಿ ಅತೀ ಕಡಿಮೆ ಚಿಕಿತ್ಸಾ ದರ ಪಡೆದು ಸಾರ್ವಜನಿಕರಿಗೆ ಸೇವೆ ಒದಗಿಸಲಾಗುವುದು ಎಂದರು.

ಶುಲ್ಕದ ಬಗ್ಗೆ ಚರ್ಚೆ: ಚೆಲುವಾಂಬ ಆಸ್ಪತ್ರೆಯಲ್ಲಿ ನೀಡುವ ಐವಿಎಫ್ ಚಿಕಿತ್ಸೆಗೆ ಎಷ್ಟು ಚಿಕಿತ್ಸಾ ಶುಲ್ಕ ನಿಗದಿ ಮಾಡಬೇಕು ಅಥವಾ ಉಚಿತವಾಗಿ ನೀಡಬೇಕೋ ಎನ್ನುವುದರ ಚರ್ಚಿಸಿ, ಸರ್ಕಾರದ ಅನುಮತಿ ಪಡೆದು ಶುಲ್ಕ ನಿಗದಿ ಮಾಡಲಾಗುವುದು. ಕಡಿಮೆ ಖರ್ಚಿನಲ್ಲಿ ಐವಿಎಫ್ ಚಿಕಿತ್ಸೆ ನೀಡುವ ಮೂಲಕ ಚೆಲುವಾಂಬ ಆಸ್ಪತ್ರೆಯ ಸೇವೆ ಮತ್ತಷ್ಟು ವಿಸ್ತರಣೆಯಾಗಲಿದೆ ಎಂದು ತಿಳಿಸಿದರು.

ಶೇ.64 ಮತದಾನ

ಸಾಮ್ರಾಟ್ ಚೌಧರಿ ಮತ್ತು ವಿಜಯ್ ಕುಮಾರ್ ಸಿನ್ಹಾ ಸೇರಿದಂತೆ ಹಲವಾರು ಪ್ರಮುಖ ನಾಯಕರು ಮತ್ತು ಹಲವಾರು ಸಚಿವರು ಕಣದಲ್ಲಿದ್ದಾರೆ.

ಚುನಾವಣಾ ಆಯೋಗ ಹಂಚಿಕೊಂಡಿರುವ ಮಾಹಿತಿಯ ಪ್ರಕಾರ ಬಿಹಾರ ವಿಧಾನ ಸಭಾಗೆ ನಡೆದ ಮೊದಲ ಹಂತದ ಚುನಾವಣೆಯಲ್ಲಿ ಶೇ.64.46 ರಷ್ಟು ಮತದಾನ ದಾಖಲಾಗಿದೆ. 18 ಜಿಲ್ಲೆಗಳ ಪೈಕಿ ಬೇಗುಸರಾಯ್‌ನಲ್ಲಿ ಅತಿ ಹೆಚ್ಚು ಶೇ.67.32 ರಷ್ಟು ಮತದಾನವಾಗಿದ್ದು, ಗೋಪಾಲ್ ಗಂಜ್‌ನಲ್ಲಿ ಶೇ.64.96 ಮತ್ತು ಮುಜಫರ್‌ಪುರದಲ್ಲಿ ಶೇ.64.635ರಷ್ಟು ಮತದಾನವಾಗಿದೆ. ಪಾಟ್ನಾ ಜಿಲ್ಲೆಯಲ್ಲಿ ಶೇ.55.02ರಷ್ಟು ಮತದಾನವಾಗಿದೆ.

ಎನ್‌ಡಿಎ ಕೂಟದಲ್ಲಿರುವ ಲೋಕ ಜನಶಕ್ತಿ ಪಕ್ಷ (ರಾಮ್‌ವಿಲಾಸ್ ಪಾಸ್ವಾನ್ ಅವರ ಪಕ್ಷ) ಸ್ಪರ್ಧಿಸಿದ 29 ಸ್ಥಾನಗಳಲ್ಲಿ ಹತ್ತು ಕ್ಷೇತ್ರಗಳಿಗೆ ಇಂದು ಚುನಾವಣೆ ನಡೆದಿದೆ. ಈ ಹತ್ತು ಸ್ಥಾನಗಳಲ್ಲಿ ಎನ್‌ಡಿಎ ಕೇವಲ ಒಂದನ್ನು ಮಾತ್ರ ಹೊಂದಿದೆ. ಇದರರ್ಥ ಎಲ್‌ಜೆಪಿ(ಆರ್‌ವಿ) ಇತರ ಒಂಬತ್ತು ಸ್ಥಾನಗಳಲ್ಲಿ ಗೆಲುವು ಸಾಧಿಸಲು ಮತ್ತು ಪ್ರಸ್ತುತ ವಿರೋಧ ಪಕ್ಷಗಳು ಹೊಂದಿರುವ ಸ್ಥಾನಗಳಲ್ಲಿ ಲಾಭಗಳಿಸುವ ಮೂಲಕ ಮೈತ್ರಿಕೂಟಕ್ಕೆ ತನ್ನ ಮೌಲ್ಯ ಸಾಬೀತುಪಡಿಸಬೇಕಿದೆ.

ಎಲ್‌ಜೆಪಿ(ಆರ್‌ವಿ)ಯ ಹಂಚಿಕೆಯು ಎನ್‌ಡಿಎ ಮಿತ್ರಪಕ್ಷಗಳಲ್ಲಿ ವಿಶೇಷವಾಗಿ ಜೆಡಿ(ಯು)ನಲ್ಲಿ ಅಸಮಾಧಾನ ಉಂಟುಮಾಡಿದೆ. ಎಲ್‌ಜೆಪಿಯು ವಿಧಾನಸಭೆಯಲ್ಲಿ ಪಕ್ಷದ ಪ್ರಾತಿನಿಧ್ಯದ ಹೊಂದಿಲ್ಲದಿದ್ದರು ಅವರಿಗೆ ಅಷ್ಟು ಕ್ಷೇತ್ರಗಳನ್ನು ಬಿಟ್ಟುಕೊಟ್ಟಿರುವುದಕ್ಕೆ ಜೆಡಿಯು ಅಸಮಾಧಾನ ವ್ಯಕ್ತಪಡಿಸಿದೆ. ತಮ್ಮ ಕಿರಿಯ ಮಗ ಮತ್ತು ಉತ್ತರಾಧಿಕಾರಿ ತೇಜಸ್ವಿ ಯಾದವ್ ಮುಂದಿನ ಸರ್ಕಾರ ರಚಿಸುತ್ತಾರೆ ಎಂದು ಆಶಿಸುತ್ತಿರುವ ಆರ್‌ಜೆಡಿ ಅಧ್ಯಕ್ಷ ಲಾಲು ಪ್ರಸಾದ್ ಯಾದವ್, ಸಾಮಾಜಿಕ ಮಾಧ್ಯಮದಲ್ಲಿ ರೋಟಿಯನ್ನು ತಿರುಗಿಸಬೇಕು ಎಂದು ಹೇಳುವ ಮೂಲಕ ಸರ್ಕಾರ ಬದಲಾಗಬೇಕು ಎಂಬ ಆಶಯ ವ್ಯಕ್ತಪಡಿಸಿದರೆ, ಇತ್ತ ಲಖಿಸರಾಯ್‌ನಿಂದ ಸತತ ನಾಲ್ಕನೇ ಬಾರಿಗೆ ಆಯ್ಕೆಯಾಗಲು ಬಯಸುತ್ತಿರುವ ಉಪಮುಖ್ಯಮಂತ್ರಿ ವಿಜಯ್‌ಸಿನ್ಹಾ ತಮ್ಮ ಬೆಂಗಾವಲು ಪಡೆ ಮೇಲಿನ ದಾಳಿಯನ್ನು ಖಂಡಿಸಿದ್ದು, ಅತ್ಯಂತ ಹಿಂದುಳಿದ ವರ್ಗಗಳಿಗೆ ಸೇರಿದ ಮತದಾರರನ್ನು ಬೆದರಿಸಲು ಪ್ರಯತ್ನಿಸುತ್ತಿರುವ ಆರ್‌ಜೆಡಿ ಬೆಂಬಲಿಗರು ತಮ್ಮ ಬೆಂಗಾವಲು ಪಡೆಯಲ್ಲಿದ್ದ ಕಾರಿನ ಮೇಲೆ ದಾಳಿ ಮಾಡಿದ್ದಾರೆ ಎಂದು ಹೇಳಿದ್ದಾರೆ.

ಮೈಸೂರು ಮಿತ್ರ
ಶುಕ್ರವಾರ 7 ನವೆಂಬರ್ 2025

ಅಭಿನಂದನೆ...



ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ರಾಜ್ಯ ಬಿಜೆಪಿ ಓಬಿಸಿ ಮೋರ್ಚಾದ ಅಧ್ಯಕ್ಷ ಆರ್.ರಘು (ಕೌಟಿಲ್ಯ) ಅವರು ಅಭಿನಂದಿಸಿ, ಜನ್ಮದಿನದ ಶುಭಾಶಯ ಕೋರಿದರು. ತುಮಕೂರು ಶಾಸಕ ಜ್ಯೋತಿ ಗಣೇಶ್, ಓಬಿಸಿ ಮೋರ್ಚಾ ಪದಾಧಿಕಾರಿಗಳಾದ ಎ.ಎಸ್.ವೆಂಕಟೇಶ್, ಶ್ರೀಮತಿ ಅಶ್ವಿನಿ ಶಂಕರ್ ಹಾಗೂ ಇತರ ಪ್ರಮುಖರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ರಾಜ್ಯೋತ್ಸವ...



ಡಾ.ರಾಜ್ ಶಿವ ಸೈನ್ಯ ಶಿವರಾಜ್‌ಕುಮಾರ್ ಅಭಿಮಾನಿಗಳ ಸಂಘದ ವತಿಯಿಂದ ಮೈಸೂರಿನ ಡಾ.ರಾಜ್‌ಕುಮಾರ್ ಉದ್ಯಾನವನದಲ್ಲಿ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಸಂಘದ ಗೌರವ ಅಧ್ಯಕ್ಷರೂ ಆದ ಚಿತ್ರ ನಟ ಸೋಮಣ್ಣ, ಅಧ್ಯಕ್ಷ ಬಿ.ಎಸ್.ರವಿ, ಕಾರ್ಯಾಧ್ಯಕ್ಷ ಮಹೇಶ, ಉಪಾಧ್ಯಕ್ಷ ರಾಜೀವ್, ರವಿ, ಮೂರ್ತಿ, ಮುತ್ತು ಇನ್ನಿತರರು ಉಪಸ್ಥಿತರಿದ್ದರು.

ಆಂಧ್ರದ ಕರ್ನೂಲ್ ಬಸ್ ಬೆಂಕಿಗಾಹುತಿ ಪ್ರಕರಣದ ಹಿನ್ನೆಲೆ

ಮೈಸೂರು ನಗರ, ಗ್ರಾಮಾಂತರದ ಸಾವಿರಾರು ಬಸ್‌ಗಳ ಸೇಫ್ಟಿ ಆಡಿಟ್ ಪೂರ್ಣ





ಮೈಸೂರು ವಿಭಾಗದ ಬಸ್‌ಗಳಲ್ಲಿ ಸೇಫ್ಟಿ ಆಡಿಟ್ ಪರಿಶೀಲನೆ ನಡೆಸುತ್ತಿರುವುದು.

ಮೈಸೂರು, ನ.6(ಬಿಎಲ್‌ಯು)– ಆಂಧ್ರಪ್ರದೇಶದ ಕರ್ನೂಲ್‌ನಲ್ಲಿ ಇತ್ತೀಚೆಗೆ ಖಾಸಗಿ ಬಸ್ ಬೆಂಕಿಗಾಹುತಿಯಾಗಿ 20 ಮಂದಿ ಸಜೀವ ದಹನವಾದ ಪ್ರಕರಣದಿಂದ ಎಚ್ಚೆತ್ತ ಕೆಎಸ್‌ಆರ್‌ಟಿಸಿ ಅಧಿಕಾರಿಗಳು ತನ್ನ ಎಲ್ಲಾ ಬಸ್‌ಗಳ ಸೇಫ್ಟಿ ಆಡಿಟ್ ಮಾಡಿಸಿದೆ. ಈ ಸಂಬಂಧ ಸೇಫ್ಟಿ ಆಡಿಟ್ ವರದಿಯನ್ನು ಕೆಎಸ್‌ಆರ್‌ಟಿಸಿ ಪ್ರಧಾನ ಕಚೇರಿಗೆ ಸಲ್ಲಿಸಿದ್ದಾರೆ.

ಮೈಸೂರು ಸೇರಿದಂತೆ ರಾಜ್ಯದ ಎಲ್ಲಾ ಬಸ್‌ಗಳಲ್ಲಿ ಸುರಕ್ಷತಾ ಕ್ರಮ ಕೈಗೊಳ್ಳುವ ಹಿನ್ನೆಲೆಯಲ್ಲಿ ಸೇಫ್ಟಿ ಆಡಿಟ್ ಮಾಡಿಸಲು ಆದೇಶಿಸಿತ್ತು. ಸರ್ಕಾರದ ನಿರ್ದೇಶನದಂತೆ ಮೈಸೂರು ನಗರ ಹಾಗೂ ಗ್ರಾಮಾಂತರ ವಿಭಾಗದ ಸಾವಿರಾರು ಬಸ್‌ಗಳಲ್ಲಿ ಸುರಕ್ಷತಾ ಕ್ರಮವನ್ನು ಪರಿಶೀಲನೆ ನಡೆಸಿ ಸೇಫ್ಟಿ ಆಡಿಟ್ ಮಾಡಿದ್ದಾರೆ.

ಬಸ್‌ಗಳು ಅಪಘಾತಕ್ಕೀಡಾದರೆ ಪ್ರಯಾಣಿಕರು ತುರ್ತು ನಿರ್ಗಮನ ದ್ವಾರದಿಂದ ಹೊರಗೆ ಬರಲು ಪ್ರತಿಯೊಂದು ಬಸ್‌ನಲ್ಲಿ ವ್ಯವಸ್ಥೆ ಇದೆ. ಬಸ್‌ನ ಹವಾ ನಿಯಂತ್ರಿತ ಎರಡು ತುದಿಯಲ್ಲಿರುವ ಸುತ್ತಿಗೆಯಿಂದ ತುರ್ತು ನಿರ್ಗಮನ ದ್ವಾರದ ಗಾಜನ್ನು ಹೊಡೆದು ಹೊರಗೆ ಬರಲು ಅವಕಾಶ ಕಲ್ಪಿಸಲಾಗಿದೆ. ಸಾಮಾನ್ಯ ಬಸ್‌ಗಳಲ್ಲಿ ಸುಲಭವಾಗಿ ತೆಗೆಯುವ ವ್ಯವಸ್ಥೆ ಇದೆ. ಬಹಳಷ್ಟು ಬಸ್‌ಗಳಲ್ಲಿ ತುರ್ತು ನಿರ್ಗಮನ ದ್ವಾರ ಬಳಸದ ಕಾರಣ ಅದು ಜಾಮ್ ಆಗಿವೆ. ಬೆಂಕಿ ಅವಘಡ ವೇಳೆ ಬೆಂಕಿ ನಂದಿಸುವ ಉಪಕರಣ ಅಳವಡಿಸಿರಲಿಲ್ಲ, ಡೀಸೆಲ್ ಟ್ಯಾಂಕ್‌ನಿಂದ ಇಂಧನ ಸೋರುವುದನ್ನು ಗಮನಿಸುತ್ತಿರಲಿಲ್ಲ. ಆದರೆ ಈಗ ಎಲ್ಲಾ ಬಸ್ ಗಳಲ್ಲಿ ಈ ಎಲ್ಲಾ ಅವ್ಯವಸ್ಥೆಯನ್ನು ಸರಿಪಡಿಸಲಾಗಿದೆ. ಸೂಪರ್‌ವೈಸರ್ ನೇತೃತ್ವದ ನಾಲ್ವರು ಮೆಕ್ಯಾನಿಕ್‌ಗಳು ಪ್ರತಿಯೊಂದು ಬಸ್‌ನಲ್ಲಿ ಸುರಕ್ಷತಾ ಕ್ರಮ ಪರಿಶೀಲನೆ ನಡೆಸಿದ್ದಾರೆ. ಈ ಮೂಲಕ ಯಾವುದೇ ಅವಘಡ ಸಂಭವಿಸಿದಾಗ ಪ್ರಯಾಣಿಕರ ಸುರಕ್ಷತೆಗೆ ಸಾಕಷ್ಟು ವ್ಯವಸ್ಥೆ ಮಾಡಲಾಗಿದೆ.

ಪ್ರತಿಯೊಂದು ಬಸ್ ಸುರಕ್ಷತೆ ಪರಿಶೀಲಿಸಿದ್ದೇವೆ

"ಮೈಸೂರು ನಗರ ವಿಭಾಗದಲ್ಲಿ 554 ಬಸ್‌ಗಳಿದ್ದು, ಎಲ್ಲಾ ಬಸ್‌ಗಳ ಸೇಫ್ಟಿ ಆಡಿಟ್ ಮಾಡಿದ್ದೇವೆ. ಆದರೆ ಇವುಗಳಲ್ಲಿ 24 ಬಸ್‌ಗಳ ತುರ್ತು ನಿರ್ಗಮನ ದ್ವಾರಗಳ ಸರಿಪಡಿಸಬೇಕಿದೆ. ಈ ಕಾರ್ಯವನ್ನು ಪೂರ್ಣಗೊಳಿಸಿದ ನಂತರ ಕೆಎಸ್‌ಆರ್ ಟಿಸಿ ಪ್ರಧಾನ ಕಚೇರಿಗೆ ಸೇಫ್ಟಿ ಆಡಿಟ್ ವರದಿ ಸಲ್ಲಿಸುತ್ತೇವೆ.
–ವೀರೇಶ್, ವಿಭಾಗೀಯ ನಿಯಂತ್ರಣಾಧಿಕಾರಿ, ಮೈಸೂರು ನಗರ ವಿಭಾಗ

ಕೆಎಸ್‌ಆರ್‌ಟಿಸಿ ಪ್ರಧಾನ ಕಚೇರಿಗೆ ವರದಿ ಸಲ್ಲಿಕೆ

"ಮೈಸೂರು ಗ್ರಾಮಾಂತರ ವಿಭಾಗದ 718 ಬಸ್‌ಗಳ ಸೇಫ್ಟಿ ಆಡಿಟ್ ಮುಗಿಸಿದ್ದೇವೆ. ನಮ್ಮ ಮೆಕ್ಯಾನಿಕ್ ಪ್ರತಿಯೊಂದು ಬಸ್‌ನ ಸುರಕ್ಷತಾ ವ್ಯವಸ್ಥೆ ಪರಿಶೀಲನೆ ಮಾಡಿ ದೋಷ ಇರುವ ಕಡೆ ಸರಿ ಮಾಡಿದ್ದಾರೆ. ಈ ಮೂಲಕ ಯಾವ ಬಸ್‌ಗಳಲ್ಲೂ ಸಮಸ್ಯೆ ಇಲ್ಲ. ಈ ಸಂಬಂಧ ಸೇಫ್ಟಿ ಆಡಿಟ್ ವರದಿಯನ್ನು ಕೆಎಸ್‌ಆರ್‌ಟಿಸಿ ಪ್ರಧಾನ ಕಚೇರಿಗೆ ಸಲ್ಲಿಸಿದ್ದೇವೆ. 16 ವೋಲ್ವೊ ಬಸ್‌ಗಳ ಎಸಿ ಗ್ಯಾಸ್ ಫಿಲ್ ಮಾಡಬೇಕಿದೆ. ಆದರೆ ನಮ್ಮ ತಾಂತ್ರಿಕ ಸಿಬ್ಬಂದಿಗಳಿಂದ ಇದು ಸಾಧ್ಯವಿಲ್ಲದ ಕಾರಣ ವೋಲ್ವೊ ಕಂಪನಿ ಅಧಿಕಾರಿಗಳಿಗೆ ತಿಳಿಸಿದ್ದೇವೆ. ಕಂಪನಿಯ ತಂತ್ರಜ್ಞರನ್ನು ಕರೆಸಿ ಎಸಿ ಫಿಲ್ ಮಾಡಿಸುತ್ತೇವೆ. –ಶ್ರೀನಿವಾಸ, ವಿಭಾಗೀಯ ನಿಯಂತ್ರಣಾಧಿಕಾರಿ, ಮೈಸೂರು ಗ್ರಾಮಾಂತರ

ಸಂಗೀತ ವಿವಿ 10ನೇ ವಾರ್ಷಿಕ ಘಟಿಕೋತ್ಸವ

ಮೈಸೂರು, ನ. 6– ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ 2024–25ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಗಳಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಪ್ರದಾನ, ಡಿ.ಲಿಟ್ ಪದವಿ ಪಡೆದಿರುವ ಅಭ್ಯರ್ಥಿಗಳು, ರಂಗಭೂಮಿ ಕ್ಷೇತ್ರ, ಸಂಗೀತ ಕ್ಷೇತ್ರ ಹಾಗೂ ಜಾನಪದ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಮೂವರು ಸಾಧಕರಿಗೆ ಗೌರವ ಡಾಕ್ಟರೇಟ್ ಪದವಿ ಪ್ರಧಾನ ಸಮಾರಂಭವಾದ 10ನೇ ವಾರ್ಷಿಕ ಘಟಿಕೋತ್ಸವ ಕಾರ್ಯಕ್ರಮವನ್ನು ನ.8ರಂದು ಬೆಳಗ್ಗೆ 11.30ಕ್ಕೆ ವಿವಿ ಆವರಣದಲ್ಲಿ ಆಯೋಜಿಸಲಾಗಿದೆ.

ಕಾರ್ಯಕ್ರಮದಲ್ಲಿ ರಾಜ್ಯಪಾಲರಾದ ಥಾವರ್‌ಚಂದ್ ಗೆಹ್ಲೋಟ್, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್, ಕೇರಳ ಕಲಾಮಂಡಲಂ ವಿವಿ ಕುಲಪತಿ ಪ್ರೊ.ವಿ. ಅನಂತಕೃಷ್ಣನ್, ಸಂಗೀತ ವಿವಿ ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ, ಹಣಕಾಸು ಅಧಿಕಾರಿ ಸಿ.ಪಿ. ಸೌಮ್ಯಶ್ರೀ, ಕುಲಸಚಿವ ಪ್ರೊ.ಮಂಜುನಾಥ್ ಪಾಲ್ಗೊಳ್ಳಲಿದ್ದಾರೆ.

ಅಧಿಕಾರ ಸ್ವೀಕಾರ



ಮೈಸೂರು ಜಿಲ್ಲಾ ಸೈಬರ್ ಕ್ರೈಮ್ ವಿಭಾಗದ ಡಿವೈಎಸ್‌ಪಿ ಆಗಿ ಶ್ರೀಕಾಂತ್, ಎಸ್‌ಪಿ ಕಚೇರಿಯಲ್ಲಿ ಎನ್.ರಘು ಅವರಿಂದ ಅಧಿಕಾರ ಸ್ವೀಕರಿಸಿದರು.

ನಕಲಿ ದಾಖಲೆಗಳ ಮೂಲಕ 65.95 ಲಕ್ಷ ಸಾಲ ಪಡೆದು ಎಸ್‌ಬಿಐಗೆ ವಂಚನೆ; ಏಳು ಮಂದಿ ವಿರುದ್ಧ ಕೇಸ್

ಸಾಫ್ಟ್‌ವೇರ್ ಕಂಪನಿ ಕೆಲಸಗಾರರೆಂದು ಹೇಳಿ 7 ಮಂದಿ ಸಾಲಕ್ಕೆ ಅರ್ಜಿ; ಖಾತೆ ಇಲ್ಲದಿದ್ದರೂ ಬ್ಯಾಂಕ್ ಮಂಜೂರು



ಮೈಸೂರು, ನ.6–ಖಾಸಗಿ ಬ್ಯಾಂಕ್‌ನ ನಕಲು ದಾಖಲೆಗಳನ್ನು ಸಲ್ಲಿಸಿ ರಾಷ್ಟ್ರೀಕೃತ ಬ್ಯಾಂಕ್‌ನಿಂದ 7 ಮಂದಿ ಒಟ್ಟು 65.95 ಲಕ್ಷ ರೂ. ವೈಯಕ್ತಿಕ ಸಾಲ ಪಡೆದು ವಂಚಿಸಿರುವ ಬಗ್ಗೆ ನರಸಿಂಹರಾಜ ಠಾಣೆಯಲ್ಲಿ ಪ್ರತ್ಯೇಕ ದೂರುಗಳು ದಾಖಲಾಗಿವೆ.

ಮೈಸೂರಿನ ಗಾಂಧಿನಗರ ನಿವಾಸಿ ಸಣ್ಣಪ್ಪ, ಬೋಗಾದಿ 2ನೇ ಹಂತದ ವಸಂತನಗರ ನಿವಾಸಿ ಎನ್.ನವೀನ್‌ಕುಮಾರ್, ನಾಗೇಶ್, ಕೆ.ಜಿ.ಕೊಪ್ಪಲು ನಿವಾಸಿ ಹೆಚ್.ಮಂಜಣ್ಣ, ಜಯನಗರ ನಿವಾಸಿ ಎನ್.ದೀಪಾ, ಕ್ಯಾತಮಾರನಹಳ್ಳಿಯ ಶ್ರೀನಿವಾಸ, ಮಂಡಿ ಮೊಹಲ್ಲಾದ ಪುಲಿಕೇಶಿ ರಸ್ತೆ ಮಂಜುನಾಥ ಬ್ಯಾಂಕ್ ಅನ್ನು ವಂಚಿಸಿದವರು.

ಇವರೆಲ್ಲರೂ ಮೈಸೂರಿನ ಬೋಗಾದಿಯಲ್ಲಿರುವ ವೆಪ್ರಭ ಸಾಫ್ಟ್‌ವೇರ್ ಸಲ್ಯೂಷನ್ಸ್ ಪ್ರೈ.ಲಿ. ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದು, ತಮ್ಮ ಸಂಬಳದ ಖಾತೆ ಆಕ್ಸಿಸ್ ಬ್ಯಾಂಕ್‌ನಲ್ಲಿದೆ ಎಂದು ತಿಳಿಸಿ, ಆಕ್ಸಿಸ್ ಬ್ಯಾಂಕ್‌ನಲ್ಲಿ ತಮ್ಮ ಸಂಬಳ ಜಮೆ ಆಗಿರುವ ಬಗ್ಗೆ ನಕಲಿ ದಾಖಲೆಗಳನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಎನ್.ಆರ್.ಮೊಹಲ್ಲಾ ಶಾಖೆಗೆ ಸಲ್ಲಿಸಿ ವೈಯಕ್ತಿಕ ಸಾಲ ಪಡೆದು, ಅದನ್ನು ಮರು ಪಾವತಿ ಮಾಡದೇ ವಂಚಿಸಿದ್ದಾರೆ ಎಂದು ಆರೋಪಿಸಲಾಗಿದೆ.

ವಿವರ: ಗಾಂಧಿನಗರದ ಹೆಚ್.ಸಣ್ಣಪ್ಪ, ತಾನು ವೆಪ್ರಭ ಸಾಫ್ಟ್‌ವೇರ್ ಸಲ್ಯೂಷನ್ ಪ್ರೈ.ಲಿ.ನಲ್ಲಿ ಮಾರ್ಕೆಟಿಂಗ್ ಮ್ಯಾನೇಜರ್ ಆಗಿದ್ದು, ಮಾಸಿಕ 40,093 ವೇತನ ಬರುತ್ತಿದೆ ಎಂದು ನಕಲಿ ದಾಖಲೆಗಳನ್ನು ಸಲ್ಲಿಸಿ 2022ರ ಏಪ್ರಿಲ್ 30ರಂದು 10 ಲಕ್ಷ ರೂ. ಸಾಲ ಪಡೆದಿದ್ದಾರೆ.

ವಸಂತನಗರದ ಎನ್.ನವೀನ್ ಕುಮಾರ್ ಇದೇ ಕಂಪನಿಯಲ್ಲಿ ಟೆಕ್ನಿಕಲ್ ಅಸಿಸ್ಟೆಂಟ್ ಆಗಿ ಕೆಲಸ ಮಾಡುತ್ತಿದ್ದು, ಮಾಸಿಕ 39,500 ವೇತನ ಬರುತ್ತಿದೆ ಎಂದು ನಕಲಿ ದಾಖಲೆ ಸಲ್ಲಿಸಿ 2022ರ ಫೆಬ್ರವರಿ 17ರಂದು 9.20 ಲಕ್ಷ ವೈಯಕ್ತಿಕ ಸಾಲ ಪಡೆದಿದ್ದಾರೆ.

ವಸಂತನಗರದ ನಾಗೇಶ್ ಅದೇ ಕಂಪನಿಯಲ್ಲಿ ಮಾರ್ಕೆಟಿಂಗ್ ಮ್ಯಾನೇಜರ್ ಆಗಿದ್ದು, ಮಾಸಿಕ 40,093 ವೇತನ ಬರುತ್ತಿದೆ ಎಂದು ನಕಲಿ ದಾಖಲೆ ಸಲ್ಲಿಸಿ 2023ರ ಡಿಸೆಂಬರ್ 7ರಂದು 9.40 ಲಕ್ಷ ವೈಯಕ್ತಿಕ ಸಾಲ ಪಡೆದರೆ, ಕೆ.ಜಿ.ಕೊಪ್ಪಲಿನ ಹೆಚ್.ಮಂಜಣ್ಣ ಅದೇ ಕಂಪನಿಯಲ್ಲಿ ಟೆಕ್ನಿಕಲ್ ಅಸಿಸ್ಟೆಂಟ್ ಇರುವುದಾಗಿಯೂ, ತನಗೆ ಮಾಸಿಕ 39,500 ವೇತನ ಬರುತ್ತಿದೆ ಎಂದು ನಕಲಿ ದಾಖಲೆ ಸಲ್ಲಿಸಿ 2021ರ ಅಕ್ಟೋಬರ್ 13ರಂದು 9.55 ಲಕ್ಷ ರೂ. ವೈಯಕ್ತಿಕ ಸಾಲ ಪಡೆದಿದ್ದಾರೆ.

ಜಯನಗರದ ಶ್ರೀಮತಿ ಎನ್.ದೀಪಾ ಅದೇ ಕಂಪನಿಯಲ್ಲಿ ಟೆಕ್ನಿಕಲ್ ಅಸಿಸ್ಟೆಂಟ್ ಆಗಿ ಕೆಲಸ ಮಾಡುತ್ತಿದ್ದು, ಮಾಸಿಕ 37,944 ರೂ. ವೇತನ ಬರುವುದಾಗಿ ನಕಲಿ ದಾಖಲೆ ಸಲ್ಲಿಸಿ 2021ರ ನವೆಂಬರ್ 5ರಂದು 9.25 ಲಕ್ಷ ಪಡೆದರೆ, ಕ್ಯಾತಮಾರನಹಳ್ಳಿ ಶ್ರೀನಿವಾಸ್ ಅದೇ ಕಂಪನಿಯ ಮಾರ್ಕೆಟಿಂಗ್ ಮ್ಯಾನೇಜರ್ ಆಗಿದ್ದು, ತನಗೆ 35,844 ರೂ. ಮಾಸಿಕ ವೇತನ ಇದೆ ಎಂದು ನಕಲಿ ದಾಖಲೆ ಸಲ್ಲಿಸಿ 2021ರ ಅಕ್ಟೋಬರ್ 12ರಂದು 9.20 ಲಕ್ಷ ರೂ. ಪಡೆದಿದ್ದು, ಪುಲಿಕೇಶಿ ರಸ್ತೆಯ ಮಂಜುನಾಥ್ ಅದೇ ಕಂಪನಿಯ ಡಿಜಿಟಲ್ ಎಕ್ಸಿಕ್ಯೂಟಿವ್ ಆಗಿ ಕೆಲಸ ಮಾಡುತ್ತಿದ್ದು, ಮಾಸಿಕ 36,413 ರೂ. ಮಾಸಿಕ ವೇತನ ಬರುತ್ತಿದೆ ಎಂದು ನಕಲಿ ದಾಖಲೆ ಸಲ್ಲಿಸಿ, 2021ರ ಡಿಸೆಂಬರ್ 13ರಂದು 9.30 ಲಕ್ಷ ರೂ. ವೈಯಕ್ತಿಕ ಸಾಲ ಪಡೆದಿದ್ದು, ಒಟ್ಟಾರೆ ಇವರೆಲ್ಲರೂ ಸೇರಿ 65.95 ಲಕ್ಷ ರೂ. ಸಾಲ ಪಡೆದಿದ್ದಾರೆ.

ಆಡಿಟ್‌ನಲ್ಲಿ ಬಣ್ಣ ಬಯಲು: 2022ರ ಸೆಪ್ಟೆಂಬರ್ 17ರಂದು ಬ್ಯಾಂಕ್‌ನ ಆಂತರಿಕ ಲೆಕ್ಕ ಪರಿಶೋಧಕರು ಪರಿಶೀಲನೆ ನಡೆಸಿದಾಗ ವಂಚನೆ ಪ್ರಕರಣ ಬೆಳಕಿಗೆ ಬಂದಿದೆ. ನಂತರ ಆಕ್ಸಿಸ್ ಬ್ಯಾಂಕ್‌ನೊಂದಿಗೆ ಪತ್ರ ವ್ಯವಹಾರ ನಡೆಸಿದಾಗ ಆ ಬ್ಯಾಂಕ್‌ನಲ್ಲಿ ಈ ವ್ಯಕ್ತಿಗಳ ಖಾತೆಯೇ ಇಲ್ಲ. ಅವರು ಎಸ್‌ಬಿಐಗೆ ಸಲ್ಲಿಸಿರುವುದು ನಕಲಿ ದಾಖಲೆಗಳು ಎಂಬುದು ತಿಳಿದು ಬಂದಿದೆ. ಈ ಹಿನ್ನೆಲೆಯಲ್ಲಿ ನ್ಯಾಯಾಲಯದ ಆದೇಶದ ಮೇರೆಗೆ ಎಸ್‌ಬಿಐ ಎನ್.ಆರ್. ಮೊಹಲ್ಲಾ ಶಾಖೆಯ ಹಾಲಿ ಮ್ಯಾನೇಜರ್ ಶ್ರೀಮತಿ ರಮ್ಯಾ ಅವರು ನೀಡಿದ ದೂರಿನನ್ವಯ 7 ಮಂದಿಯ ವಿರುದ್ಧವೂ ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ.

ಎಸ್‌ಬಿಐನಲ್ಲಿ ಇವರ ಖಾತೆಯೇ ಇರಲಿಲ್ಲ: ಯಾವುದೇ ಬ್ಯಾಂಕ್‌ನಲ್ಲಿ ವೈಯಕ್ತಿಕ ಸಾಲ ಪಡೆಯಬೇಕಾದರೆ ಆ ಬ್ಯಾಂಕ್‌ನಲ್ಲಿ ಸಾಲ ಪಡೆಯುವವರ ಖಾತೆ ಇರಬೇಕಾಗುತ್ತದೆ. ಆದರೆ ಬ್ಯಾಂಕ್ ಅನ್ನು ವಂಚಿಸಿರುವ ಈ 7 ಮಂದಿಯ ಖಾತೆ ಎಸ್‌ಬಿಐ ಎನ್.ಆರ್.ಮೊಹಲ್ಲಾ ಶಾಖೆಯಲ್ಲಿ ಮಾತ್ರವಲ್ಲದೇ, ಈ ಬ್ಯಾಂಕ್‌ನ ಯಾವುದೇ ಶಾಖೆಯಲ್ಲೂ ಇರಲಿಲ್ಲ. ಇವರಿಗೆ ಸಾಲ ಮಂಜೂರು ಮಾಡಿ ಅನಂತರ ಎಸ್‌ಬಿಐನಲ್ಲಿ ಖಾತೆ ತೆರೆಯಲಾಗಿದೆ ಎಂಬುದು ಆಡಿಟ್‌ನಲ್ಲಿ ತಿಳಿದುಬಂದಿದೆ.

ನಿಯಮ ಉಲ್ಲಂಘನೆ?: ಈ 7 ಮಂದಿಗೂ ಲಕ್ಷಾಂತರ ರೂ. ಸಾಲ ನೀಡುವ ವೇಳೆ ನಿಯಮ ಉಲ್ಲಂಘನೆ ಮಾಡಲಾಗಿದೆಯೇ? ಎಂಬ ಸಂಶಯ ಎದುರಾಗಿದ್ದು, ಅದರ ಬಗ್ಗೆಯೂ ಪೊಲೀಸರು ತನಿಖೆ ನಡೆಸುತ್ತಾರೆ ಎಂದು ಹೇಳಲಾಗಿದೆ. ಯಾರಿಗೆ ಆದರೂ ವೈಯಕ್ತಿಕ ಸಾಲ ನೀಡುವ ವೇಳೆ ಅವರು ಕೆಲಸ ಮಾಡುತ್ತಿರುವ ಬಗ್ಗೆ ಸಂಬಂಧಪಟ್ಟ ಕಚೇರಿಯಿಂದ ಬ್ಯಾಂಕ್‌ನವರು ದೃಢೀಕರಣ ಪತ್ರ ಪಡೆಯಬೇಕಾಗಿತ್ತು. ಸಾಲ ಪಡೆಯುವವರ ಸಿಬಿಲ್ ಸ್ಕೋರ್ ಅನ್ನು ಪರಿಶೀಲಿಸಿ, ಅದು ತೃಪ್ತಿಕರವಾಗಿ ಇದ್ದರೆ ಮಾತ್ರ ಸಾಲ ನೀಡಲಾಗುತ್ತದೆ. ಈ ಪ್ರಕರಣದಲ್ಲಿ ಸಾಲ ಪಡೆದವರು ಆಕ್ಸಿಸ್ ಬ್ಯಾಂಕ್‌ಗೆ ತಮ್ಮ ಸಂಬಳ ಜಮೆ ಆಗುತ್ತಿದೆ ಎಂಬುದು ಬ್ಯಾಂಕ್ ಖಾತೆಗೆ ಸಂಬಳದ ಹಣ ಜಮೆ ಆಗಿರುವ ಬಗ್ಗೆ ನಕಲಿ ದಾಖಲೆಗಳನ್ನು ನೀಡಿದ್ದಾರೆ. ಸಾಲ ನೀಡಿದ ಅಧಿಕಾರಿಗಳು ಇವರು ಕೆಲಸ ಮಾಡುತ್ತಿರುವುದಾಗಿ ಹೇಳಿದ ಕಂಪನಿಯನ್ನಾಗಲೀ, ಆಕ್ಸಿಸ್ ಬ್ಯಾಂಕ್ ಅನ್ನಾಗಲೀ ಸಂಪರ್ಕಿಸದೇ ವೈಯಕ್ತಿಕ ಸಾಲ ನೀಡಿರಬಹುದು ಎಂದು ಶಂಕಿಸಲಾಗಿದೆ.

ಇಂದಿನಿಂದ ಕದಂಬ ರಂಗೋತ್ಸವ

ಮೈಸೂರು,ನ.6(ಜಿಎ)–ಮೈಸೂರಿನ ಕದಂಬರಂಗ ವೇದಿಕೆ ವತಿಯಿಂದ ನ.7, 8 ಮತ್ತು 9ರಂದು ಕಲಾಮಂದಿರದ ಕಿರು ರಂಗಮಂದಿರದಲ್ಲಿ ಕದಂಬ ರಂಗೋತ್ಸವ ಆಯೋಜಿಸಲಾಗಿದೆ ಎಂದು ಅಧ್ಯಕ್ಷ ರಾಜಶೇಖರ ಕದಂಬ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನ.7ರಂದು ಸಂಜೆ 6.30ಕ್ಕೆ ಹಿರಿಯ ನಟ ಶಂಕರ್ ಅಶ್ವಥ್ ಚಾಲನೆ ನೀಡುವರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನ ಸ್ವಾಮಿ, ಕನ್ನಡ –ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಸುದರ್ಶನ್, ರಂಗ ಸಮಾಜದ ಸದಸ್ಯ ಹೆಚ್.ಎಸ್.ಸುರೇಶ್‌ಬಾಬು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಅಂದು ಸಂಜೆ 7ಕ್ಕೆ ಅಂತರಂಗ ಬಹಿರಂಗ ತಂಡದಿಂದ 'ಬಾಯ್ಬಡ್ಕಿ', ನ.8ರಂದು ಸಂಜೆ 7ಕ್ಕೆ ಎನ್‌ಇಎಸ್ ಹವ್ಯಾಸಿ ರಂಗ ತಂಡದಿಂದ 'ಚೆಕಾವ್ ಟು ಶಾಂಪೇನ್', 9ರಂದು ಕದಂಬ ರಂಗ ವೇದಿಕೆಯಿಂದ 'ನಾ... ನೀ' ನಾಟಕ ಪ್ರದರ್ಶನಗೊಳ್ಳಲಿದೆ ಎಂದರು.

ಸವಿತಾ ಸಮಾಜದ ವಿರುದ್ಧ ಎಂಎಲ್‌ಸಿ ನಿಂದನಾರ್ಹ ಹೇಳಿಕೆ: ಕಾಂಗ್ರೆಸ್ ಹಿಂದುಳಿದ ವರ್ಗಗಳ ಖಂಡನೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ನಗರ ಜಿಲ್ಲಾ ಕಾಂಗ್ರೆಸ್ ಸಮಿತಿಯ ಹಿಂದುಳಿದ ವರ್ಗ ವಿಭಾಗದ ವತಿಯಿಂದ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ವಿರುದ್ಧ ಪೋಸ್ಟರ್ ಬಿಡುಗಡೆಗೊಳಿಸಲಾಯಿತು.

ಮೈಸೂರು,ನ.6(ಜಿಎ)–ಕಾಯಕ ಸಮುದಾಯವಾದ ಸವಿತಾ ಸಮಾಜದ ವಿರುದ್ಧ ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಅವರ ನಿಂದನಾರ್ಹ ಹೇಳಿಕೆಯನ್ನು ಮೈಸೂರು ನಗರ ಜಿಲ್ಲಾ ಕಾಂಗ್ರೆಸ್ ಸಮಿತಿಯ ಹಿಂದುಳಿದ ವರ್ಗ ವಿಭಾಗ ತೀವ್ರವಾಗಿ ಖಂಡಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ವಿಭಾಗದ ಅಧ್ಯಕ್ಷ ಎನ್.ಆರ್.ನಾಗೇಶ್ ಮಾತನಾಡಿ, ಸಮುದಾಯಗಳ ನಡುವೆ ವಿಷ ಬೀಜ ಬಿತ್ತುವ ಕೆಲಸ ಬಿಜೆಪಿಯವರು ಮಾಡುತ್ತಿದ್ದಾರೆ. ಇದೇ ರೀತಿ ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಸಮುದಾಯವನ್ನು ನಿಂದಿಸುವ ನಿಷೇಧಿತ ಪದ ಬಳಸಿದ್ದಾರೆ. ಹೀಗಾಗಿ ಅವರು ಬಹಿರಂಗವಾಗಿ ಕ್ಷಮೆಯಾಚಿಸಬೇಕು. ಇದಕ್ಕೆ ಒಂದು ವಾರ ಗಡುವು ನೀಡಿದ್ದು, ತಪ್ಪಿದಲ್ಲಿ ಅವರ ನಿವಾಸದ ಎದುರು ಹಾಗೂ ಇನ್ನಿತರೆಡೆ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದರು.

ಕಾಯಕ ಸಮುದಾಯಗಳು ನಿಷ್ಠೆ, ಪ್ರಾಮಾಣಿಕತೆಯಿಂದ ತಮ್ಮ ತಮ್ಮ ಕಾಯಕದಲ್ಲಿ ನಿರತವಾಗಿವೆ. ಆದರೆ ಸಿ.ಟಿ. ರವಿ ಅಂತಹವರು ಇದಕ್ಕೆ ಅಡ್ಡಿಯಾಗಿದ್ದಾರೆ. ಅವಿವೇಕತನ ಪ್ರದರ್ಶಿಸಿದ್ದು, ಘಟನೆ ವಿರುದ್ಧ ರಾಜ್ಯದಾದ್ಯಂತ ಪಕ್ಷದ ವತಿಯಿಂದ ಪ್ರತಿಭಟನೆ ನಡೆಯುತ್ತಿದೆ. ಇದಲ್ಲದೆ, ವಿಭಾಗದ ವತಿಯಿಂದ ಪೊಲೀಸ್ ಆಯುಕ್ತರನ್ನು ಕೂಡಲೇ ಭೇಟಿ ಮಾಡಿ ಸಿ.ಟಿ.ರವಿ ಅವರನ್ನು ಬಂಧಿಸಬೇಕು ಎಂದು ಒತ್ತಾಯಿಸಿ ದೂರು ನೀಡುತ್ತಿರುವುದಾಗಿ ತಿಳಿಸಿದರು. ಗೋಷ್ಠಿಯಲ್ಲಿ ಎಸ್.ರಾಜೇಶ್, ಗೋಪಾಲ, ಮೊಗಣ್ಣಾಚಾರ್, ಮಹೇಂದ್ರ ಕಾಗಿನೆಲೆ, ಶಾಂತಕುಮಾರಿ, ಜಯಲಕ್ಷ್ಮಿ ಕುಮುದಾ, ಮಂಗಳ ಉಪಸ್ಥಿತರಿದ್ದರು.

ನಾಳೆಯಿಂದ ಬೆಂಗಳೂರಲ್ಲಿ ಸಮಾಜಮುಖಿ ಸಾಹಿತ್ಯ ಸಮ್ಮೇಳನ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಸಮಾಜಮುಖಿ ಸಾಹಿತ್ಯ ಸಮ್ಮೇಳನದ ಪೋಸ್ಟರ್ ಬಿಡುಗಡೆಗೊಳಿಸಲಾಯಿತು.

ಮೈಸೂರು,ನ.6(ಜಿಎ)–ಕನ್ನಡದ ಕ್ರಿಯಾಶೀಲ ಮನಸ್ಸುಗಳನ್ನು ಒಂದೆಡೆ ಸೇರಿಸಿ ಚರ್ಚಿಸುವ ಉದ್ದೇಶದಿಂದ ಸಮಾಜಮುಖಿ ಪತ್ರಿಕೆ ವತಿಯಿಂದ ಬೆಂಗಳೂರಿನ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಆವರಣದಲ್ಲಿ ನ.8 ಮತ್ತು 9ರಂದು ಸಮಾಜಮುಖಿ ಸಾಹಿತ್ಯ ಸಮ್ಮೇಳನ ಆಯೋಜಿಸಲಾಗಿದೆ ಎಂದು ವನ್ಯಜೀವಿ ಛಾಯಾಗ್ರಾಹಕ ಲೋಕೇಶ್ ಮೊಸಳೆ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮಾಜಮುಖಿ ಸಾಹಿತ್ಯ ಸಮ್ಮೇಳನದಲ್ಲಿ ಮುಖ್ಯವಾಗಿ ಸಾಹಿತ್ಯ, ನಾಟಕ, ಕಲೆ, ಸಿನಿಮಾ, ಪರಿಸರ ಕುರಿತಾಗಿ ವಿಚಾರ ಸಂಕಿರಣಗಳು, ಸಂವಾದಗಳು, ಚರ್ಚೆಗಳು ನಡೆಯಲಿದ್ದು, ಸಾಹಿತಿಗಳಾದ ಹಂಪನಾ, ಬರಗೂರು ರಾಮಚಂದ್ರಪ್ಪ, ಹೆಚ್.ಎಸ್ ಶಿವಪ್ರಕಾಶ್ ಕಾರ್ಯಕ್ರಮ ಉದ್ಘಾಟಿಸುವರು. ಕಾರ್ಯಕ್ರಮದಲ್ಲಿ ಗಿರೀಶ್ ಕಾಸರವಳ್ಳಿ, ವಿದ್ಯಾಶಂಕರ್, ಈರೇಗೌಡ, ರಾಜೇಂದ್ರ ಚೆನ್ನಿ, ಪುರುಷೋತ್ತಮ ಬಿಳಿಮಲೆ, ಸಬೀಬ ಭೂಮಿಗೌಡ, ಕೃಪಾಕರ ಸೇನಾನಿ, ಕಲೀಮ್ ಉಲ್ಲಾ, ಬಂಜಗೆರೆ ಜಯಪ್ರಕಾಶ್ ಸೇರಿದಂತೆ ಹಲವಾರು ಸಾಹಿತಿಗಳು, ಸಂಸ್ಕೃತಿ ಚಿಂತಕರು, ಚಲನಚಿತ್ರ ಬರಹಗಾರರು, ಭಾಷಾ ತಜ್ಞರು, ಪರಿಸರ ವಾದಿಗಳು ನೂರಾರು ಗಣ್ಯ ವ್ಯಕ್ತಿಗಳು ಕಾರ್ಯಕ್ರಮದ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಸಮ್ಮೇಳನವು ನ.8ರಂದು ಬೆಳಿಗ್ಗೆ 10 ರಿಂದ ಸಂಜೆ 7.30ರವರೆಗೆ, ನ.9ರಂದು ಬೆಳಿಗ್ಗೆ 10ರಿಂದ ಸಂಜೆವರೆಗೆ, ಮುಖ್ಯ ವೇದಿಕೆ(ಮುಖ್ಯ ಚರ್ಚೆ), ಸೃಜನಶೀಲ(ಸಮಕಾಲೀನ), ಶಾಸ್ತ್ರೀಯ(ಪುಸ್ತಕ ಪ್ರಪಂಚ), ಮ್ಯೂಸ್‌ಹಾಲ್(ಜಗದರಿವು), ಸಾಹಿತ್ಯೇತರ(ಸಂಸ್ಕೃತಿ ಸಂಪದ) ಎಂಬ ಐದು ವೇದಿಕೆಗಳಲ್ಲಿ ಕಾರ್ಯಕ್ರಮಗಳು ನಡೆಯಲಿವೆ ಎಂದು ತಿಳಿಸಿದರು.

ನ.9ರಂದು ಸಂಜೆ 4ರಿಂದ 5ರವರೆಗೆ ಸಮಾರೋಪ ನಡೆಯಲಿದ್ದು, ಸಾಹಿತಿಗಳಾದ ಹಂಪನಾ, ಜಿ.ರಾಮಕೃಷ್ಣ, ಕೆ.ರಾಮಯ್ಯ, ಬಿ.ಆರ್ ರವಿಕಾಂತೇಗೌಡ, ಎಸ್.ಜಿ.ಸಿದ್ದರಾಮಯ್ಯ, ಪ್ರಕಾಶ್ ಮೂರ್ತಿ ರಾಜಾರಾಮ ತೋಳ್ಪಾಡಿ, ಚೆನ್ನಬಸವಣ್ಣ, ಜಯಪ್ರಕಾಶ್‌ಗೌಡ ಇನ್ನಿತರರು ಆಗಮಿಸಲಿದ್ದಾರೆ. ಸಾಹಿತ್ಯ ಸಮ್ಮೇಳನಕ್ಕೆ ಹಲವಾರು ಸಂಘ ಸಂಸ್ಥೆಗಳು ಸಹಯೋಗ ನೀಡಿದ್ದು, ಪುಸ್ತಕ ಪ್ರದರ್ಶನ ಮತ್ತು ಮಾರಾಟ ಮಾಡಲಾಗುತ್ತದೆ. ಸಮ್ಮೇಳನಕ್ಕೆ ಭಾಗವಹಿಸುವವರು ತಲಾ 300 ರೂ. ನೀಡಿ ನೋಂದಾಯಿಸಿಕೊಳ್ಳತಕ್ಕದ್ದು, ವಿದ್ಯಾರ್ಥಿಗಳಿಗೆ ರಿಯಾಯಿತಿ ನೀಡಲಾಗಿದ್ದು, 200 ರೂ. ನೀಡಿ ನೊಂದಾಯಿಸಿಕೊಳ್ಳಬೇಕು. ನ.7ಮತ್ತು 8ರಂದು ರಾತ್ರಿ ವಸತಿ ಸೌಲಭ್ಯ ಒದಗಿಸಲಿದ್ದು, ತಲಾ 1000 ರೂ. ವಿದ್ಯಾರ್ಥಿಗಳಿಗೆ 800 ರೂ. ನಿಗದಿಪಡಿಸಲಾಗಿದೆ. ಸಮ್ಮೇಳನದಲ್ಲಿ ಭಾಗವಹಿಸಲು ಇಚ್ಛಿಸುವವರು ಹೆಚ್ಚಿನ ಮಾಹಿತಿಗಾಗಿ 9900049892 ಸಂಪರ್ಕಿಸಿ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಕೆ.ಆರ್. ಶಿಲ್ಪ, ನಿರಂತರ ಸುಗುಣ, ಶಿವಸ್ವಾಮಿ, ಅಭಿರುಚಿ ಗಣೇಶ್ ಉಪಸ್ಥಿತರಿದ್ದರು.

ದೇಶ - ವಿದೇಶ

ನ್ಯೂಯಾರ್ಕ್‌ನ ಮೇಯರ್ ಆಗುತ್ತಿದ್ದಂತೆ ಟ್ರಂಪ್‌ಗೆ ಎಚ್ಚರಿಕೆ ಕೊಟ್ಟ ಮಮ್ದಾನಿ



ನ್ಯೂಯಾರ್ಕ್: ಭಾರತ ಮೂಲದ ಜೋಹ್ರಾನ್ ಮಮ್ದಾನಿ ನ್ಯೂಯಾರ್ಕ್ ನಗರದ ಮೇಯರ್ ಚುನಾವಣೆಯಲ್ಲಿ ಗೆಲ್ಲುವ ಮೂಲಕ ಇತಿಹಾಸ ನಿರ್ಮಿಸಿದರು. 34 ವರ್ಷದ ಮಮ್ದಾನಿ ಭಾರತೀಯ ಚಲನಚಿತ್ರ ನಿರ್ಮಾಪಕಿ ಮೀರಾ ನಾಯರ್ ಮತ್ತು ಉಗಾಂಡಾದ ಬರಹಗಾರ ಮಹಮೂದ್ ಮಮ್ದಾನಿ ಅವರ ಪುತ್ರ.

ಅವರು ಮೇಯರ್ ಆಗಿ ಆಯ್ಕೆಯಾದ ಬಳಿಕ ಮಾಡಿದ ಮೊದಲ ಭಾಷಣದಲ್ಲಿ ಟ್ರಂಪ್‌ಗೆ ಎಚ್ಚರಿಕೆ ನೀಡಿದ್ದಾರೆ. ತಮ್ಮ ಭಾಷಣವನ್ನು ಕೇಳಲು ಅವರು ಅಮೆರಿಕ ಅಧ್ಯಕ್ಷರನ್ನು ಕೇಳಿಕೊಂಡರು. ಜನಸಮೂಹ ಮಮ್ದಾನಿಗಾಗಿ ಹುರಿದುಂಬಿಸುತ್ತಿದ್ದಂತೆಯೇ ಅವರು ಅಮೆರಿಕ ಅಧ್ಯಕ್ಷರಿಗೆ ಸವಾಲು ಹಾಕಿದರು ಮತ್ತು ನ್ಯೂಯಾರ್ಕ್ ನಿವಾಸಿಗಳು ಅವರ ವಿರುದ್ಧ ಒಗ್ಗಟ್ಟಾಗಿದ್ದಾರೆ ಎಂದು ಹೇಳಿದರು. ಪ್ರಚಾರದ ಸಮಯದಲ್ಲಿ ಯುಎಸ್ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಜೋಹಾನ್ ಮಮ್ದಾನಿಯ ವಿರುದ್ಧ ಕಠಿಣ ಭಾಷೆಯನ್ನು ಬಳಸಿದರು, ಅವರನ್ನು 'ಎಡಪಂಥೀಯ ಹುಚ್ಚ' ಎಂದು ಕರೆದಿದ್ದರು.

ಬಿಹಾರ ಡಿಸಿಎಂ ವಾಹನದ ಮೇಲೆ ಚಪ್ಪಲಿ, ಕಲ್ಲು ತೂರಾಟ



ಬಿಹಾರ: ಬಿಹಾರದ ಲಖಿಸರಾಯ್ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮತ್ತು ಡಿಸಿಎಂ ವಿಜಯ್ ಕುಮಾರ್ ಸಿನ್ಹಾ ಅವರ ಬೆಂಗಾವಲು ಪಡೆಯ ಮೇಲೆ ಕಲ್ಲು, ಮಣ್ಣು, ಸಗಣಿ ಮತ್ತು ಬೂಟುಗಳಿಂದ ದಾಳಿ ಮಾಡಲಾಗಿದೆ. ಮೊದಲ ಹಂತದ ಮತದಾನದ ಸಮಯದಲ್ಲಿ ಉಪಮುಖ್ಯಮಂತ್ರಿ ವಿಜಯ್‌ಸಿನ್ಹಾ ತಮ್ಮ ಕ್ಷೇತ್ರದ ಮತಗಟ್ಟೆಗಳನ್ನು ಪರಿಶೀಲಿಸಲು ಹೋಗುತ್ತಿದ್ದರು. ಅವರು ಜಿಲ್ಲೆಯ ರಾಮಗಢ ಚೌಕ್ ಪೊಲೀಸ್ ಠಾಣೆ ಪ್ರದೇಶದ ಖೋರಿಯಾರಿ ಪ್ರದೇಶದ ಮೂಲಕ ಹಾದುಹೋಗುತ್ತಿದ್ದರು. ಅಲ್ಲಿ ಮತಗಟ್ಟೆ ಸಂಖ್ಯೆ 404 ಮತ್ತು 405 ಇದೆ. ಇದ್ದಕ್ಕಿದ್ದಂತೆ, ಕೆಲವರು ಅವರ ಬೆಂಗಾವಲು ಪಡೆಯ ಮೇಲೆ ಕಲ್ಲು ತೂರಾಟ ನಡೆಸಲು ಪ್ರಾರಂಭಿಸಿದರು. ದಾಳಿಕೋರರು ಕಲ್ಲುಗಳನ್ನು ಮಾತ್ರವಲ್ಲದೆ ಮಣ್ಣು, ಹಸುವಿನ ಸಗಣಿ ಮತ್ತು ಬೂಟುಗಳನ್ನು ಸಹ ಎಸೆದರು. ಅವರು ಜೋರಾಗಿ ಘೋಷಣೆಗಳನ್ನು ಕೂಗಿದರು. ಸಿನ್ಹಾ ಪ್ರಕಾರ ಹಿಂದುಳಿದ ವರ್ಗಗಳ ಮತದಾರರನ್ನು ಬೆದರಿಸುತ್ತಿದ್ದ ರಾಷ್ಟ್ರೀಯ ಜನತಾ ದಳ (ಆರ್‌ಜೆಡಿ) ಬೆಂಬಲಿಗರು ಈ ದಾಳಿ ನಡೆಸಿದ್ದಾರೆ.

ಫಿಲಿಪೈನ್ಸ್‌ನಲ್ಲಿ ಕಲ್ಮಾಗಿ ಚಂಡಮಾರುತ ಅಬ್ಬರ; 144 ಬಲಿ



ಮನಿಲಾ: ಫಿಲಿಪೈನ್ಸ್ ದೇಶದಲ್ಲಿ ಕಲ್ಮಾಗಿ ಎಂಬ ಭೀಕರ ಚಂಡಮಾರುತ ಅಪ್ಪಳಿಸಿ ಕನಿಷ್ಠ 114 ಮಂದಿಯ ಬಲಿ ಪಡೆದಿದೆ. ಈ ದುರಂತದಲ್ಲಿ ನೂರಾರು ಮಂದಿ ನಾಪತ್ತೆಯಾಗಿದ್ದಾರೆ. ದೇಶದ ಕೇಂದ್ರ ಭಾಗದಲ್ಲಿ ಈ ಚಂಡಮಾರುತ ತೀವ್ರ ಹಾನಿ ಮಾಡಿದೆ. ಈ ಹಿನ್ನೆಲೆಯಲ್ಲಿ, ಫಿಲಿಪೈನ್ಸ್ ಅಧ್ಯಕ್ಷ ಫರ್ಡಿನಾಂಡ್ ಮಾರ್ಕೋಸ್ ಜೂನಿಯರ್ ದೇಶಾದ್ಯಂತ ತುರ್ತು ಪರಿಸ್ಥಿತಿ ಘೋಷಿಸಿದ್ದಾರೆ. ಈ ಕುರಿತು ಮಾಹಿತಿ ನೀಡಿರುವ ಫಿಲಿಫೈನ್ಸ್‌ನ ನಾಗರಿಕ ರಕ್ಷಣಾ ಕಚೇರಿ, ಕಲ್ಮಾಗಿ ಚಂಡಮಾರುತವು ಸೆಬು ಪ್ರಾಂತ್ಯದಲ್ಲಿ ಆಕಸ್ಮಿಕ ಪ್ರವಾಹ ಉಂಟುಮಾಡಿತು. ನದಿಗಳು, ಇತರ ಜಲಮಾರ್ಗಗಳು ಉಕ್ಕಿ ಹರಿದವು. ಇದರಿಂದಾಗಿ ವಸತಿ ಪ್ರದೇಶಗಳು ಜಲಾವೃತಗೊಂಡವು. ನಿವಾಸಿಗಳು ತಮ್ಮ ಛಾವಣಿಗಳ ಮೇಲೆ ಏರಿ, ಪ್ರವಾಹದ ನೀರಿನಿಂದ ಪಾರಾಗಲು ಸಹಾಯಕ್ಕಾಗಿ ಮೊರೆ ಇಡಬೇಕಾದ ಪರಿಸ್ಥಿತಿ ಎದುರಾಗಿದೆ. ಸುಮಾರು 20 ಲಕ್ಷ ಜನರು ತೊಂದರೆಗೀಡಾಗಿದ್ದಾರೆ. 5.60 ಲಕ್ಷಕ್ಕೂ ಹೆಚ್ಚು ಮಂದಿ ನಿರಾಶ್ರಿತರಾಗಿದ್ದಾರೆ. 4.50 ಲಕ್ಷ ಜನರನ್ನು ಸ್ಥಳಾಂತರಿಸಲಾಗಿದೆ ಎಂದು ತಿಳಿಸಿದೆ.

ಅರುಣಾಚಲ ಸೈನಿಕ್ ಶಾಲೆಯಲ್ಲಿ ಬಾಲಕ ಆತ್ಮಹತ್ಯೆ: ಹಿರಿಯ ವಿದ್ಯಾರ್ಥಿಗಳ ಚಿತ್ರಹಿಂಸೆ ಆರೋಪ



ಇಟಾನಗರ: ಅರುಣಾಚಲ ಪ್ರದೇಶದ ಪೂರ್ವ ಸಿಯಾಂಗ್ ಜಿಲ್ಲೆಯ ಸೈನಿಕ್ ಶಾಲೆಯ 7ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ 12 ವರ್ಷದ ವಿದ್ಯಾರ್ಥಿಯ ಆತ್ಮಹತ್ಯೆ ಬಗ್ಗೆ ಹೊಸ ಆರೋಪಗಳು ಕೇಳಿಬಂದಿವೆ. ಇನ್‌ಸ್ಟಾಗ್ರಾಮ್‌ನಲ್ಲಿ ಪೋಸ್ಟ್ ಮಾಡಿದ ವೀಡಿಯೊದಲ್ಲಿ, ಬಾಲಕನ ಸಹೋದರಿ, ಮಿಸ್ ಅರುಣಾಚಲ 2024, ತಡು ಲುನಿಯಾ, ತನ್ನ ಸಹೋದರ ಆತ್ಮಹತ್ಯೆಯಿಂದ ಸಾವನ್ನಪ್ಪಿದ್ದಾನೆ ಎಂದು ಕುಟುಂಬಕ್ಕೆ ತಿಳಿಸಲಾಗಿದೆ ಎಂದು ಹೇಳಿಕೊಂಡಿದ್ದಾರೆ. ವಸತಿ ನಿಲಯದ ಸಹಪಾಠಿಗಳ ಕಿರುಕುಳದಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಆರೋಪಿಸಲಾಗಿದೆ. ಲೂನಿಯಾ ಪ್ರಕಾರ ಹಿರಿಯ ವಿದ್ಯಾರ್ಥಿಗಳು ಕಿರಿಯ ವಿದ್ಯಾರ್ಥಿಗಳು ಸೇರಿ ತನ್ನ ಸಹೋದರನನ್ನು ಒಂಟಿಯಾಗಿ 10 ನೇ ತರಗತಿಯ ವಿದ್ಯಾರ್ಥಿನಿಲಯಕ್ಕೆ ಕರೆದೊಯ್ದಿದ್ದಾರೆ. ಮುಚ್ಚಿದ ಬಾಗಿಲಿನ ಹಿಂದೆ ಏನಾಯಿತು ಎಂದು ಯಾರಿಗೂ ತಿಳಿದಿಲ್ಲ ಎಂದಿದ್ದಾರೆ.

ಗುರು ನಾನಕ್ ಜನ್ಮಸ್ಥಳ; ಹಿಂದುಗಳ ಪ್ರವೇಶಕ್ಕೆ ಪಾಕ್ ನಕಾರ



ಲಾಹೋರ್: ಸಿಖ್ ಧರ್ಮಗುರು ಗುರುನಾನಕ್‌ರ ಜಯಂತಿ ಪ್ರಯುಕ್ತ ಪಾಕಿಸ್ತಾನದಲ್ಲಿರುವ ಅವರ ಜನ್ಮಸ್ಥಳ ನನಕಾನಾ ಸಾಹಿಬ್‌ಗೆ ತೆರಳಿದ್ದ ಹಿಂದೂಗಳಿಗೆ ಪ್ರವೇಶ ನಿರಾಕರಿಸಿ, ಕೇವಲ ಸಿಖ್ಖರನ್ನು ಒಳಗೆ ಕರೆದುಕೊಂಡು ಪಾಕಿಸ್ತಾನಿ ಅಧಿಕಾರಿಗಳು ಉದ್ಧಟತನ ತೋರಿದ ಘಟನೆ ನಡೆದಿದೆ. ಪಾಕ್‌ನ ಈ ನಡೆ ವಿರುದ್ಧ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ. ಆಪರೇಷನ್ ಸಿಂದೂರದ ಬಳಿಕ ಇದೇ ಮೊದಲ ಬಾರಿಗೆ ಗುರುನಾನಕರ 556ನೇ ಜಯಂತಿ ಪ್ರಯುಕ್ತ ಭಾರತೀಯ ಭಕ್ತರು ಪಾಕ್‌ನಲ್ಲಿರುವ ಅವರ ಜನ್ಮಸ್ಥಳಕ್ಕೆ ಯಾತ್ರೆ ಹೋಗಿದ್ದರು. ಪಾಕಿಸ್ತಾನದ ಹೈಕಮಿಷನ್ 10 ದಿನದ ಈ ಯಾತ್ರೆಗಾಗಿ 2,100 ಯಾತ್ರಿಕರಿಗೆ ವೀಸಾ ನೀಡಿತ್ತು. ಭಕ್ತರು ವಾಘಾ ಗಡಿ ಮೂಲಕ ಪಾಕಿಸ್ತಾನ ಪ್ರವೇಶಿಸಿದ್ದಾರೆ. ಈ ವೇಳೆ 1,796 ಮಂದಿ ಸಿಖ್ಖರಿಗೆ ಮಾತ್ರ ಪ್ರವೇಶ ನೀಡಿ, ಉಳಿದ ಹಿಂದೂಗಳನ್ನು ಭಾರತಕ್ಕೆ ವಾಪಸ್ ಕಳಿಸಿದ್ದಾರೆ.

ಮೈಸೂರು ಮಿತ್ರ ಶುಕ್ರವಾರ 7 ನವೆಂಬರ್ 2025

ಬಾಳುಗೋಡಲ್ಲಿ ಕೊಡವ ನಮ್ಮೆಗೆ ಚಾಲನೆ

ವಿರಾಜಪೇಟೆ, ನ.6– ಕೊಡವರು ತಮ್ಮ ಸಂಸ್ಕೃತಿ ಮತ್ತು ಪಾರಂಪರಿಕತೆಯನ್ನು ಇಂದಿಗೂ ಕಾಪಾಡಿಕೊಂಡು ಬರುತ್ತಿರುವುದು ಸಂತಸ, ಅಭಿನಂದನಾರ್ಹ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ಬಾಳುಗೋಡುವಿನ ಕೊಡವ ಸಮಾಜ ಒಕ್ಕೂಟದ ವತಿಯಿಂದ ನಡೆದ ಕೊಡವ ನಮ್ಮೆಯನ್ನು, ತೆಂಗಿನ ಕಾಯಿಗೆ ಗುಂಡು ಹೊಡೆದು ಉದ್ಘಾಟಿಸಿ ಮಾತನಾಡಿದ ಅವರು, ಸಂಸ್ಕೃತಿ ಒಗ್ಗಟ್ಟು ಸೃಷ್ಟಿಸುವಲ್ಲಿ ಸಂಘ ಸಂಸ್ಥೆಗಳ ಕಾರ್ಯ ಶ್ಲಾಘನಿಯ ಎಂದರು. ತಮ್ಮ ಐದು ಕೋಟಿ ಅನುದಾನವನ್ನು ಕ್ಷೇತ್ರ ದೊಡ್ಡದಿರುವ ಕಾರಣ ಹಂಚಿಕೆ ಕಷ್ಟಸಾಧ್ಯವಿದ್ದರೂ ಕೊಡವ ಸಮಾಜ ಬೇಡಿಕೆ ಮುಂದಿಟ್ಟರೆ ಬೇರೆ ಮೂಲಗಳಿಂದ ಅನುದಾನ ಒದಗಿಸಲು ಪ್ರಯತ್ನಿಸುವುದಾಗಿ ಹೇಳಿದರು.



ತೆಂಗಿನ ಕಾಯಿಗೆ ಗುಂಡು ಹೊಡೆಯುವ ಮೂಲಕ ಕೊಡವ ನಮ್ಮೆಯನ್ನು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟಿಸಿದರು.

ಕೊಡಗಿನಲ್ಲಿ ದೂರ ಸಂಪರ್ಕ ವ್ಯವಸ್ಥೆ ಸರಿಪಡಿಸಲು ಹಾಗೂ ಬಿಎಸ್‌ಎನ್‌ಎಲ್‌ನಲ್ಲಿ 5 ಜಿ ಅಳವಡಿಸಲು ಎಲ್ಲಾ ರೀತಿಯ ಪ್ರಯತ್ನ ನಡೆಸುತ್ತಿರುವುದಾಗಿಯೂ ಕೆಲವು ಕಡೆ ನೂತನ ಟವರ್ ಅಳವಡಿಕೆಗೆ ಭೂಸ್ವಾಧೀನ ಪ್ರಗತಿಯಲ್ಲಿದೆ ಎಂದರು.

ಶ್ರೀರಂಗಪಟ್ಟಣ–ಕುಶಾಲನಗರ ಹೆದ್ದಾರಿ ಅಭಿವೃದ್ದಿಗೆ ಕೆಲವು ಕಡೆ ಅರಣ್ಯ ಇಲಾಖೆ ಅಡ್ಡಿ ಇತ್ತು ಈಗ ಅದಕ್ಕೆ ಶೀಘ್ರದಲ್ಲಿ ಅನುಮತಿ ದೊರೆಯಲಿದೆ. ಆದ್ದರಿಂದ ಶ್ರೀರಂಗಪಟ್ಟಣ–ಹುಣಸೂರು, ಪಿರಿಯಾಪಟ್ಟಣ–ಕುಶಾಲನಗರದವರಗೆ ಹೆದ್ದಾರಿ ಕಾಮಗಾರಿ ಶೀಘ್ರ ನಡೆಯುವ ಭರವಸೆ ಇದೆ ಎಂದು ಯದುವೀರ್ ಹೇಳಿದರು.

ವಿರಾಜಪೇಟೆ ಮತ್ತು ಹುದಿಕೇರಿ ಕೊಡವ ಸಮಾಜಗಳ ನಡುವಿನ ಪಂದ್ಯಕ್ಕೆ ಶಾಸಕ ಎ.ಎಸ್.ಪೊನ್ನಣ್ಣ ಚಾಲನೆ ನೀಡಿ ಶುಭ ಕೋರಿದರು.

ಈ ಸಂದರ್ಭ ರಾಜ್ಯ ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷ ಅರುಣ್ ಮಾಚಯ್ಯ, ಕೊಡವ ಸಮಾಜಗಳ ಒಕ್ಕೂಟದ ಅಧ್ಯಕ್ಷ ಕಳ್ಳಿಚಂಡ ವಿಷ್ಣು ಕಾರ್ಯಪ್ಪ, ಕಾರ್ಯದರ್ಶಿ ವಾಟೇರಿರ ಪೂವಯ್ಯ, ಕೊಡವ ಸಮಾಜ ಒಕ್ಕೂಟದ ಮಾಜಿ ಅಧ್ಯಕ್ಷ ಮಲ್ಲೇಂಗಡ ದಾದ ಬೆಳ್ಯಪ್ಪ ವಿರಾಜಪೇಟೆ ಕೊಡವ ಸಮಾಜದ ಅಧ್ಯಕ್ಷ ಅಮ್ಮಣಿಚಂಡ ರವಿ ಉತ್ತಪ್ಪ, ಉಪಾಧ್ಯಕ್ಷ ಕಾಣತಂಡ ಜಗದೀಶ್, ಕೊಡಗು ಹಾಕಿ ಸಂಸ್ಥೆಯ ಅಧ್ಯಕ್ಷ ಪಳಂಗಂಡ ಲವಕುಮಾರ್, ಒಲಂಪಿಯನ್ ಚೆಪ್ಪುಡಿರ ಪೂಣಚ್ಚ, ಕ್ರೀಡಾ ಸಮಿತಿ ಅಧ್ಯಕ್ಷ ತಂಬುಕುತ್ತಿರ ಮದು ಮಂದಣ್ಣ, ಕೊಡವ ಸಮಾಜ ಒಕ್ಕೂಟದ ಪೊಮ್ಮಕ್ಕಡ ಕೂಟದ ಅಧ್ಯಕ್ಷೆ ಕಿಕ್ಕೇರಿಯಂಡ ಲೀಲಾ ಅಯ್ಯಪ್ಪ ಮತ್ತಿತರರು ಉಪಸ್ಥಿತರಿದ್ದರು.

ರಾಷ್ಟ್ರೀಯ ಜನಗಣತಿಯಲ್ಲಿ ಕೊಡವ ಎಂದು ಗುರುತಿಸಿಕೊಂಡಾಗ ಮಾತ್ರ ಹಕ್ಕುಗಳ ಪಡೆಯಲು ಸಾಧ್ಯ

ಸಿಎನ್‌ಸಿ ಅಧ್ಯಕ್ಷ ಎನ್.ಯು. ನಾಚಪ್ಪ ಪ್ರತಿಪಾದನೆ

ಮಡಿಕೇರಿ,ನ.6– ಕೊಡವರು 2026–27ರಲ್ಲಿ ನಡೆಯಲಿರುವ 16ನೇ ರಾಷ್ಟ್ರೀಯ ಜನಗಣತಿ ಸಂದರ್ಭ ಪ್ರತ್ಯೇಕವಾಗಿ 'ಕೊಡವ' ಎಂದು ಹೆಮ್ಮೆಯಿಂದ ಗುರುತಿಸಿಕೊಂಡಾಗ ಮಾತ್ರ ಸಂವಿಧಾನಬದ್ಧ ಹಕ್ಕನ್ನು ಪಡೆಯಲು ಸಾಧ್ಯವಾಗುತ್ತದೆ ಎಂದು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆಯ ಅಧ್ಯಕ್ಷ ಎನ್.ಯು.ನಾಚಪ್ಪ ಪ್ರತಿಪಾದಿಸಿದ್ದಾರೆ.



18ನೇ ಜನಜಾಗೃತಿ ಮಾನವ ಸರಪಳಿ ಕಾರ್ಯಕ್ರಮದಲ್ಲಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆಯ ಅಧ್ಯಕ್ಷ ಎನ್.ಯು.ನಾಚಪ್ಪ ಮಾತನಾಡಿದರು.

ಸಿಎನ್‌ಸಿ ವತಿಯಿಂದ ಬಿಟ್ಟಂಗಾಲದಲ್ಲಿ ನಡೆದ 18ನೇ ಜನಜಾಗೃತಿ ಮಾನವ ಸರಪಳಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು 16ನೇ ರಾಷ್ಟ್ರೀಯ ಜನಗಣತಿಯೊಂದಿಗೆ ಜನಾಂಗವಾರು ಮಾಹಿತಿ ಕಲೆ ಹಾಕುವ ಸಂದರ್ಭ ಕೊಡವರಿಗಾಗಿ ಪ್ರತ್ಯೇಕ ಕೋಡ್ ಮತ್ತು ಕಾಲಂ ಅನ್ನು ಅಳವಡಿಸಬೇಕು. ಮುಂದೆ ಜನಪ್ರತಿನಿಧಿ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ಕ್ಷೇತ್ರ ಪುನರ್ ವಿಂಗಡಣೆಗೆ ಮಾನದಂಡವಾಗಲಿರುವ ಈ ಜನಗಣತಿ ಕೊಡವರ ರಾಜಕೀಯ ಸಬಲೀಕರಣ, ಸ್ವಯಂ ನಿರ್ಧಾರದ ಹಕ್ಕು ಸ್ಥಾಪಿಸಲು ಮೆಟ್ಟಿಲಾಗಲಿದೆ. ಅಲ್ಲದೆ ಕೊಡವರ ಧಾರ್ಮಿಕ ಸಂಸ್ಕಾರ ತೋಕ್–ಗನ್ ಹಕ್ಕು ಚಿರಸ್ಥಾಯಿಯಾಗಿ ಮುಂದುವರಿಯಲು ಪೂರಕವಾಗಲಿದೆ ಎಂದು ತಿಳಿಸಿದರು.

ಬಾಂಗ್ಲಾದೇಶಿ ರೋಹಿಂಗ್ಯಗಳಿಗೆ ನೆಲೆ ಕಲ್ಪಿಸಲು ಅವರನ್ನು ಮತದಾರರ ಪಟ್ಟಿಯಲ್ಲಿ ಸೇರಿಸಿ ಜನಗಣತಿ ಸಂದರ್ಭ ಮತ ಬ್ಯಾಂಕ್ ವೃದ್ಧಿ ಮಾಡಿಕೊಳ್ಳುವ ಮತ್ತು ದುಪ್ಪಟ್ಟು ಮತದಾರರ ಆಧಾರದಲ್ಲಿ ಲೋಕಸಭಾ ಸ್ಥಾನಬೇಕೆಂದು ಎರಡು ರಾಷ್ಟ್ರೀಯ ರಾಜಕೀಯ ಪಕ್ಷಗಳು ಮತಭಿಕ್ಷೆ ಕಾರ್ಯದಲ್ಲಿ ತೊಡಗಿಸಿಕೊಳ್ಳುವ ಸಾಧ್ಯತೆ ಇದೆ. ಇದಕ್ಕಾಗಿ ಕೊಡವರ ಭೂಮಿಗಳನ್ನು ಬಲವಂತವಾಗಿ ತೆರವುಗೊಳಿಸಿ, ಅಲ್ಲಿ ಇವರಿಗೆಲ್ಲ ಭೂಮಿ, ವಸತಿ ನಿರ್ಮಿಸುವ ಒಳಸಂಚು ನಡೆಲಾಗುತ್ತಿದೆ. ಇದನ್ನು ವಿರೋಧಿಸಿದರೆ ಕೊಡಗಿನಲ್ಲಿ ಕಾರ್ಮಿಕರ ಕೊರತೆಯ ನೆಪವೊಡ್ಡಲಾಗುತ್ತಿದೆ. ಮುಂದೆ ಅಕ್ರಮ ವಲಸಿಗರಿಂದ ಕಾನೂನು ಉಲ್ಲಂಘನೆಯಾದರೆ ಸ್ಥಳೀಯರಿಗೆ ರಕ್ಷಣೆ ಇಲ್ಲದಾಗುತ್ತದೆ ಎಂದು ಎನ್.ಯು.ನಾಚಪ್ಪ ಕಳವಳ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಮಾಚೆಟ್ಟಿರ ಪಟ್ಟು, ಕಾಳೇಂಗಡ ರಮೇಶ್ ಕಾರ್ಯಪ್ಪ ಕುಪ್ಪಂಡ ಗೋಪಾಲ್, ತೀತಿಮಾಡ ಸುಜಿ ದೇವಯ್ಯ, ಚೇಂದ್ರಿಮಾಡ ಪೂಣಚ್ಚ, ಕಳ್ಳಿರ ಉತ್ಸವ್ ನಾಚಪ್ಪ, ಚಂಬಂಡ ಜಾಗೃತ್ ಬಿದ್ದಪ್ಪ, ತೆಕ್ಕೇರ ಜೀವನ್ ನಾಣಯ್ಯ, ಪೊನ್ನಕಚ್ಚಿರ ಚರ್ಮಣ, ಮಾಚೆಟ್ಟಿರ ಚಂದ್ರು, ಬೊಪ್ಪಂಡ ಅಶೋಕ್, ಕುಂಜಿತಂಡ ದಿಲನ್, ಪುಚ್ಚಿಮಂಡ ದೇವಯ್ಯ, ಚೊಟ್ಟೆಮಾಡ ಮುತ್ತಪ್ಪ, ತಿತಿಮಾಡ ಶಾನ್ ಬಿದ್ದಪ, ಕಳಕಂಡ ಚೇತನ್, ಅಜ್ಜಿನಿಕಂಡ ನವೀನ್, ಪಾಲೇಕಂಡ ಮುತ್ತಣ್ಣ, ಕಾಂಡೇರ ಸುರೇಶ್, ಅರೆಯಡ ಗಿರೀಶ್ ಹಾಗೂ ಚಂಬಂಡ ಜನತ್ ಪಾಲ್ಗೊಂಡು ಸಂವಿಧಾನಬದ್ಧವಾದ ಸಿಎನ್‌ಸಿ ಹೋರಾಟಕ್ಕೆ ಬೆಂಬಲ ಸೂಚಿಸಿ ಪ್ರತಿಜ್ಞಾವಿಧಿ ಸ್ವೀಕರಿಸಿದರು.

ಸುಬೇದಾರ್ ಗುಡ್ಡೆಮನೆ ಅಪ್ಪಯ್ಯಗೌಡರ ಬಗ್ಗೆ ಅವಹೇಳನಕಾರಿ ಸಂದೇಶ ಹಾಕಿದವನ ವಿರುದ್ಧ ಕ್ರಮಕ್ಕೆ ಆಗ್ರಹ



ಸುಬೇದಾರ್ ಗುಡ್ಡೆಮನೆ ಅಪ್ಪಯ್ಯಗೌಡರ ಬಗ್ಗೆ ಜಾಲತಾಣದಲ್ಲಿ ಅವಹೇಳನಕಾರಿ ಸಂದೇಶ ರವಾನಿಸಿರುವ ವ್ಯಕ್ತಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಕೊಡಗು ಗೌಡ ಪದಾಧಿಕಾರಿಗಳು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ದೂರು ನೀಡಿದ್ದಾರೆ.

ಮಡಿಕೇರಿ, ನ.6– ಸ್ವಾತಂತ್ರ್ಯ ಹೋರಾಟಗಾರ, ಹುತಾತ್ಮ ಸುಬೇದಾರ್ ಗುಡ್ಡೆಮನೆ ಅಪ್ಪಯ್ಯಗೌಡರ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿಯಾಗಿ ಸಂದೇಶಗಳನ್ನು ರವಾನಿಸಿರುವ ವ್ಯಕ್ತಿ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಕೊಡಗು ಗೌಡ ಸಮಾಜಗಳ ಒಕ್ಕೂಟ ದೂರು ದಾಖಲಿಸಿದೆ.

ಅ.31ರಂದು ಅಪ್ಪಯ್ಯಗೌಡರ ಸಂಸ್ಮರಣಾ ದಿನಾಚರಣೆ ಅಂಗವಾಗಿ ನಡೆದ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಫೇಸ್ ಬುಕ್ ಖಾತೆಯಲ್ಲಿ 'ಸ್ವಾತಂತ್ರ್ಯ ಹೋರಾಟಗಾರ ಸುಬೇದಾರ್ ಗುಡ್ಡೆಮನೆ ಅಪ್ಪಯ್ಯಗೌಡರನ್ನು ಸ್ಮರಿಸುವ' ಎಂಬ ಪೋಸ್ಟ್‌ನಲ್ಲಿ ಹಲವರಿಂದ ಪರ–ವಿರೋಧ ಚರ್ಚೆ ನಡೆದಿದೆ. ಈ ಪೋಸ್ಟ್‌ನಲ್ಲಿ ಅರೆಯಡ ರಾಜ ಎಂಬ ವ್ಯಕ್ತಿ ಕೊಡಗಿನ ಇತಿಹಾಸವನ್ನು ತಿರುಚಿ ಹಾಲೇರಿ ರಾಜ ವಂಶಸ್ಥರನ್ನು ಹೀನಾಯವಾಗಿ ನಿಂದಿಸಿ, ಅಪ್ಪಯ್ಯಗೌಡರ ವಿರುದ್ಧ ಅವಹೇಳನಕಾರಿಯಾಗಿ ಸಂದೇಶಗಳನ್ನು ಹಾಕಿದ್ದಲ್ಲದೆ, ಗೌಡ ಜನಾಂಗದವರನ್ನು ನಿಂದಿಸಿದ್ದಾರೆ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ಆರೋಪಿಸಲಾಗಿದೆ. ಈ ರೀತಿಯ ಅವಹೇಳನಕಾರಿ ಸಂದೇಶಗಳನ್ನು ಹರಿಯಬಿಟ್ಟಿರುವ ರಾಜ ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಒಕ್ಕೂಟದ ಅಧ್ಯಕ್ಷ ಆನಂದ ಕರಂದ್ಲಾಜೆ ಹಾಗೂ ಪದಾಧಿಕಾರಿಗಳು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ದೂರು ನೀಡಿದ್ದಾರೆ.

ಈ ಸಂದರ್ಭ ಗೌಡ ಸಮಾಜಗಳ ಒಕ್ಕೂಟದ ಕಾರ್ಯದರ್ಶಿ ಪೇರಿಯನ ಉದಯ ಕುಮಾರ್, ಖಜಾಂಚಿ ನವೀನ್ ಅಂಬೆಕಲ್, ಕಾನೂನು ಸಲಹೊರ ಕೊಂಬಾರನ ರೋಷನ್ ಹಾಗೂ ಕೊಡಗು ಗೌಡ ಯುವ ವೇದಿಕೆ ಕಾರ್ಯದರ್ಶಿ ಪುದಿಯನೆರವನ ರಿಷಿತ್ ಹಾಜರಿದ್ದರು.

ವಿ.ಪೇಟೆಯಲ್ಲಿ ಮನೆ ಮುಂದೆ ವಾಮಾಚಾರ



ಮಡಿಕೇರಿ: ಮನೆಯೊಂದರ ಬಾಗಿಲ ಬಳಿ ದುಷ್ಕರ್ಮಿಗಳು ವಾಮಾಚಾರ ಮಾಡಿರುವ ವಿಲಕ್ಷಣ ಘಟನೆ ವಿರಾಜಪೇಟೆಯಲ್ಲಿ ನಡೆದಿದೆ. ವಿರಾಜಪೇಟೆ ಪಟ್ಟಣದ ವಾರ್ಡ್ ಸಂಖ್ಯೆ 5ರ ಮೊಗರಗಲ್ಲಿಯಲ್ಲಿ ವಾಸವಿರುವ ಮಹಮ್ಮದ್ ಅಕ್ಬರ್ ಎಂಬುವರ ಮನೆಯ ಹೊಸ್ತಿಲಲ್ಲೇ ದುಷ್ಕರ್ಮಿಗಳು ವಾಮಾಚಾರ ನಡೆಸಿದ್ದಾರೆ.

ಮಹಮ್ಮದ್ ಅಕ್ಬರ್ ಅವರು ಬೆಳಗ್ಗೆ ಪ್ರಾರ್ಥನೆಗೆಂದು ಮಸೀದಿಗೆ ತೆರಳಿ, ಪ್ರಾರ್ಥನೆ ಮುಗಿಸಿ, ಬೆಳಗ್ಗೆ 6 ಗಂಟೆಗೆ ಮನೆಯೊಳಗೆ ತೆರಳಿದ್ದಾರೆ. ಈ ಸಂದರ್ಭ ಮನೆಯ ಎದುರು ಯಾವುದೇ ವಸ್ತು ಕಂಡು ಬಂದಿರಲಿಲ್ಲ. ಬಳಿಕ ಅವರ ಪುತ್ರ ಮನೆಯ ಬಾಗಿಲು ತೆರೆದ ಸಂದರ್ಭ ವಾಮಾಚಾರ ಮಾಡಿರುವುದು ಬೆಳಕಿಗೆ ಬಂದಿದೆ. ಇದರಿಂದ ಭಯಭೀತರಾದ ಮನೆಯ ಮಾಲೀಕರು ತಕ್ಷಣ ಪೊಲೀಸರಿಗೆ ಕರೆ ಮಾಡಿ ವಿಷಯ ತಿಳಿಸಿದ್ದು, ಸ್ಥಳಕ್ಕೆ ಆಗಮಿಸಿದ ಪೊಲೀಸರು ಮನೆಯವರಿಗೆ ಧೈರ್ಯ ತುಂಬಿದ್ದಾರೆ ವಾಮಾಚಾರ ಪ್ರಯೋಗ ಮಾಡಿರುವ ದುಷ್ಕರ್ಮಿಗಳ ಈ ಕೃತ್ಯದಿಂದ ಮನೆ ಮಂದಿ ಆತಂಕಗೊಂಡಿದ್ದಾರೆ.

ಪೊನ್ನಣ್ಣರಿಂದ ಬಸ್ ನಿಲ್ದಾಣ ಕಾಮಗಾರಿ ಪರಿಶೀಲನೆ

ಗೋಣಿಕೊಪ್ಪ ನ6– ಇಲ್ಲಿನ ಬಸ್ ನಿಲ್ದಾಣ ಮುಕ್ತಾಯ ಹಂತದಲ್ಲಿರುವ ಕಾಮಗಾರಿಯನ್ನು ಪರಿಶೀಲಿಸಿ ಶೀಘ್ರ ಮತ್ತು ಅಚ್ಚುಕಟ್ಟಾಗಿ ಕಾಮಗಾರಿ ಮುಗಿಸಲು ಶಾಸಕ ಎ.ಎಸ್ ಪೊನ್ನಣ್ಣ ಸೂಚನೆ ನೀಡಿದರು.

ಈಗಾಗಲೇ ಮುಕ್ತಾಯ ಹಂತಕ್ಕೆ ಬಂದಿರುವ ಈ ಕಾಮಗಾರಿಯ ಅಂತಿಮ ಕೆಲಸ ಕಾರ್ಯಗಳ ಬಗ್ಗೆ ವರದಿ ಪಡೆದ ಶಾಸಕರು, ಇನ್ನು ಕೆಲವೇ ದಿನದಲ್ಲಿ ಈ ಬಸ್ ನಿಲ್ದಾಣವನ್ನು ಲೋಕಾರ್ಪಣೆಗೊಳಿಸಬೇಕಾಗಿರುವುದರಿಂದ ಕಾಮಗಾರಿಗಳನ್ನು ಶೀಘ್ರವಾಗಿ ಹಾಗೂ ಅಚ್ಚುಕಟ್ಟಾಗಿ ನಿರ್ವಹಿಸುವಂತೆ ಗುತ್ತಿಗೆದಾರರಿಗೆ ತಿಳಿಸಿದರು.

ಗೋಣಿಕೊಪ್ಪ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರಿಗೆ ಅನುಕೂಲವಾಗುವ ಎಲ್ಲಾ ವ್ಯವಸ್ಥೆಗಳ ಬಗ್ಗೆ ಪರಿಶೀಲಿಸಿದ ಶಾಸಕರು, ಕೆಲವು ಸಣ್ಣಪುಟ್ಟ ಮಾರ್ಪಾಡುಗಳನ್ನು ಗುತ್ತಿಗೆದಾರರಿಗೆ ನಿರ್ವಹಿಸಲು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷ ತೀತಿರ ಧರ್ಮಜ ಉತ್ತಪ್ಪ, ಪಪಂ ಅಧ್ಯಕ್ಷ ಕುಲ್ಲಚಂಡ ಪ್ರಮೋದ್ ಗಣಪತಿ, ಪಿಡಿಓ ತಿಮ್ಮಯ್ಯ, ನಾಯಂದಿರ ಶಿವಾಜಿ, ಕಂದ ದೇವಯ್ಯ, ಮುಕಟೀರ ಸಂದೀಪ್, ಹಾಗೂ ಪ್ರಮುಖರು ಉಪಸ್ಥಿತರಿದ್ದರು.



ಗೋಣಿಕೊಪ್ಪ ಬಸ್ ನಿಲ್ದಾಣದ ಕಾಮಗಾರಿಯನ್ನು ಶಾಸಕ ಪೊನ್ನಣ್ಣ ಪರಿಶೀಲಿಸಿದರು.

ಮುಕ್ಕಾಟಿ ಸುರೇಶ್ ನಿಧನ



ನಾಪೋಕ್ಲು: ಇಲ್ಲಿಗೆ ಸಮೀಪದ ಬೇತು ಗ್ರಾಮದ ನಿವಾಸಿ ದಿವಂಗತ ಮುಕ್ಕಾಟಿ ಗಣಪತಿ ಅವರ ಪುತ್ರ ಮುಕ್ಕಾಟಿ ಸುರೇಶ್ (64) ಅವರು ಗುರುವಾರ ನಿಧನರಾದರು. ಮೃತರ ಅಂತ್ಯಕ್ರಿಯೆ ಬೇತು ಗ್ರಾಮದ ಮುಕ್ಕಾಟಿ ಕುಟುಂಬದ ರುದ್ರ ಭೂಮಿಯಲ್ಲಿ ಗುರುವಾರ ನೆರವೇರಿಸಲಾಯಿತು. ಮೃತರು ಪತ್ನಿ ಭಾನುಮತಿ ಹಾಗೂ ಬಂಧು ಬಾಂಧವರನ್ನು ಅಗಲಿದ್ದಾರೆ.

ಇಂದು ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಉಪನ್ಯಾಸಕರ ಪ್ರತಿಭಟನೆ

ಕುಶಾಲನಗರ: ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಹಾಗೂ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಂಸ್ಥೆ ಹೊರಡಿಸಿರುವ ಜಂಟಿ ಸುತ್ತೋಲೆಯನ್ನು ಹಿಂಪಡೆಯುವಂತೆ ಹಾಗೂ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ನ.7 ರಂದು ಜಿಲ್ಲಾಧಿಕಾರಿ ಕಚೇರಿ ಮುಂದೆ ಕೊಡಗು ಜಿಲ್ಲಾ ಶಾಲಾ ಶಿಕ್ಷಣ (ಪದವಿ ಪೂರ್ವ) ಕಾಲೇಜುಗಳ ಪ್ರಾಚಾರ್ಯರ ಮತ್ತು ಉಪನ್ಯಾಸಕರ ಸಂಘದ ವತಿಯಿಂದ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.

ಶುಕ್ರವಾರ ಸಂಜೆ 4 ಗಂಟೆಗೆ ಮಡಿಕೇರಿ ಗಾಂಧಿ ಮೈದಾನದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಶಾಂತಿಯುತ ಮೆರವಣಿಗೆ ನಡೆಸಲಿದ್ದು, ನಂತರ ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿ ಹಾಗೂ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರಿಗೆ ಮನವಿ ಸಲ್ಲಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದ್ದಾರೆ.

ಚಾಮರಾಜನಗರದಲ್ಲಿ ಮೈಕ್ರೋ ಬಿಸಿನೆಸ್ ಎಕ್ಸಲೆನ್ಸ್ ಓರಿಯೆಂಟೇಷನ್‌ಗೆ ಚಾಲನೆ

ಸಿಐಐ-ಸಿಇಎಲ್ ಜೊತೆ 360 ಉದ್ಯಮ ಅಭಿವೃದ್ಧಿ ಯೋಜನೆಗೆ ಸಂಬಂಧಿಸಿದ ಒಪ್ಪಂದಕ್ಕೆ ಜಿಲ್ಲಾಡಳಿತ ಸಹಿ



ಬಿಸಿನೆಸ್ 360 ಉದ್ಯಮಿ ಅಭಿವೃದ್ಧಿ ಯೋಜನೆಗೆ ಸಂಬಂಧಿಸಿದಂತೆ ಸಿಐಐ–ಸಿಇಎಲ್ ಜೊತೆಗಿನ ಜಿಲ್ಲಾಡಳಿತ ಒಪ್ಪಂದ ಪತ್ರವನ್ನು ಡಿಸಿ ಶಿಲ್ಪಾನಾಗ್ ವಿನಿಮಯ ಮಾಡಿಕೊಂಡರು.

ಚಾಮರಾಜನಗರ, ನ6– ಜಿಲ್ಲೆಯ ಆಸಕ್ತ ಮೈಕ್ರೋ ಉದ್ಯಮಿಗಳಿಗೆ ಉದ್ಯಮಾಭಿವೃದ್ಧಿ, ಮಾರುಕಟ್ಟೆ ಸಂಶೋಧನೆ, ಉದ್ದಿಮೆ ನೋಂದಣಿ, ಉದ್ಯಮ ವಿಸ್ತರಣೆ, ಮುಂದಿನ ಪೀಳಿಗೆಗೆ ಉದ್ಯಮಿಗಳ ತಯಾರಿ ಹಾಗೂ ಇತರೆ ಹಲವು ಕ್ಷೇತ್ರಗಳಲ್ಲಿ ಸಾಮರ್ಥ್ಯ ನಿರ್ಮಾಣ ಮಾಡುವ ಗುರಿಯೊಂದಿಗೆ ಜಿಲ್ಲಾಡಳಿತ ಹಮ್ಮಿಕೊಂಡಿರುವ ಮಹತ್ತರ ಯೋಜನೆಯ ಮೊದಲ ಹಂತವಾಗಿ ಮೈಕ್ರೋ ಬಿಸಿನೆಸ್ ಎಕ್ಸಲೆನ್ಸ್ ಓರಿಯೆಂಟೇಷನ್ ಕಾರ್ಯಕ್ರಮಕ್ಕೆ ಚಾಲನೆ ದೊರೆತಿದೆ.

ನಗರದ ಜಿಲ್ಲಾ ಪಂಚಾಯತ್ ಕೆಡಿಪಿ ಸಭಾಂಗಣದಲ್ಲಿ ಬುಧವಾರ ಜಿಲ್ಲಾಡಳಿತ ಮತ್ತು ಸಿ.ಐ.ಐ (ಕಾನ್ಫೆಡರೇಶನ್ ಆಫ್ ಇಂಡಿಯನ್ ಇಂಡಸ್ಟ್ರಿ) ಸೆಂಟರ್ ಆಫ್ ಎಕ್ಸಲೆನ್ಸ್ ಆನ್ ಎಂಪ್ಲಾಯ್‌ಮೆಂಟ್ ಮತ್ತು ಲೈವ್‌ಲಿಹುಡ್ (ಸಿ.ಇ.ಎಲ್) ಸಂಯುಕ್ತಾಶ್ರಯದಲ್ಲಿ ಮೈಕ್ರೋ ಬಿಸಿನೆಸ್ ಎಕ್ಸಲೆನ್ಸ್ ಓರಿಯೆಂಟೇಷನ್ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಸಣ್ಣ ಉದ್ದಿಮೆದಾರರಿಗೆ ನೆರವಾಗುವ ನಿಟ್ಟಿನಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ 200ಕ್ಕೂ ಹೆಚ್ಚು ಉದ್ಯಮಿಗಳು ಮತ್ತು ಉದ್ಯಮ ಆಸಕ್ತರು ಭಾಗವಹಿಸಿದ್ದರು. ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಜಿಲ್ಲಾಧಿಕಾರಿ ಶಿಲ್ಪಾನಾಗ್, ಜಿಲ್ಲೆಯು ನೈಸರ್ಗಿಕ ಸಂಪತ್ತು ಅಗತ್ಯ ಮಾನವ ಸಂಪನ್ಮೂಲ ಸಾಮರ್ಥ್ಯವನ್ನು ಹೊಂದಿದೆ. ಆರೋಗ್ಯ, ಪೌಷ್ಠಿಕತೆ, ಶಿಕ್ಷಣ ಮತ್ತು ಆರ್ಥಿಕತೆಯನ್ನು ಕೇಂದ್ರವಾಗಿಸಿಕೊಂಡು ಚಾಮರಾಜನಗರವನ್ನು ಅಭಿವೃದ್ಧಿ ಜಿಲ್ಲೆಯನ್ನಾಗಿ ರೂಪಿಸುವ ಗುರಿ ಜಿಲ್ಲಾಡಳಿತದ್ದಾಗಿದೆ ಎಂದರು.

ಮೈಕ್ರೋ ಬಿಸಿನೆಸ್ ಎಕ್ಸಲೆನ್ಸ್ ಯೋಜನೆಯ ಮೂಲಕ ಸಿಐಐ–ಸಿಇಎಲ್ ಜೊತೆಗೂಡಿ ಉದ್ಯಮಿಗಳಿಗೆ ಅಗತ್ಯ ಮಾರ್ಗದರ್ಶನ ಮತ್ತು ಸಾಮರ್ಥ್ಯ ವೃದ್ಧಿ ನೆರವು ನೀಡಲಾಗುವುದು ಎಂದು ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರು ತಿಳಿಸಿದರು.

ಮೈಸೂರಿನ ಸಿಐಐ ಅಧ್ಯಕ್ಷ ನಾಗರಾಜ ಗರ್ಗೇಶ್ವರಿ ಮಾತನಾಡಿ, ಚಾಮರಾಜ ನಗರದಲ್ಲಿ ಉದ್ಯಮ ಕ್ಷೇತ್ರದ ಅವಕಾಶಗಳು ಹೆಚ್ಚುತ್ತಿದೆ. ಡಿಜಿಟಲ್ ಮಾರ್ಕೆಟಿಂಗ್, ಮಾರಾಟ ಮತ್ತು ಉದ್ಯಮ ನಿರ್ವಹಣೆಯಲ್ಲಿ ಉದ್ಯಮಿಗಳು ತಮ್ಮ ಕೌಶಲ್ಯಗಳನ್ನು ಬಲಪಡಿಸಿಕೊಳ್ಳಬೇಕೆಂದು ಸಲಹೆ ನೀಡಿದರು.

ಸಿಐಐ ಕರ್ನಾಟಕ ಎಂಎಸ್‌ಎಂಇ ಪ್ಯಾನೆಲ್‌ನ ಸದಸ್ಯ ಕಾರ್ಯದರ್ಶಿ ಸ್ಯಾಮ್ ಚೆರಿಯನ್ ಮಾತನಾಡಿ, ಜಿಲ್ಲೆಯ ಪ್ರಗತಿಪರ ಆಡಳಿತ ಮತ್ತು ಕ್ಷಿಪ್ರ ಅಭಿವೃದ್ಧಿಯ ಪ್ರಯತ್ನಗಳಂತಹ ಕ್ರಮಗಳು ಹೆಚ್ಚಿನ ಕೈಗಾರಿಕೆಗಳನ್ನು ಜಿಲ್ಲೆಗೆ ಆಕರ್ಷಿಸುತ್ತವೆ ಎಂದರು.

ಕಾರ್ಯಕ್ರಮದ ವೇಳೆ ಚಾಮರಾಜನಗರ ಜಿಲ್ಲಾಡಳಿತ ಮತ್ತು ಸಿಐಐ–ಸಿಇಎಲ್ ನಡುವಿನ ಬಿಸಿನೆಸ್ 360 ಉದ್ಯಮಿ ಅಭಿವೃದ್ಧಿ ಯೋಜನೆಗೆ ಸಂಬಂಧಿಸಿದ ಒಪ್ಪಂದಕ್ಕೆ ಸಹಿ ಮಾಡಲಾಯಿತು. ಈ ಯೋಜನೆಯಡಿ ಜಿಲ್ಲೆಯ ಮೊದಲ 200 ಉದ್ಯಮಿಗಳಿಗೆ ತರಬೇತಿ ನೀಡಲಾಗುತ್ತದೆ.

ನಾಗರಾಜ ಗರ್ಗೇಶ್ವರಿ ಅವರು ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರಿಗೆ ಸಿಎಸ್‌ಆರ್ ಸಹಯೋಗ ಪತ್ರವನ್ನು ಸಲ್ಲಿಸಿದರು. ಯೋಜನೆಯಡಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಇಂಟರಾಕ್ಟಿವ್ ಲರ್ನಿಂಗ್ ಉಪಕರಣಗಳ ಸ್ಥಾಪನೆ, ಮಹಿಳೆಯರ ಆರೋಗ್ಯ ಸ್ವಚ್ಛತೆಗಾಗಿ ಪಿಂಕ್ ಶೌಚಾಲಯ ನಿರ್ಮಾಣ ಕೈಗೊಳ್ಳಲಾಗುತ್ತದೆ. ಈ ಸಂಬಂಧ 1.06 ಕೋಟಿ ಮೊತ್ತದ ಯೋಜನೆಗಳಿಗೆ ಸಿಎಸ್‌ಆರ್ ಸಹಯೋಗಕ್ಕಾಗಿ ಜಿಲ್ಲಾಧಿಕಾರಿಗಳಿಗೆ 1.06 ಕೋಟಿ ಮೌಲ್ಯದ ಕೊಡುಗೆ ಬದ್ಧತೆಯ ಪತ್ರವನ್ನು ಸಲ್ಲಿಸಲಾಯಿತು.

ಕಾರ್ಯಕ್ರಮದಲ್ಲಿ ಉಪವಿಭಾಗಾಧಿಕಾರಿ ದಿನೇಶ್ ಕುಮಾರ್ ಮೀನಾ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಉಪ ನಿರ್ದೇಶಕ ದೊರೈರಾಜ್, ಸಹಾಯಕ ನಿರ್ದೇಶಕ ವಿಜಯ್ ಕುಮಾರ್, ಸಿ.ಐ.ಐ–ಸಿ.ಇ.ಎಲ್‌ನ ಶಿವೇಕ್ ಗುರುಬರಣ್, ಜಿಲ್ಲಾ ಸಿಎಸ್‌ಆರ್ ಸಮಾಲೋಚಕರಾದ ರಕ್ಷಿತಾ, ಜಿಲ್ಲಾ ಇ–ಆಡಳಿತ ಸಮಾಲೋಚಕರಾದ ಮಧುಕೇಶ್, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಆಟೋ ಚಾಲಕರಿಂದ ಕನ್ನಡ ರಾಜ್ಯೋತ್ಸವ ಆಚರಣೆ



ಕೊಳ್ಳೇಗಾಲದ ಆಶ್ರಯ ಬಡಾವಣೆಯ ಲಯನ್ಸ್ ಆಟೋ ನಿಲ್ದಾಣದ ಚಾಲಕರ ವತಿಯಿಂದ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು.

ಕೊಳ್ಳೇಗಾಲ: ಪಟ್ಟಣದ ಆಶ್ರಯ ಬಡಾವಣೆಯ ಲಯನ್ಸ್ ಆಟೋ ನಿಲ್ದಾಣದ ಆಟೋ ಚಾಲಕರ ವತಿಯಿಂದ ಕನ್ನಡ ರಾಜ್ಯೋತ್ಸವವನ್ನು ಗುರುವಾರ ಆಚರಿಸಲಾಯಿತು.

ಈ ವೇಳೆ ಕರವೇ(ಸ್ವಾಭಿಮಾನಿ ಬಣ) ತಾಲೂಕು ಅಧ್ಯಕ್ಷ ಅಜ್ಗರ್ ಪಾಷಾ ಮಾತನಾಡಿ, ಕನ್ನಡ ನಾಡು ನುಡಿ ಭಾಷೆಯ ಮೇಲಿರುವ ಆಟೋ ಚಾಲಕರ ಭಾಷಾಭಿಮಾನವನ್ನು ನಾವೆಲ್ಲರೂ ಗೌರವಿಸಬೇಕಾಗಿದೆ. ನಿಜಕ್ಕೂ ಆಟೋ ಚಾಲಕರು ಕನ್ನಡದ ಕಟ್ಟಾಳುಗಳು, ಅವರುಗಳಿಂದಲೇ ಕನ್ನಡ ಭಾಷೆಯ ಗೌರವ ಹೆಚ್ಚಿದೆ ಎಂದರಲ್ಲದೆ, ನಾವೆಲ್ಲರೂ ನವೆಂಬರ್ ತಿಂಗಳಿಗೆ ಮಾತ್ರ ಭಾಷಾಭಿಮಾನ ಸೀಮಿತಗೊಳಿಸದೆ, ವರ್ಷಪೂರ್ತಿ ಕನ್ನಡಾಭಿಮಾನವನ್ನು ತೋರಿಸಬೇಕು ಎಂದರು

ನಗರಸಭೆ ಸದಸ್ಯ ಪ್ರಶಾಂತ್ ಮಾತನಾಡಿ, ಕನ್ನಡ ಭಾಷೆಗೆ ಸಾವಿರಾರು ವರ್ಷಗಳ ಇತಿಹಾಸವಿದ್ದು, ಇತ್ತೀಚಿನ ವರ್ಷಗಳಲ್ಲಿ ಅನ್ಯ ಭಾಷಿಕರ ವಲಸೆಯಿಂದ ಕನ್ನಡ ಭಾಷೆಗೆ ತೊಡಕಾಗುತ್ತಿದೆ. ಈ ನಿಟ್ಟಿನಲ್ಲಿ ಕನ್ನಡಿಗರಾದ ನಾವು ಜಾಗೃತರಾಗಬೇಕು, ಭಾಷಾಭಿಮಾನಿಗಳಾಗುವ ಜೊತೆ ಜೊತೆಗೆ ನಾವೆಲ್ಲರೂ ಸ್ವಾಭಿಮಾನಿ ಕನ್ನಡಿಗರಾಗಬೇಕಿದೆ ಎಂದರು.

ಈ ಸಂದರ್ಭದಲ್ಲಿ ಕಸಾಪ ಅಧ್ಯಕ್ಷ ನಾಗರಾಜು, ಆಟೋ ಚಾಲಕರಾದ ಜುನೈದ್, ಸಲೀಮ್, ಸಮೀ, ವಸೀಮ್, ಸಫಿ, ವಸೀಂ, ನಿಖಿಲ್, ಫರ್ವಿಜ್, ಇಮ್ರಾನ್, ಇಫ್ರಾನ್, ದಿಲ್ ಕುಶ್ ಕಲೀಂ ಇನ್ನಿತರಿದ್ದರು

ನಾಳೆ ಹಲವೆಡೆ ವಿದ್ಯುತ್ ಸ್ಥಗಿತ

ಕೊಳ್ಳೇಗಾಲ: ದೊಡ್ಡಿಂದುವಾಡಿಯಿಂದ–ಚಿಕ್ಕಲ್ಲೂರು ಗ್ರಾಮದ ರಸ್ತೆ ಅಗಲೀಕರಣ ಕಾಮಗಾರಿಯಿಂದ ವಿದ್ಯುತ್ ಕಂಬಗಳು ಹಾಗೂ ಮಾರ್ಗಗಳನ್ನು ಸ್ಥಳಾಂತರಿಸುವ ಕಾಮಗಾರಿ ನಡೆಯಲಿರುವುದರಿಂದ ನ.8 ರಂದು ಬೆಳಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ಪ್ರಕಾಶಪಾಳ್ಯ, ಲಂಬಾಣಿದೊಡ್ಡಿ, ಮೇಗಳದೊಡ್ಡಿ, ಮರಿಯಪುರ, ಮೊಳಗನಕಟ್ಟೆ, ರಾಚಶೆಟ್ಟಿದೊಡ್ಡಿ, ಇಕ್ಕಡಹಳ್ಳಿ, ಕೊತ್ತನೂರು ಹಾಗೂ ಸುತ್ತಮುತ್ತಲಿನ ಗ್ರಾಮಗಳಿಗೆ ಸದರಿ ದಿನದಂದು ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಚಾ.ನಗರದಲ್ಲಿ ಇಂದು ಕಬ್ಬು ಬೆಳೆಗಾರರಿಂದ ರಸ್ತೆ ತಡೆ

ಚಾಮರಾಜನಗರ: ಪ್ರತಿ ಟನ್ ಕಬ್ಬಿಗೆ 3500 ರೂ. ನಿಗದಿಪಡಿಸುವಂತೆ ಆಗ್ರಹಿಸಿ ಬೆಳಗಾವಿ ಕಬ್ಬು ಬೆಳೆಗಾರರು ನಡೆಸುತ್ತಿರುವ ಹೋರಾಟವನ್ನು ಬೆಂಬಲಿಸಿ, ನಾಳೆ (ನ.7) ಬೆಳಗ್ಗೆ 11.30ಕ್ಕೆ ಚಾಮರಾಜನಗರ–ಯಳಂದೂರು ರಸ್ತೆಯ ದೊಡ್ಡ ರಾಯಪೇಟೆ ವೃತ್ತದ ಬಳಿ ರಸ್ತೆ ತಡೆ ನಡೆಸಲಾಗುವುದು ಎಂದು ಕಬ್ಬು ಬೆಳೆಗಾರರ ಸಂಘದ ಮೈಸೂರು ಮತ್ತು ಚಾಮರಾಜನಗರ ಘಟಕ ತಿಳಿಸಿದೆ.

ಎಂಎಲ್‌ಸಿ ಸಿ.ಟಿ.ರವಿ ವಿರುದ್ಧ ಸವಿತಾ ಸಮಾಜದಿಂದ ಪ್ರತಿಭಟನೆ

ಯಳಂದೂರು, ನ6– ಸವಿತಾ ಸಮಾಜವನ್ನು ಅವಹೇಳನ ಮಾಡಿದ್ದಾರೆಂದು ಆರೋಪಿಸಿ ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ವಿರುದ್ಧ ತಾಲೂಕು ನಯನಜ ಕ್ಷತ್ರಿಯ ಸಂಘದಿಂದ ತಾಲೂಕು ಕಚೇರಿ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಸವಿತಾ ಸಮಾಜದ ಅಧ್ಯಕ್ಷ ಶ್ರೀಕಂಠಸ್ವಾಮಿ ಮಾತನಾಡಿ, ಅ.25ರಂದು ಕಾಲೇಜಿಗೆ ಭೇಟಿ ನೀಡಿದ್ದ ಸಿಟಿ ರವಿ ಅವರು ಅಧಿಕಾರಿಗಳನ್ನು ವಿಚಾರಿಸುವ ಸಂದರ್ಭದಲ್ಲಿ ಸವಿತಾ ಸಮಾಜದ ನಿಷೇಧಿತ ಪದನಾಮ ಬಳಸಿದ್ದಾರೆ. ಅವರ ಈ ಮಾತಿನಿಂದ ಸವಿತಾ ಸಮಾಜದ ಜನಾಂಗದವರಿಗೆ ತುಂಬಾ ನೋವುಂಟಾಗಿರುತ್ತದೆ, ಹಾಗಾಗಿ ಅವರು ಬಹಿರಂಗವಾಗಿ ಕ್ಷಮೆ ಯಾಚಿಸಬೇಕು ಎಂದು ಆಗ್ರಹಿಸಿದರು. ಪ್ರತಿನಿತ್ಯ ಸಾರ್ವಜನಿಕರು ಸರ್ಕಾರಿ ಅಧಿಕಾರಿಗಳು ಹಾಗೂ ರಾಜಕೀಯ ವ್ಯಕ್ತಿಗಳು ಈ ಪದವನ್ನು ಬಳಸಿ ನಮ್ಮ ಮನಸ್ಸಿಗೆ ನೋವುಂಟು ಮಾಡುತ್ತಿದ್ದಾರೆ. ಹೀಗಾಗಿ ಈ ಪದವನ್ನು ಬಳಸಿದವರಿಗೆ ಕಾನೂನಿನ ವ್ಯಾಪ್ತಿಯಲ್ಲಿ ಶಿಕ್ಷೆ ಆಗಬೇಕೆಂದು ಮನವಿ ಪತ್ರವನ್ನು ತಹಸೀಲ್ದಾರ್ ಎಸ್.ಎಲ್.ನಯನ ಅವರಿಗೆ ಸಲ್ಲಿಸಿದರು.

ಈ ವೇಳೆ ಸಂಘದ ಉಪಾಧ್ಯಕ್ಷ ಬಸವಣ್ಣ, ರಾಮು, ಕೆ.ಎಂ.ವೀರಶೆಟ್ಟಿ ರೇವಣ್ಣ ಗೋವಿಂದರಾಜು, ಕಾಂತರಾಜು, ನಂಜುಂಡಶೆಟ್ಟಿ, ದಿವಾಕರ್, ರಂಗಸ್ವಾಮಿ, ವೀರಶೆಟ್ಟಿ, ಕರಡಿ ಮೋಳೆ ರೇವಣ್ಣ, ಮಹೇಶ್, ಕೆಸ್ತೂರು ರಾಚಶೆಟ್ಟಿ, ಸ್ವಾಮಿ, ರಾಜು, ವೆಂಕಟೇಶ್, ಕೀರ್ತಿ ಇತರರಿದ್ದರು.



ನಯನಜ ಕ್ಷತ್ರಿಯ ಜನಾಂಗದವರು ತಾಲೂಕು ಕಚೇರಿ ಮುಂಭಾಗ ಸಿ.ಟಿ.ರವಿ ವಿರುದ್ಧ ಪ್ರತಿಭಟಿಸಿದರು.

ಗೇರುಮಾಳ ಜಡೇರುದ್ರಸ್ವಾಮಿ ಮಹಾರಥೋತ್ಸವ


ಹನೂರು, ನ.6– ಕರ್ನಾಟಕ–ತಮಿಳುನಾಡು ಗಡಿ ಪ್ರದೇಶದ ಪ್ರಸಿದ್ಧ ಗೇರುಮಾಳ ಜಡೇರುದ್ರಸ್ವಾಮಿ ಮಹಾರಥೋತ್ಸವ ಗುರುವಾರ ಭಕ್ತಿಯೊಂದಿಗೆ ಜರುಗಿತು.

ತಮಿಳುನಾಡಿನ ಕೊಯಮತ್ತೂರು ಜಿಲ್ಲೆ ಸತ್ಯಮಂಗಲ ತಾಲೂಕಿನ ಗೇರುಮಾಳ ಮತ್ತು ಸುತ್ತಮುತ್ತಲ ಗ್ರಾಮಗಳಲ್ಲಿ ಕನ್ನಡಿಗರೇ ಹೆಚ್ಚಾಗಿ ವಾಸಿಸುತ್ತಿದ್ದು, ಜಡೇರುದ್ರ ಸ್ವಾಮಿ ಮತ್ತು ಕುಂಬೇಶ್ವರಸ್ವಾಮಿ ದೇವರ ಉತ್ಸವದಲ್ಲಿ ಸತ್ತಿಗೆ, ಸೂರಿಪಾನಿ, ನಂದಿ ಧ್ವಜ ಮತ್ತು ಜಾನಪದ ಮೇಳ ದೊಂದಿಗೆ ರಥೋತ್ಸವ ನಡೆಯಿತು.

ಈ ವೇಳೆ ಭಕ್ತರು ರಥವನ್ನು ಎಳೆದು, ಪಟಾಕಿ ಸಿಡಿಸಿ ಸಂಭ್ರಮಿಸಿದರು. ಹನೂರು ತಾಲೂಕಿನ ಒಡೆಯರಪಾಳ್ಯ ಪಿಜಿಪಾಳ್ಯ ಹುತ್ತೂರು ಲೊಕ್ಕನಹಳ್ಳಿ ರಾಮಾಪುರ ಸೇರಿ 20ಕ್ಕೂ ಹೆಚ್ಚು ಗ್ರಾಮಗಳಿಂದ ಸಹಸ್ರಾರು ಭಕ್ತರು ಹಣ್ಣು ಜವನ ಎಸೆದರು. ಅಲ್ಲದೆ, ರಥದ ಚಕ್ರವನ್ನು ಎಳೆದು ಉತ್ಸವದಲ್ಲಿ ಪಾಲ್ಗೊಂಡರು. ದೇವಾಲಯವನ್ನು ತಳಿರುತೋರಣಗಳು ಮತ್ತು ವರ್ಣಮಯ ವಿದ್ಯುತ್ ದೀಪಗಳಿಂದ ಸಿಂಗರಿಸಲಾಗಿದ್ದು, ಎಲ್ಲೆಲ್ಲೂ ಭಕ್ತಸಾಗರ ನೆರೆದಿದ್ದರಿಂದ ಹಬ್ಬದ ಸಂಭ್ರಮ ಸಡಗರ ತುಂಬಿತ್ತು.



ಗೇರುಮಾಳ ಜಡೇರುದ್ರಸ್ವಾಮಿ ಮಹಾರಥೋತ್ಸವ ಗುರುವಾರ ಭಕ್ತಿಯೊಂದಿಗೆ ಜರುಗಿತು.



ದೇಶವೇ ನೋಡುವಂಥ ಚಿತ್ರ ಆಗುತ್ತೆ; ಶಿವಣ್ಣ

ಶಿವರಾಜಕುಮಾರ್, ಉಪೇಂದ್ರ ಹಾಗೂ ರಾಜ್ ಬಿ.ಶೆಟ್ಟಿ ನಟಿಸಿರುವ, ಅರ್ಜುನ್ ಜನ್ಯ ನಿರ್ದೇಶನದ ಮಲ್ಟಿಸ್ಟಾರರ್ 45 ಚಿತ್ರದ 'ಆಫ್ರೋ ಟಪಾಂಗ್' ಎಂಬ ಪ್ರಮೋಷನಲ್ ಹಾಡಿನ ಬಿಡುಗಡೆ ಕಾರ್ಯಕ್ರಮ ರಾಜ್ಯೋತ್ಸವದಂದು ನಡೆಯಿತು. ಈ ಹಾಡಿನಲ್ಲಿ ಉಗಾಂಡದ ಹೆಸರಾಂತ ಜಿಟೊ ಕಿಡ್ಸ್ ತಂಡದ ಜೊತೆಗೆ ಚಿತ್ರದ ಮೂವರು ನಾಯಕರೂ ಹೆಜ್ಜೆ ಹಾಕಿರುವುದು ವಿಶೇಷ.

ವೇದಿಕೆಯಲ್ಲಿ ನಿರ್ಮಾಪಕ ರಮೇಶ್ ರೆಡ್ಡಿ ಮಾನಾಡುತ್ತಾ, ಇದೇ ಮೊದಲ ಬಾರಿಗೆ ನಮ್ಮ ಚಿತ್ರದ ಹಾಡೊಂದರಲ್ಲಿ ಜಿಟೋಕಿಡ್ಸ್ ಎಂಬ ಹೆಸರಾಂತ ನೃತ್ಯಗಾರರು ಡಾನ್ಸ್ ಮಾಡಿದ್ದಾರೆ.



ಯಾವುದೇ ಕೊರತೆ ಬಾರದ ಹಾಗೆ ಈ ಹಾಡನ್ನು ಅದ್ದೂರಿಯಾಗಿ ನಿರ್ಮಾಣ ಮಾಡಿದ್ದೇವೆ. ತೆರೆಯ ಮೇಲೆ ನೋಡುವಾಗ ಹಾಡು ತುಂಬಾ ಚೆನ್ನಾಗಿ ಮೂಡಿಬಂದಿದೆ. ಇದರ ಕ್ರೆಡಿಟ್ ನಿರ್ದೇಶಕರಿಗೆ ಸೇರಬೇಕು. ನಮ್ಮ ಚಿತ್ರ ಡಿಸೆಂಬರ್ 25ಕ್ಕೆ ತೆರೆಗೆ ಬರುತ್ತಿದೆ ಎಂದರು.

ನಾನು ನಿರ್ದೇಶಕನಾಗಲು ಶಿವಣ್ಣ ಅವರೇ ಕಾರಣ ಎಂದು ಮಾತನಾಡಿದ ನಿರ್ದೇಶಕ ಅರ್ಜುನ್ ಜನ್ಯ, ಚಿತ್ರದಲ್ಲಿ ಹಾಡಿಲ್ಲ. ಆದರೆ, ಪ್ರಮೋಷನಲ್ ಸಾಂಗ್ ಮಾಡಬೇಕೆಂಬ ಆಸೆ ಇತ್ತು. ಏನಾದರೂ ವಿಶೇಷವಾಗಿ ಮಾಡಬೇಕು ಅಂದುಕೊಂಡಾಗ ನನಗೆ ಉಗಾಂಡದ ಜಿಟೊಕಿಡ್ಸ್ ಕರೆಸಿದರೆ ಚೆನ್ನಾಗಿರತ್ತೆ ಎನಿಸಿ, ನಿರ್ಮಾಪಕರಿಗೆ ತಿಳಿಸಿದೆ. ಅವರು ಒಂದೇ ಮಾತಿಗೆ ಒಪ್ಪಿದರು. ಅವರನ್ನು ಸಂಪರ್ಕ ಮಾಡಿ ಒಪ್ಪಿಸಿದೆವು. ಇವರ ಜೊತೆ ಮೂವರು ನಾಯಕರೂ ಅಭಿನಯಿಸಿದ್ದಾರೆ. ಜಾನಿ ಮಾಸ್ಟರ್ ನೃತ್ಯ ನಿರ್ದೇಶನ ಮಾಡಿದ್ದಾರೆ ಎಂದರು.

ಶಿವರಾಜಕುಮಾರ್ ಮಾತನಾಡುತ್ತಾ ಅರ್ಜುನ್ ಜನ್ಯ ಜತೆ ಡಿಕೆಡಿ ಮಾಡುವಾಗ ಈ ಕಾನ್ಸೆಪ್ಟ್ ಹೊಳೆಯಿತು. ಜನ್ಯ ಈ ಕಥೆ ಹೇಳಿದಾಗ ನೀವೇ ನಿರ್ದೇಶನ ಮಾಡಿ ಎಂದಿದ್ದೆ ಈ ಒಂದು ಹಾಡಲ್ಲೇ ಚಿತ್ರದ ಕಥೆಯಿದೆ. 45 ಇಡೀ ದೇಶವೇ ನೋಡುವಂತಹ ಸಿನಿಮಾ ಆಗುತ್ತೆ ನಾವು ಮೂರು ಜನ ಮಕ್ಕಳ ಥರ ಆಕ್ಟ್ ಮಾಡಿದ್ದೇವೆ. ಎಂದು ಹೇಳಿದರು.

ದುನಿಯಾ ವಿಜಯ್ ಲ್ಯಾಂಡ್‌ಲಾರ್ಡ್ ಟೀಸರ್



80ರ ಕಾಲಘಟ್ಟದಲ್ಲಿ ನಡೆಯುವ ಕಥೆಯನ್ನಿಟ್ಟುಕೊಂಡು ಜಡೇಶ್ ಕೆ.ಹಂಪಿ ಆಕ್ಷನ್ ಕಟ್ ಹೇಳಿರುವ ಚಿತ್ರ ಲ್ಯಾಂಡ್‌ಲಾರ್ಡ್. ದುನಿಯಾ ವಿಜಯ್, ರಚಿತರಾಮ್ ಅಭಿನಯದ ಈ ಚಿತ್ರದ ಸರ್ವೈವರ್ ಟೀಸರ್ ಬಿಡುಗಡೆ ಸಮಾರಂಭ ಇತ್ತೀಚೆಗೆ ನಡೆಯಿತು.

45 ವರ್ಷಗಳ ಹಿಂದಿನ ಪರಿಸರ ಸೃಷ್ಟಿಸುವುದು ಅಷ್ಟು ಸುಲಭವಾಗಿರಲಿಲ್ಲ. ನಿರ್ಮಾಪಕರು ಚಿತ್ರ ಅದ್ದೂರಿಯಾಗಿ ಮೂಡಿಬರುವಂತೆ ನೋಡಿಕೊಂಡಿದ್ದಾರೆ. ದುನಿಯಾ ವಿಜಯ್, ರಚಿತಾರಾಮ್, ರಿತನ್ಯ, ಶಿಶಿರ್, ರಾಕೇಶ್ ಅಡಿಗ, ಅಚ್ಯುತ್‌ಕುಮಾರ್, ಮಿತ್ರ, ಅಭಿಷೇಕ್ ದಾಸ್ ಇವರ ಜತೆ ಐವತ್ತಕ್ಕೂ ಹೆಚ್ಚು ರಂಗಭೂಮಿ ಕಲಾವಿದರು ನಟಿಸಿದ್ದಾರೆ. ಅಜನೀಶ್ ಲೋಕನಾಥ್ ಸಂಗೀತದ ಹಾಡುಗಳು ಒಂದಕ್ಕಿಂತ ಒಂದು ಚೆನ್ನಾಗಿ ಮೂಡಿ ಬಂದಿವೆ. ಸದ್ಯದಲ್ಲೇ ಯೋಗರಾಜ್ ಭಟ್ ರಚನೆಯ, ದುನಿಯಾ ವಿಜಯ್ ಹಾಗೂ ರಚಿತಾರಾಮ್ ಅಭಿನಯದ ಹಾಡೊಂದು ಬಿಡುಗಡೆಯಾಗಲಿದ್ದು, ಅದು ಸರ್ವಕಾಲಿಕ ಹಿಟ್ ಸಾಂಗ್ ಆಗಲಿದೆ ಎಂದರು.

ನಾಯಕ ದುನಿಯಾ ವಿಜಯ್ ಮಾತನಾಡುತ್ತಾ, ರಚಿತಾರಾಮ್ ನನಗೆ ಮೊದಲಿನಿಂದಲೂ ಸ್ನೇಹಿತರು. ಈ ಚಿತ್ರದಲ್ಲಿ ತುಂಬಾ ಚೆನ್ನಾಗಿ ನಟಿಸಿದ್ದಾರೆ. ಅಲ್ಲದೆ ನಿಜ ಜೀವನದಲ್ಲೂ ನಾನು ತಾಯಿತರ ಪ್ರೀತಿಸುವ ಹಿರಿಯ ನಟಿ ಉಮಾಶ್ರೀ ಅವರೊಂದಿಗೆ ನಟಿಸಿದ್ದು ಬಹಳ ಸಂತೋಷವಾಗಿದೆ. ನನ್ನ ಮಗಳು ರಿತನ್ಯ ಕೂಡ ಚಿತ್ರದಲ್ಲಿ ನನ್ನ ಮಗಳಾಗೇ ಅಭಿನಯಿಸಿದ್ದಾಳೆ ಎಂದರು. ದುನಿಯಾ ವಿಜಯ್ ಪುತ್ರಿ ರಿತನ್ಯ ಮಾತನಾಡುತ್ತಾ, ಈ ಚಿತ್ರದ ಮೂಲಕ ನಾನು ಕಲಾವಿದೆಯಾಗಿ ಚಿತ್ರರಂಗ ಪ್ರವೇಶಿಸುತ್ತಿದ್ದು, ತೆರೆಯ ಮೇಲೂ ಸಹ ನಾನು ದುನಿಯಾ ವಿಜಯ್ ಅವರ ಮಗಳಾಗಿಯೇ ಕಾಣಿಸಿಕೊಂಡಿದ್ದೇನೆ ಎಂದರು.

ನಾಯಕಿ ರಚಿತಾರಾಮ್ ಮಾತನಾಡುತ್ತಾ, ಈ ಚಿತ್ರದಲ್ಲಿ ನನ್ನ ಪಾತ್ರದ ಹೆಸರು ನಿಂಗವ್ವ. ಕಥೆ ಕೇಳುವಾಗಲೇ ನನಗೆ ಬಹಳ ಕುತೂಹಲ ಹುಟ್ಟಿ, ಈ ಪಾತ್ರವನ್ನು ಮಾಡಲೇಬೇಕು ಎನಿಸಿತು. ಜಾನಿಜಾನಿ ಎಸ್ ಪಪ್ಪ ಚಿತ್ರದ ನಂತರ ನಾನು ದುನಿಯಾ ವಿಜಯ್ ಒಟ್ಟಿಗೇ ನಟಿಸಿದ್ದೇವೆ ಎಂದರು.

ನಿರ್ಮಾಪಕ ಕೆ.ವಿ.ಸತ್ಯಪ್ರಕಾಶ್ ಮಾತನಾಡುತ್ತಾ, ಸಾರಥಿ ಚಿತ್ರದ ಬಳಿಕ 14 ವರ್ಷಗಳ ನಂತರ ನಮ್ಮ ಸಂಸ್ಥೆಯಿಂದ ಲ್ಯಾಂಡ್‌ಲಾರ್ಡ್ ಚಿತ್ರ ನಿರ್ಮಾಣವಾಗಿದೆ. ನಿರ್ದೇಶಕರು ಒಂದೊಳ್ಳೆ ಕಥೆ ಹೆಣೆದಿದ್ದಾರೆ. ನೋಡುಗರು ಕೊಡುವ ಹಣಕ್ಕೆ ಐದುಪಟ್ಟು ಹೆಚ್ಚು ಮನರಂಜನೆ ಕೊಡುವ ಚಿತ್ರವಿದು ಎಂದರು.

ರಜನಿಕಾಂತ್ 173ನೇ ಚಿತ್ರಕ್ಕೆ ಕಮಲ್‌ಹಾಸನ್ ನಿರ್ಮಾಪಕ

ಸೂಪರ್‌ಸ್ಟಾರ್ ರಜನಿಕಾಂತ್ ಹಾಗೂ ಉಲಗ ನಾಯಗನ್ ಕಮಲ್‌ಹಾಸನ್ ಸಿನಿ ಪ್ರೇಮಿಗಳಿಗೆ ಗುಡ್ ನ್ಯೂಸ್ ಕೊಟ್ಟಿದ್ದಾರೆ. ತಲೈವಾ ಅಭಿನಯದ 173ನೇ ಸಿನಿಮಾದ ಘೋಷಣೆಯಾಗಿದೆ. ಈ ಚಿತ್ರಕ್ಕೆ ನಟ ನಿರ್ಮಾಪಕ ಕಮಲ್‌ಹಾಸನ್ ಬಂಡವಾಳ ಹೂಡುತ್ತಿದ್ದಾರೆ.

ಕಮಲ್‌ಹಾಸನ್ ಅವರು ತಮ್ಮದೇ ನಿರ್ಮಾಣ ಸಂಸ್ಥೆಯಾದ ರಾಜ್‌ಕಮಲ್ ಫಿಲ್ಮ್ ಇಂಟರ್‌ನ್ಯಾಷನಲ್ ಕಂಪನಿ ಮೂಲಕ ರಜನಿಕಾಂತ್ ಅವರ ಚಿತ್ರವನ್ನು ನಿರ್ಮಾಣ ಮಾಡಲಿದ್ದಾರೆ.

ತಮಿಳು ಚಿತ್ರರಂಗದ ಖ್ಯಾತ ನಿರ್ದೇಶಕ ಹಾಗೂ ಖುಷ್ಬು ಅವರ ಪತಿ ಸಿ. ಸುಂದರ್ ಅವರು ತಲೈವಾ ಅವರ 173ನೇ ಚಿತ್ರವನ್ನು ನಿರ್ದೇಶನ ಮಾಡಲಿದ್ದಾರೆ. ರಜನಿಕಾಂತ್ ಜತೆ ಅರುಣಾಚಲಂ ಎಂಬ ಸೂಪರ್‌ಹಿಟ್ ಚಿತ್ರವನ್ನು ಕೊಟ್ಟಿರುವ ಇವರು, ಕಮಲ್‌ಹಾಸನ್ ಜತೆ ಅನ್ಬೆ ಶಿವಂ ಎಂಬ ಚಿತ್ರವನ್ನು ನಿರ್ದೇಶನ ಮಾಡಿದ್ದಾರೆ.



ಸಿ.ಸುಂದರ್ ಅವರ ನಿರ್ದೇಶನದಲ್ಲಿ ಮೂಡಿಬರಲಿರುವ ಕಮಲ್‌ಹಾಸನ್ ನಿರ್ಮಾಣ ಮಾಡಲಿರುವ, ರಜನಿಕಾಂತ್ ನಟನೆಯ ಈ ಚಿತ್ರವನ್ನು 2027ರ ಪೊಂಗಲ್ ಹಬ್ಬಕ್ಕೆ ಬಿಡುಗಡೆ ಮಾಡಲು ಚಿತ್ರತಂಡ ಪ್ಲಾನ್ ಮಾಡಿಕೊಂಡಿದೆ.

ಉಗ್ರತಾಂಡವದಲ್ಲಿ ರಾಜಕೀಯ, ಮಾಫಿಯಾ



ಇತ್ತೀಚೆಗೆ ಸಮಾಜ ಸೇವಕ, ರಿಯಲ್ ಎಸ್ಟೇಟ್ ಉದ್ಯಮಿ ಡಾ.ಎನ್.ನರಸಿಂಹಮೂರ್ತಿ ಅವರ ನಿರ್ಮಾಣದ ಉಗ್ರತಾಂಡವ ಚಿತ್ರದ ಟೀಸರ್ ಬಿಡುಗಡೆ ಕಾರ್ಯಕ್ರಮ ನಡೆಯಿತು. ಗೌತಮ್‌ಸೂರ್ಯ ಅವರ ನಿರ್ದೇಶನದ ಈ ಚಿತ್ರದಲ್ಲಿ ಚಿರಂತ್ ನಾಯಕನಾಗಿ ನಟಿಸುತ್ತಿದ್ದಾರೆ. ಕರಾವಳಿ ಭಾಗದಲ್ಲಿ ನಡೆಯುವ ರಾಜಕೀಯ, ಮಾಫಿಯಾ ಹಾಗೂ ಜಮೀನ್ದಾರ-ಕಾರ್ಮಿಕರ ಸುತ್ತ ಸುತ್ತುವ ಕಥಾಹಂದರ ಈ ಚಿತ್ರದಲ್ಲಿದ್ದು ಸದ್ಯದಲ್ಲೇ ಚಿತ್ರೀಕರಣ ಪ್ರಾರಂಭವಾಗಲಿದೆ.

ನಿರ್ಮಾಪಕ ನರಸಿಂಹಮೂರ್ತಿ ಮಾತನಾಡುತ್ತಾ, ಉಗ್ರತಾಂಡವ ಟೀಸರ್ ತುಂಬಾ ಚೆನ್ನಾಗಿ ಮೂಡಿಬಂದಿದೆ. ನಿರ್ದೇಶಕರು ಚಿತ್ರವನ್ನು ಇದಕ್ಕಿಂತ ಚೆನ್ನಾಗಿ ಮಾಡುತ್ತಾರೆಂಬ ವಿಶ್ವಾಸವಿದೆ. ಹಳ್ಳಿಗಳಲ್ಲಿ ನಡೆಯುವ ಜಾತಿ ರಾಜಕೀಯ, ಮೇಲು, ಕೀಳು ಹಾಗೂ ಒಬ್ಬ ವ್ಯಕ್ತಿಗೆ ಅನ್ಯಾಯ ಆದಾಗ ಯುವಕನೊಬ್ಬ ಹೇಗೆ ಸಿಡಿದೆದ್ದು ನಿಲ್ಲುತ್ತಾನೆ ಎಂಬುದನ್ನು ಈ ಚಿತ್ರದ ಮೂಲಕ ಹೇಳಹೊರಟಿದ್ದೇವೆ. 80-90ರ ದಶಕದಲ್ಲಿ ನಾನು ಕೂಡ ಚಿತ್ರವೊಂದರಲ್ಲಿ ನಟಿಸಿದ್ದೆ. ಆನಂತರ ಒಂದು ಸಿನಿಮಾ ಮಾಡಲು ಹೋಗಿ ತುಂಬಾ ನಷ್ಟ ಅನುಭವಿಸಿದೆ. ಆ ನಂಟಿನಿಂದ ಈಗ ಮತ್ತೆ ಸಿನಿಮಾ ಮಾಡುವ ಆಸೆ ಚಿಗುರಿತು. ಇದು ನನ್ನ ನಿರ್ಮಾಣದ ಎರಡನೇ ಸಿನಿಮಾ. ಮುಂದಿನ ದಿನಗಳಲ್ಲಿ ಉತ್ತಮ ಸಿನಿಮಾಗಳನ್ನು ಮಾಡುವ ಯೋಚನೆ ಇದೆ ಎಂದು ಹೇಳಿದರು.

ಕಥೆ ಬರೆದು ನಾಯಕನಾಗಿ ನಟಿಸುತ್ತಿರುವ ಚಿರಂತ ಮಾತನಾಡಿ, ನಾನು ಈ ಹಿಂದೆ ಆತ್ಮ ಎಂಬ ಚಿತ್ರದಲ್ಲಿ ನಟಿಸಿದ್ದೆ. ರಾಜಕೀಯದ ಹಿನ್ನೆಲೆ ಇಟ್ಟುಕೊಂಡು ಕಥೆ ಮಾಡಬೇಕೆಂದು ಹೊರಟಾಗ ಈ ಕಾನ್ಸೆಪ್ಟ್ ಹೊಳೆಯಿತು. ಜತೆಗೆ ಜಾತಿಯ ಎಳೆ ಇಟ್ಟುಕೊಂಡು ಕಥೆ ಹೆಣೆದಿದ್ದೇನೆ, ನಮ್ಮ ಸಮಾಜದಲ್ಲಿ ನಡೆಯುವ ಘಟನೆಗಳೇ ಈ ಚಿತ್ರದಲ್ಲಿರಲಿವೆ. ಅದರಲ್ಲೂ ಮಲೆನಾಡಿನಲ್ಲಿ ಜಮೀನ್ದಾರರ ಹಾಗೂ ಕಾರ್ಮಿಕರ ನಡುವೆ ನಡೆಯುವ ಘರ್ಷಣೆಯ ಕಥೆಯನ್ನು ಆಕ್ಷನ್ ಡ್ರಾಮಾ ಮೂಲಕ ಹೇಳಹೊರಟಿದ್ದೇವೆ. ಇದೇ ತಿಂಗಳಿಂದ ಶೂಟಿಂಗ್ ಶುರುವಾಗಲಿದೆ ಎಂದರು.

ನಿರ್ದೇಶಕ ಗೌತಮ್ ಸೂರ್ಯ ಮಾತನಾಡುತ್ತಾ, ದಿನೇಶ್‌ಬಾಬು, ಪಿ.ವಾಸು ಮುಂತಾದವರ ಜೊತೆ ಕೆಲಸ ಮಾಡಿರುವ ನನಗಿದು ಮೊದಲ ನಿರ್ದೇಶನದ ಚಿತ್ರ ಎಂದು ಹೇಳಿದರು. ಮತ್ತೋರ್ವ ನಟಿ ಮಧುಬಾಲ ಪೊಲೀಸ್ ಅಧಿಕಾರಿಯ ಪಾತ್ರ ಮಾಡುತ್ತಿದ್ದಾರೆ. ಜೊತೆಗೆ ಹುಬ್ಬಳ್ಳಿ ಮೂಲದ ಅಶ್ವಿನಿ ಅವರು ರೀಲ್ಸ್ ಮಾಡುವ ಮಾಡೆಲ್ ಆಗಿ ಕಾಣಿಸಿಕೊಳ್ಳುತ್ತಿದ್ದಾರೆ. ಇವರ ಜೊತೆ ಕಿರಣ್ ಕೂಡ ಚಿತ್ರದಲ್ಲಿ ನಟಿಸುತ್ತಿದ್ದಾರೆ. ಶ್ರೀಸುರೇಶ್ ಅವರ ಸಂಗೀತ ಸಂಯೋಜನೆ ಈ ಚಿತ್ರಕ್ಕಿದೆ.

ಸಾಲಗಾರರ ಸಹಕಾರ ಸಂಘದ ಸದಸ್ಯರಿಗೆ ಸುಪ್ರಭಾತ




ಸಾಲ ಮಾಡಿಕೊಂಡವರ ಕಥೆ ವ್ಯಥೆ ಹೇಳುವ ಕಾನ್ಸೆಪ್ಟ್ ಇಟ್ಟುಕೊಂಡು ವಿಕ್ರಮ್ ಧನಂಜಯ್. ಆರ್. ನಿರ್ದೇಶನ ಮಾಡಿರುವ ಸಾಲಗಾರರ ಸಹಕಾರ ಸಂಘ ಚಿತ್ರ ಬಿಡುಗಡೆಗೆ ಸಿದ್ಧವಾಗಿದೆ. ಈ ಚಿತ್ರದ ಸುಪ್ರಭಾತ ಸಾಂಗ್ ಬಿಡುಗಡೆ ಸಮಾರಂಭ ಇತ್ತೀಚೆಗೆ ನಡೆಯಿತು. ಡಾ.ಶ್ರೀಧರ್ ಗುರೂಜಿ ಮತ್ತು ನಟಿ ಬೃಂದಾ ಆಚಾರ್ಯ ಈ ಆಡಿಯೋ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಎಂ.ಎಸ್.ತ್ಯಾಗರಾಜ್ ಅವರ ಸಂಗೀತ ಸಂಯೋಜನೆಯ ಈ ಹಾಡಿಗೆ ನಟ ಶರಣ್ ಅವರು ದನಿಯಾಗಿದ್ದಾರೆ. ಈ ಸಂದರ್ಭದಲ್ಲಿ ಮಾತನಾಡಿದ ನಿರ್ದೇಶಕರು ಈ ಟೈಟಲ್ ರಿಜಿಸ್ಟರ್ ಮಾಡಿಸಿದಾಗ ಸಾಕಷ್ಟು ಸಕಾರಾತ್ಮಕ, ನಕಾರಾತ್ಮಕ ಪ್ರತಿಕ್ರಿಯೆಗಳು ಬಂದವು. ಇದನ್ನೇ ಒನ್‌ಲೈನ್ ಕಥೆ ಮಾಡಿಕೊಂಡು ಸಿನಿಮಾ ಮಾಡಿದ್ದೇನೆ. ನಾಲ್ವರು ನಿರುದ್ಯೋಗಿ ಯುವಕರು ಕಾರಣವಿಲ್ಲದೆ ಸಾಲಮಾಡಿಕೊಂಡು ನಂತರ ಆ ಸಾಲಕ್ಕೆ ಬಡ್ಡಿ ಕಟ್ಟಲಾಗದೆ ಮತ್ತೆ ಸಾಲದ ಮೊರೆ ಹೋಗುತ್ತಾರೆ. ಕೊನೆಗೆ ತಮ್ಮಂತೆ ಸಾಲ ಮಾಡಿರುವವರನ್ನು ಒಗ್ಗೂಡಿಸಿ, ಸಾಲಗಾರರ ಸಹಕಾರ ಸಂಘ ಶುರು ಮಾಡಿ, ಸರ್ಕಾರಕ್ಕೆ ಒಂದಷ್ಟು ಬೇಡಿಕೆಗಳನ್ನು ಇಡುತ್ತಾರೆ. ಅದು ಏನು? ಸರ್ಕಾರ ಇವರ ಬೇಡಿಕೆಗಳಿಗೆ ಯಾವ ರೀತಿ ಸ್ಪಂದಿಸುತ್ತದೆ ಎಂಬುದನ್ನು ಚಿತ್ರದ ಮೂಲಕ ಹೇಳಲು ಪ್ರಯತ್ನಿಸಿದ್ದೇವೆ. ನೀವು ಮಾಡಿಕೊಡ ಸಾಲ ತೀರಿಸಬೇಕೆಂದರೆ ಈ ಸಿನಿಮಾ ನೋಡಬೇಕು. ಅದೇ ರೀತಿ ನಮ್ಮಲ್ಲಿ ಸದಸ್ಯರಾದರೆ ಸಾಲ ತೀರಿಸೋ ಜವಾಬ್ದಾರಿ ನಮ್ಮದಾಗಿರುತ್ತೆ ಇಂಥ ಎಲ್ಲಾ ಸನ್ನಿವೇಶಗಳು ಹಾಸ್ಯದಿಂದ ಕೂಡಿದೆ. ಜನವರಿ ವೇಳೆಗೆ ಚಿತ್ರವನ್ನು ರಿಲೀಸ್ ಮಾಡೋ ಯೋಜನೆಯಿದೆ ಎಂದರು.

ಅತಿಥಿಗಳಾಗಿ ಆಗಮಿಸಿದ್ದ ಶಿವರಾಜ್ ಕೆ.ಆರ್.ಪೇಟೆ, ದಿವ್ಯಶ್ರೀ ಮೋಹನ್, ಗೋವಿಂದೇಗೌಡ, ಮಡೆನೂರು ಮನು, ಸೋನು ಶ್ರೀನಿವಾಸಗೌಡ, ಸನತ್, ದಿವ್ಯಾ ಗೌಡ ಚಿತ್ರತಂಡಕ್ಕೆ ಶುಭ ಹಾರೈಸಿದರು. ಕೆಂಪೇಗೌಡ, ಜಾಲಿಜಾಲಿ ಜಾಕ್, ಲೋಕೇಶ್, ಪ್ರವೀಣಕುಮಾರ್, ಪೂಜಾ, ರಂಗಾಯಣ ರಘು, ಹೊನ್ನವಳ್ಳಿ ಕೃಷ್ಣ, ಲಕ್ಷೀಸಿದ್ದಯ್ಯ ಮುಂತಾದವರು ಚಿತ್ರದಲ್ಲಿ ನಟಿಸಿದ್ದಾರೆ.

ಸಾಲಗಾರರ ಸಹಕಾರ ಸಂಘ ಚಿತ್ರದಲ್ಲಿ ಐದು ಹಾಡುಗಳಿದ್ದು ವಿ. ಹರಿಕೃಷ್ಣ, ಜೋಗಿ ಪ್ರೇಮ್, ನವೀನ್ ಸಜ್ಜು ಹಾಗೂ ಎಂ.ಎಂ.ತ್ಯಾಗರಾಜ್ ಸಾಹಿತ್ಯ ರಚಿಸಿದ್ದಾರೆ. ಅನಿರುದ್ ಅವರ ಛಾಯಾಗ್ರಹಣ ಈ ಚಿತ್ರಕ್ಕಿದ್ದು, ಬೆಂಗಳೂರು, ತೀರ್ಥಹಳ್ಳಿ, ಚಿಕ್ಕಮಗಳೂರು ಸುತ್ತಮುತ್ತ ಈ ಚಿತ್ರಕ್ಕೆ 45 ದಿನಗಳ ಕಾಲ ಚಿತ್ರೀಕರಣ ನಡೆಸಲಾಗಿದೆ.

ಸಿನಿಪದಬಂಧ-601



ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು
ವಿಳಾಸ
ದೂರವಾಣಿ ಸಂಖ್ಯೆ

ಎಡದಿಂದ ಬಲಕ್ಕೆ

1. ಒಂದೇ ಹೆರಿಗೆಯಲ್ಲಿ ಹುಟ್ಟಿದ ಎರಡು ಮಕ್ಕಳು 6
3. ಅನಂತ್‌ನಾಗ್ - ಮಹಾಲಕ್ಷ್ಮಿ ನೇಯ್ದ ಬಲೆ 5
6. ಶಿವಣ್ಣನ ತಾಯಿ ಮನೆಯ ಸಂಪತ್ತು 6
9. ಪಲ್ಲವಿಯ ನಂತರ....... 5
10. ಜಯಮ್ಮನ ಮಗ ವಿಜಯ್ ಇದರಿಂದಲೇ ಖ್ಯಾತಿ 3
11. ಪ್ರೇಮೋತ್ಸವ ಚಿತ್ರದ ನಾಯಕಿ 4
12. ವಿಷ್ಣುವರ್ಧನ್ - ಅಂಬಿಕಾ ಒಳ್ಳೆಯ ಕಾಲದಿ ಸಂಗಮಿಸಿದ್ದಾರೆ 5
15. ಡಾ. ರಾಜ್‌ಕುಮಾರ್ ಕೋಪಗೊಂಡ ಕೇಸರಿ 6
18. ಅಂಬರೀಷ್, ಗೀತಾ, ಪಲ್ಲವಿ ಅಭಿನಯದ ಚಿತ್ರ 6
19. 'ಬಿಡು ಬಿಡು ಕೋಪವ _ _ _ ವು ಏತಕೆ.....', 3

ಮೇಲಿನಿಂದ ಕೆಳಕ್ಕೆ

1. ರವಿರಾಜ್ - ತಾರಾ ಅಭಿನಯದ ದೈವಿಕ ಪಾನೀಯದ ಹನಿ 5
2. ಸಾಕ್ಷಾತ್ಕಾರ ಚಿತ್ರದ ನಾಯಕಿ 3
4. ಲೈಲಾಳ ಜೊತೆಗಾರ 2
5. ಅದವಾನಿಯ ಮುಂದಿರುವವಳು 4
7. ಸೂರ್ಯವರ್ಧನ್ ಅಭಿನಯದ ಶ್ರೀಗಂಧ 5
8. ಕಾಶೀನಾಥನಿಗೆ ಆದ ಎಕ್ಸ್‌ಪೀರಿಯೆನ್ಸ್ 4
11. 'ಹುಟ್ಟುದೋರ್ ಯಾರು ಸಾಯ್ದೆ ಹೋದ್ರೆ.... ', ಗೀತೆಯ ಚಿತ್ರ 5
12. ಚಿರಬಾಂಧವ್ಯ ಚಿತ್ರದ ನಾಯಕಿ 3
13. ಮಗಳ ಗಂಡ ಜಗ್ಗೇಶ್ ಸೇನೆಯವನು 4
14. ವಿಷ್ಣುದಾದಾಗಿರುವ ಬಿರುದು 5
16. ದರ್ಶನ್ - ರಮ್ಯ ಅಭಿನಯದ ಚಿತ್ರ 2
17. ಸಂಪಿಗೆಯೊಂದಿಗೆ ಬಂದ ಹೂವು 3

ಸಿನಿ ಪದಬಂಧ 600ರ ಉತ್ತರ

ಮೊ	ಗ್ಗಿ	ನ	ಮ	ನ	ಸು		ವಂ	ಶ	ಜ್ಯೋ	ತಿ
ದ			ದ					ನಿ		ರು
ಲ	ವ್	ಇ	ನ್	ಮಂ	ಡ್ಯ		ಪ			ಪ
ರಾ				ಜಿ		ಪ	ದ್ಮ	ವಾ	ಸಂ	ತಿ
ತ್ರಿ	ಶೂ	ಲ		ನ			ವ್ಯೂ			
				ತೆ		ಸೇ	ಹ	ಸ್ನೇ	ಡು	
ಮಿ	ನು	ಗು	ತಾ	ರೆ		ಡಿ				ಕಂ
ಲ		ಣ			ಕ	ನ	ಸಿ	ನ	ಲೋ	ಕ
ನ		ವಂ		ಮಾ		ಸಂ		ಳ		ಣ
	ಹಂ	ತ	ಕ	ನ	ಸಂ	ಚು				ಭಾ
				ಸ				ಅ	ಯೋ	ಗ್ಯ

ವಿಜೇತರು: ಪ್ರತಿಭ ಎಸ್., #73, ಸಾಯಿಬಾಬಾ ಸ್ಕೂಲ್, ಜಯಲಕ್ಷ್ಮೀಪುರಂ, ಮೈಸೂರು

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಮೈ ನೇಮ್ ಈಸ್ ಕೆಡಿ ಟ್ರೇಲರ್ ಬಿಡುಗಡೆ



ಕೆ.ಜೆ.ಚಿಕ್ಕು ಅವರ ನಿರ್ದೇಶನದ 'ಮೈ ನೇಮ್ ಈಸ್ ಕೆಡಿ' ಚಿತ್ರದ ಟ್ರೈಲರನ್ನು ಇತ್ತೀಚೆಗೆ ಫಿಲಂ ಛೇಂಬರ್ ಮಾಜಿ ಅಧ್ಯಕ್ಷ ಬಾ.ಮ. ಹರೀಶ್, ನಿರ್ದೇಶಕ ಟೇ.ಶಿ.ವೆಂಕಟೇಶ್ ಬಿಡುಗಡೆ ಮಾಡಿದರು. ಎಸ್‌ಎಸ್‌ಕೆಬಿ ಪ್ರೊಡಕ್ಷನ್ ಅಡಿ ವೆಂಕಟೇಶ್.ಡಿ. ಚಿತ್ರದ ನಿರ್ಮಾಪಕರು. ಚಿತ್ರದಲ್ಲಿ ಆರ್ಯನ್ ವೆಂಕಟೇಶ್ ನಾಯಕನಾಗಿ ನಟಿಸಿದ್ದು, ಭವಾನಿ ನಾಯಕಿ ಪಾತ್ರ ನಿರ್ವಹಿಸಿದ್ದಾರೆ.

ವೇದಿಕೆಯಲ್ಲಿ ಚಿತ್ರದ ನಾಯಕ ಆರ್ಯನ್ ವೆಂಕಟೇಶ್ ಮಾತನಾಡುತ್ತಾ, ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೆಲಸ ಮಾಡಿ ಬಂದ ಹಣದಿಂದ ಚಿತ್ರ ಮಾಡಿದ್ದೇನೆ. ಕೆಡಿ ಎಂದರೆ ಕನಕನಹಳ್ಳಿ ದಾಸೆಗೌಡರ ಮಗ. ಏಳನೇ ತರಗತಿ ಓದುತ್ತಿರುವ ಹುಡುಗನೊಬ್ಬ ಅನಾರೋಗ್ಯದಿಂದ ಬಳಲುತ್ತಿದ್ದ ತಾಯಿಯನ್ನು ಉಳಿಸಿಕೊಳ್ಳಲು ಶಾಸಕನ ಬಳಿ ಸಹಾಯ ಕೇಳುತ್ತಾನೆ. ಆದರೆ ಆ ಶಾಸಕ ಹುಡುಗನನ್ನು ಅವಮಾನಿಸಿ ಕಳುಹಿಸುತ್ತಾನೆ. ಇದರಿಂದ ಸಿಟ್ಟಿಗೆದ್ದ ಆ ಹುಡುಗ ನಾನು ಮುಂದೆ ಒಳ್ಳೆಯ ರೀತಿಯಲ್ಲಿ ಹಣ ಗಳಿಸಿ ಎಂಎಲ್‌ಎ ಆಗುತ್ತೇನೆ ಎಂದು ಪ್ರತಿಜ್ಞೆ ಮಾಡುತ್ತಾನೆ. ಆ ಹಾದಿಯಲ್ಲಿ ಆತ ಯಾವ ರೀತಿಯ ಸವಾಲುಗಳನ್ನು ಎದುರಿಸುತ್ತಾನೆ ಎನ್ನುವುದೇ ಮೈ ನೇಮ್ ಈಸ್ ಕೆಡಿ ಚಿತ್ರದ ಕಥೆ ಎಂದರು.

ನಿರ್ದೇಶಕ ಕೆ.ಜೆ.ಚಿಕ್ಕು ಮಾತನಾಡುತ್ತಾ, ಇದೊಂದು ಕಾಮಿಡಿ ಡ್ರಾಮಾ ಸನ್ನಿವೇಶಗಳನ್ನು ಒಳಗೊಂಡ ಚಿತ್ರ. ಕನಕಪುರ, ಹೆಸರುಘಟ್ಟ, ಆನೇಕಲ್, ಬೆಂಗಳೂರು ಸುತ್ತಮುತ್ತ 30 ದಿನಗಳ ಕಾಲ ಚಿತ್ರೀಕರಣ ನಡೆಸಲಾಗಿದೆ. ಹಿರಿಯ ನಟ ಹೊನ್ನವಳ್ಳಿ ಕೃಷ್ಣ, ಗಿರೀಶ್ ಜತ್ತಿ, ವಿಶ್ವ, ಯತಿರಾಜ್, ಅರಸು ಮಹಾರಾಜ್, ಸುಪ್ರೀತ್ ಕಾಟಿ, ರೋಹಿಣಿ, ಮುಂತಾದವರು ನಟಿಸಿದ್ದಾರೆ.

ಚುನಾವಣೆಗೆ ಚುನಾವಣಾಧಿಕಾರಿ ಗೈರು

ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ಬಾರದ ಹಿನ್ನೆಲೆಯಲ್ಲಿ ನಡೆಯದ ಚುನಾವಣೆ; ಕ್ರಮಕ್ಕೆ ಆಗ್ರಹ



ಕಸಬಾ ಕೃಷಿ ಪತ್ತಿನ ಸಹಕಾರ ಸಂಘದ ಪದಾಧಿಕಾರಿಗಳು ಮಾತನಾಡುತ್ತಿರುವುದು.

ಹೆಚ್.ಡಿ.ಕೋಟೆ: ಹೆಚ್.ಡಿ.ಕೋಟೆ ಕಸಬಾ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಉಪಾಧ್ಯಕ್ಷರ ಚುನಾವಣೆಗೆ ಚುನಾವಣಾಧಿಕಾರಿ ರೇಣುಕಾ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ಗೈರಾಗಿರುವ ಕಾರಣ ಚುನಾವಣೆ ನಡೆಯದೆ ಮುಂದೂಡಲ್ಪಟ್ಟಿದೆ.

ಚುನಾವಣಾಧಿಕಾರಿ ರೇಣುಕಾ ಅವರು ಚುನಾವಣಾ ದಿನಾಂಕ ನಿಗದಿಗೊಳಿಸಿ ನಿರ್ದೇಶಕರುಗಳಿಗೆ ನೊಟೀಸ್ ಜಾರಿ ಮಾಡಿ ಚುನಾವಣೆಗೆ ಹಾಜರಾಗುವಂತೆ ಸೂಚಿಸಿದ್ದರು ಆದರೆ ಅವರೇ ಚುನಾವಣೆಗೆ ಬಾರದೆ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ಗೈರಾಗಿದ್ದು ಚುನಾವಣಾ ಆಕಾಂಕ್ಷಿಗಳ ಆಕ್ರೋಶಕ್ಕೆ ಕಾರಣವಾಗಿದೆ.

ಈ ಸಂಬಂಧ ಪತ್ರಿಕಾಗೋಷ್ಠಿ ನಡೆಸಿದ ಕಸಬಾ ಕೃಷಿ ಪತ್ತಿನ ಸಹಕಾರ ಸಂಘದ ಬೆಳಗನಹಳ್ಳಿ ಶಿವರಾಜ್ ಅವರು ಚುನಾವಣೆಗೆ ಗೈರಾದ ಚುನಾವಣಾಧಿಕಾರಿ ರೇಣುಕಾ ಅವರನ್ನು ಅಮಾನತ್ತುಗೊಳಿಸುವಂತೆ ಆಗ್ರಹಿಸಿದ್ದಾರೆ.

ಇದಕ್ಕೂ ಮುನ್ನ ನಡೆದಿದ್ದ ನಿರ್ದೇಶಕರ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ಶಿವರಾಜು ಬಣದಿಂದ 9 ಮತ್ತು ದಶರಥ ಬೆಂಬಲಿತ 3 ಮಂದಿ ಜಯಗಳಿಸಿದ್ದರು. ಈ ಸಂಬಂಧ ಚುನಾವಣಾ ಅಧಿಕಾರಿಯಾಗಿರುವ ರೇಣುಕಾ ಅವರು ಎಲ್ಲಾ ನಿರ್ದೇಶಕರಿಗೂ ನೋಟಿಸ್ ನೀಡಿ ನ.4ರಂದು ಚುನಾವಣೆ ನಿಗದಿ ಮಾಡಿದ್ದರು.

ನಿಗದಿಯಾಗಿದ್ದ ಚುನಾವಣಾ ದಿನದಂದು ಎಲ್ಲಾ ಸದಸ್ಯರು ಚುನಾವಣೆಗೆ ಆಗಮಿಸಿದ್ದೆವು. ಆದರೆ ಚುನಾವಣಾಧಿಕಾರಿ ರೇಣುಕಾ ಯಾವುದೇ ಸೂಚನೆಯನ್ನು ನೀಡದೇ ಚುನಾವಣೆಗೆ ಆಗಮಿಸದೆ ಕರ್ತವ್ಯ ಲೋಪವನ್ನೆಸಗಿದ್ದಾರೆ, ಇದಲ್ಲದೆ ಅಂದು ತಮ್ಮ ಮೊಬೈಲನ್ನು ಸ್ವಿಚ್ ಆಫ್ ಮಾಡಿಕೊಂಡು ಗೈರುಹಾಜರಿಗೆ ನಿಖರ ಮಾಹಿತಿಯನ್ನು ನೀಡದೆ ಕರ್ತವ್ಯ ಲೋಪ ಎಸಗಿರುವ ಅವರನ್ನು, ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಶಾಸಕ ಅನಿಲ್ ಚಿಕ್ಕಮಾದು ಅವರು ಚುನಾವಣಾಧಿಕಾರಿ ರೇಣುಕಾ ಅವರನ್ನು ಅಮಾನತುಗೊಳಿಸಬೇಕು. ಮುಂದಿನ ದಿನಗಳಲ್ಲಿ ಚುನಾವಣೆ ನಡೆಸಲು ಅವಕಾಶ ಮಾಡಿಕೊಡಬೇಕು. ಇಲ್ಲದಿದ್ದರೆ ಉಗ್ರ ಪ್ರತಿಭಟನೆ ಮಾಡಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ತಾಲೂಕು ಜೆಡಿಎಸ್ ಅಧ್ಯಕ್ಷ ರಾಜೇಂದ್ರ ಮಾತನಾಡಿ, ನಾನು ಚುನಾವಣಾಧಿಕಾರಿ ರೇಣುಕಾ ಅವರಿಗೆ ದೂರವಾಣಿ ಕರೆ ಮಾಡಿ ಈ ಚುನಾವಣೆ ವಿಚಾರದಲ್ಲಿ ನಿಮಗೆ ಚುನಾವಣೆಗೆ ಬಾರದ ಹಾಗೆ ನಿಮಗೆ ಯಾರಾದರೂ ಒತ್ತಡ ನೀಡಿದ್ದಾರಾ ಎಂದು ಕೇಳಿದೆ ಅದಕ್ಕೆ ಅವರು ಇಲ್ಲ ನನಗೆ ಯಾರು ಒತ್ತಡ ನೀಡಿಲ್ಲ, ನನಗೆ ಆರೋಗ್ಯ ಸರಿ ಇಲ್ಲದ ಕಾರಣ ಚುನಾವಣೆಗೆ ಬರಲು ಸಾಧ್ಯವಾಗಿಲ್ಲ ಎಂದು ತಿಳಿಸಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಕೋಟೆ, ಸರಗೂರು ಜೆಡಿಎಸ್ ಅಧ್ಯಕ್ಷರುಗಾಳಾದ ರಾಜೇಂದ್ರ, ಗೋಪಾಲಸ್ವಾಮಿ, ನಿರ್ದೇಶಕರಾದ ದೇವನಾಯಕರು, ಬೀರಪ್ಪ ನಾಗರಾಜು, ಗುಂಡತೂರ್ ಜಿ.ಕೆ.ಲಕ್ಷ್ಮಿ ಪ್ರಸಾದ, ಶಿವಕುಮಾರ್, ಚಿಕ್ಕತಿಮ್ಮನಾಯಕರು, ಮಹೇಶ್, ಕರವೇ ನಟರಾಜ್ ಹಾಜರಿದ್ದರು.

ಔಷಧ ರಹಿತ ಪರ್ಯಾಯ ಉಚಿತ ಚಿಕಿತ್ಸಾ ಶಿಬಿರ

ಕೆ.ಆರ್.ನಗರ: ಮನುಷ್ಯರಲ್ಲಿನ ವಿವಿಧ ಕಾಯಿಲೆಗಳಿಗೆ ಔಷಧ ರಹಿತ ಪರ್ಯಾಯ ಚಿಕಿತ್ಸೆ ನೀಡಿ ಗುಣಪಡಿಸಲಾಗಿದೆ ಎಂದು ಹೀಲರ್ ಜಿ.ಎನ್.ಪೂರ್ಣಿಮಾ ಹೇಳಿದರು.

ಪಟ್ಟಣದ ಸುಕೃತ ಕ್ರೀಡಾಸಂಸ್ಥೆ ಸಭಾಂಗಣದಲ್ಲಿ ಬಸವ ಅಕ್ಯೂ ಅಕಾಡೆಮಿ ವತಿಯಿಂದ ನಡೆದ ಔಷಧ ರಹಿತ ಪರ್ಯಾಯ ಉಚಿತ ಚಿಕಿತ್ಸಾ ಶಿಬಿರದಲ್ಲಿ ಮಾತನಾಡಿದರು.

ನಮ್ಮೊಂದಿಗೆ ತರಬೇತಿ ಪಡೆದ ವಿವಿಧ ಜಿಲ್ಲೆಯ 16 ಹೀಲರ್ಸ್ ಶಿಬಿರದಲ್ಲಿ ಭಾಗವಹಿಸಿದ್ದಾರೆ. ನಮ್ಮ ಚಿಕಿತ್ಸೆಗೆ ರಾಜ್ಯದಲ್ಲೂ ಮನ್ನಣೆ ದೊರೆಯಬೇಕು ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದೇವೆ ಎಂದರು.

ಅಕ್ಯುಪ್ರೆಷರ್, ಬಣ್ಣ ಚಿಕಿತ್ಸೆ, ಬಣ್ಣ ಸಂಖ್ಯಾಶಾಸ್ತ್ರ, ಅಕ್ಯುಪಂಕ್ಚರ್, ಆರಿಕ್ಯುಲರ್, ಕಾಳಿನ ಚಿಕಿಯಿಂದ ಹಲವು ಕಾಯಿಲೆ ಗುಣಪಡಿಸಬಹುದು ಎಂದು ತಿಳಿಸಿದರು. ಸಂಘದ ಅಧ್ಯಕ್ಷ ರಾಜಾ ಶ್ರೀಕಾಂತ್, ಕಾರ್ಯದರ್ಶಿ ಕೆ.ಸಿ.ನಾಗರಾಜ್, ಖಜಾಂಚಿ ವೆಂಕಟೇಶ್ ಪ್ರಸಾದ್, ನಿರ್ದೇಶಕರಾದ ಆರ್. ಜಿ.ಮಹದೇವ್, ಕೆ.ಟಿ.ಸುರೇಶ್, ಡಿ.ಕೆ.ರಮೇಶ್, ಬಾಲರಾಜ್, ಆರ್.ಎಸ್.ಪುಟ್ಟಬಸಪ್ಪ, ವೈ.ಬಿ. ಗಣೇಶ್, ಆರ್.ಜಿ.ಪ್ರಕಾಶ್, ಚರಣ್, ಸುಭಾಷ್, ಸುಂದರೇಶ್ ಪಟೇಲ್, ರಾಜು ಪಟೇಲ್, ಯೋಗಗುರು ಪಿ.ಆರ್.ವಿಶ್ವನಾಥ ಶೆಟ್ಟಿ, ಕಂತೇನಹಳ್ಳಿ ಶಮಂತ್ ಇದ್ದರು.

ನಾಳೆ ನರಸೀಪುರದಲ್ಲಿ ಕನಕದಾಸರ ಜಯಂತಿ

ಭವ್ಯ ಮೆರವಣಿಗೆ, ಮುಖ್ಯಮಂತ್ರಿ, ಸ್ವಾಮೀಜಿ ಭಾಗಿ



ತಿ.ನರಸೀಪುರ, ನ.6– ಶ್ರೀ ಭಕ್ತ ಕನಕದಾಸರ ಜಯಂತ್ಯೋತ್ಸವ ಕಾರ್ಯಕ್ರಮವನ್ನು ನ.8ರಂದು ಪಟ್ಟಣದಲ್ಲಿ ಆಚರಿಸಲಾಗುತ್ತಿದ್ದು, ಅಂದು ಪಟ್ಟಣದ ಶ್ರೀ ಗುಂಜಾ ನರಸಿಂಹಸ್ವಾಮಿ ದೇವಸ್ಥಾನದ ಆವರಣದಲ್ಲಿ ನಂದಿಧ್ವಜದ ಪೂಜೆ ಮಾಡುವ ಮೂಲಕ ಮೆರವಣಿಗೆ ನಡೆಸಲಾಗುವುದು.

ಬಸವಗಳ ಮೆರವಣಿಗೆ, ಶ್ರೀ ವೀರೇಶ್ವರ ಪೂಜಾ ಕುಣಿತ, ಡೊಳ್ಳು ಕುಣಿತ, ವೀರಗಾಸೆ ಕುಣಿತ, ಕಂಸಾಳೆ ಕುಣಿತ, ಗೊರವರ ಕುಣಿತ, ಶಾಲಾ ಮಕ್ಕಳಿಂದ ಕಳಸ ಮೆರವಣಿಗೆ, ದೊಣ್ಣೆ ವರಸೆ ಇನ್ನು ಮುಂತಾದ ಹಲವು ಆಕರ್ಷಣೀಯ ಕಲಾತಂಡಗಳಿಂದ ಕೂಡಿದ ಶ್ರೀ ಭಕ್ತ ಕನಕದಾಸರ ಭಾವಚಿತ್ರದ ಮೆರವಣಿಗೆಯು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ತಾಲೂಕು ಕುರುಬರ ಸಂಘದ ಆವರಣವನ್ನು ತಲುಪುವುದು.

ವೇದಿಕೆ ಕಾರ್ಯಕ್ರಮದಲ್ಲಿ ಶ್ರೀಶ್ರೀಶ್ರೀ ಶಿವಾನಂದಪುರಿ ಮಹಾಸ್ವಾಮೀಜಿ ಹಾಗೂ ಶ್ರೀ ದೊರಸ್ವಾಮೀಜಿಗಳು ದಿವ್ಯ ಸಾನ್ನಿಧ್ಯ ವಹಿಸುವರು. ಮುಖ್ಯಮಂತ್ರಿ ಸಿದ್ಧರಾಮಯ್ಯ ಕಾರ್ಯಕ್ರಮ ಉದ್ಘಾಟಿಸುವರು. ಅಧ್ಯಕ್ಷತೆಯನ್ನು ಸಮಾಜ ಕಲ್ಯಾಣ ಸಚಿವ ಡಾ. ಹೆಚ್.ಸಿ.ಮಹದೇವಪ್ಪರವರು ವಹಿಸಲಿದ್ದಾರೆ. ಲೋಕಸಭಾ ಸದಸ್ಯ ಸುನೀಲ್ ಬೋಸ್, ವಿಧಾನಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ, ಡಾ.ಡಿ. ತಿಮ್ಮಯ್ಯ ಅವರುಗಳು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

ತಾಲೂಕಿನ ಎಲ್ಲಾ ಚುನಾಯಿತ ಪ್ರತಿನಿಧಿಗಳು, ಸಂಘ ಸಂಸ್ಥೆಗಳ ಅಧ್ಯಕ್ಷರು ಮತ್ತು ಪದಾಧಿಕಾರಿಗಳು, ಜನಾಂಗದ ಮುಖಂಡರುಗಳು ಹಾಗೂ ಸಾರ್ವಜನಿಕ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿ ಕೊಡಬೇಕೆಂದು ತಾಲೂಕು ಕುರುಬರ ಸಂಘದ ಅಧ್ಯಕ್ಷ ಮನ್ನೆಹುಂಡಿ ಮಹೇಶ್, ಕಾರ್ಯದರ್ಶಿ ಕೊತ್ತೇಗಾಲ ಬಸವರಾಜು ಮನವಿ ಮಾಡಿದ್ದಾರೆ

ತಿ.ನರಸೀಪುರ ಪಟ್ಟಣದಲ್ಲಿ ನಡೆಯುವ ಕನಕ ಜಯಂತಿ ಮಹೋತ್ಸವಕ್ಕೆ ತಾಲೂಕಿನ ಕುರುಬ ಸಮುದಾಯದ ಯಜಮಾನರು ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಆಲಗೂಡು ಗ್ರಾಪಂ ಮಾಜಿ ಉಪಾಧ್ಯಕ್ಷ ಹೆಳವರ ಹುಂಡಿ ಎಚ್.ಬಿ.ಚಿಕ್ಕನಂಜಯ್ಯ ಮನವಿ ಮಾಡಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರ ಕ್ಷೇತ್ರವಾದ ವರುಣ ಹಾಗೂ ಟಿ.ನರಸೀಪುರ ವಿಧಾನ ಸಭಾ ಕ್ಷೇತ್ರದಲ್ಲಿ ನಡೆಯುವ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಹಾಗೂ ತಾಲೂಕು ಕುರುಬರ ಸಂಘದ ವತಿಯಿಂದ ನಡೆಯುವ ಕಾರ್ಯಕ್ರಮಕ್ಕೆ ಸಮಾಜದ ಬಂಧುಗಳು, ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ತಿಳಿಸಿದ್ದಾರೆ.

ನ.12ರಂದು ಬೆಟ್ಟದಪುರದಲ್ಲಿ ವಿದ್ಯಾರ್ಥಿ ಕವಿಗೋಷ್ಠಿ

ಬೆಟ್ಟದಪುರ: ಇಲ್ಲಿನ ಅನಿಕೇತನ ಪದವಿ ಪೂರ್ವ ಕಾಲೇಜಿನ ವತಿಯಿಂದ ನ.12ರಂದು ಬೆಳಿಗ್ಗೆ 10.30ರಿಂದ ಕನ್ನಡ ರಾಜ್ಯೋತ್ಸವ, ಕನಕ ಜಯಂತಿ ಅಂಗವಾಗಿ ಪ್ರೌಢಶಾಲಾ ಹಾಗೂ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳ ಕವಿಗೋಷ್ಠಿ ಏರ್ಪಡಿಸಲಾಗಿದೆ.

ವಿದ್ಯಾರ್ಥಿಗಳು ಯಾವುದೇ ವಿಷಯಕ್ಕೆ ಸಂಬಂಧಿಸಿದ ವಿಷಯದ ಬಗ್ಗೆ ಕವಿತೆ ರಚಿಸಿ ವಾಚನ ಮಾಡಬಹುದಾಗಿದೆ. ಭಾಗವಹಿಸುವ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ, ಪ್ರಯಾಣ ವೆಚ್ಚ ಹಾಗೂ ಪುಸ್ತಕ ನೀಡಲಾಗುವುದು. ಮೈಸೂರು ವಿವಿ ವಿಶ್ರಾಂತ ಪ್ರಾಧ್ಯಾಪಕರಾದ ಕೆ.ಸಿ.ಬಸವರಾಜು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ ಅಪ್ಪಣ್ಣ ಅಧ್ಯಕ್ಷತೆ ವಹಿಸಲಿದ್ದಾರೆ. ಕವಿ ಗೋಷ್ಠಿಯಲ್ಲಿ ಪಾಲ್ಗೊಳ್ಳುವ ವಿದ್ಯಾರ್ಥಿಗಳು ತಮ್ಮ ಹೆಸರನ್ನು ಮೊ.7338534748 ಮೂಲಕ ನೋಂದಾಯಿಸಿಕೊಳ್ಳಲು ಕೋರಲಾಗಿದೆ.

ಹುಣಸೂರಲ್ಲಿ ಫುಡ್‌ಕೋರ್ಟ್ ಸ್ಥಾಪನೆಗೆ ಅಧಿಕಾರಿಗಳ ಹಿಂದೇಟು

ಸ್ಥಳದ ಸರ್ವೇ ನಡೆಸದ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಶಾಸಕ ಜಿ.ಡಿ.ಹರೀಶ್‌ಗೌಡ

ಹುಣಸೂರು, ನ.6– ಅನೇಕ ದಿನಗಳಿಂದ ನಗರದಲ್ಲಿ ಚರ್ಚೆಯಲ್ಲಿರುವ ಫುಡ್ ಕೋರ್ಟ್ ಸ್ಥಾಪನೆಗೆ ಗುರುತಿಸಿರುವ ಜಾಗಕ್ಕೆ ಸಂಬಂಧಿಸಿದಂತೆ ನಗರಸಭೆ ಅಧಿಕಾರಿಗಳು ಸರ್ವೆ ಕಾರ್ಯ ನಡೆಸಲು ಹಿಂದೇಟು ಹಾಕುತ್ತಿದ್ದು ಶಾಸಕ ಜಿ.ಡಿ.ಹರೀಶ್ ಗೌಡ ನಗರಸಭಾ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡು ಅಧಿಕಾರಿಗಳ ಈ ನಡೆ ಸರಿಯಲ್ಲ ಎಂದರು.

ನಗರಸಭೆಯ ಡಾ.ಬಿ.ಅರ್.ಅಂಬೇಡ್ಕರ್ ಸಭಾಂಗಣದಲ್ಲಿ ಶಾಸಕ ಜಿ.ಡಿ.ಹರೀಶ್ ಗೌಡರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿ ಲಕ್ಷ್ಮಿಕಾಂತ್ ರೆಡ್ಡಿ ಹಾಗೂ ಜಿ.ಪಂ ಸಿಇಓ ಮುಖೇಶ್ ಕುಮಾರ್ ಸಮ್ಮುಖದಲ್ಲಿ ನಡೆದ ತ್ರೈಮಾಸಿಕ ಕೆಡಿಪಿ ಸಭೆಯಲ್ಲಿ ನಗರದ ಸೇತುವೆ ರಸ್ತೆಯಲ್ಲಿರುವ ಜಾಗ ನಗರಸಭೆ ಅಥವಾ ಕಾಫಿವರ್ಕ್ಸ್‌ಗೆ ಸೇರಿದೆಯೇ ಎಂದು ಖಚಿತ ಪಡಿಸಿಕೊಳ್ಳಲು ಸರ್ವೆ ಕಾರ್ಯ ನಡೆಸಿ ಗುರುತಿಸಿ ಎಂದು ಈ ಹಿಂದೆ ಸಭೆಯಲ್ಲಿ ತಿಳಿಸಿದ್ದೆ. ಏನಾಯಿತು ಎಂದು ಪೌರಾಯುಕ್ತರನ್ನು ಪ್ರಶ್ನಿಸಿದಾಗ ಪೌರಾಯುಕ್ತರಾದ ಮಾನಸ ಮಾತನಾಡಿ, ಜಾಗದ ಸರ್ವೆ ಕಾರ್ಯ ನಡೆಸಲು ತೆರಳಿದ ವೇಳೆ ಕಾಫಿವರ್ಕ್ಸ್‌ನವರು ನ್ಯಾಯಾಲಯದ ಮೆಟ್ಟಿಲೇರಿದ್ದು ತಡೆಯಾಜ್ಞೆ ಇದೆ ಎಂದರು.

ತಡೆಯಾಜ್ಞೆಯ ಪ್ರತಿ ನಿಮ್ಮಲಿದೆಯೇ ಎಂದು ಪ್ರಶ್ನಿಸಿದಾಗ ಕಂದಾಯ ಅಧಿಕಾರಿ ಸಿದ್ದಯ್ಯ ಮಧ್ಯ ಪ್ರವೇಶಿಸಿ ನ್ಯಾಯಾಲಯದ ಮೆಟ್ಟಿಲು ಹತ್ತಿದ್ದಾರೆ ಹೊರತು ತಡೆಯಾಜ್ಞೆ ಪ್ರತಿ ನಮ್ಮಲಿಲ್ಲ ಎಂದು ತಿಳಿಸಿದರು. ಇದರಿಂದ ಅಸಮಾಧಾನಗೊಂಡ ಶಾಸಕರು ಇಡಿ ಸಭೆಯನ್ನು ತಪ್ಪುದಾರಿಗೆ ಎಳೆಯುತ್ತಿದ್ದಿರಾ ಎಂದು ಪೌರಾಯುಕ್ತರನ್ನು ತರಾಟೆಗೆ ತೆಗೆದುಕೊಂಡರು.

ವಾರದ ಹಿಂದೆ ನಡೆದ ಕೌನ್ಸಿಲ್ ಸಭೆಯಲ್ಲೂ ಇದೇ ಮಾತನ್ನು ಹೇಳಿ ಇಡೀ ಸಭೆಯನ್ನು ತಪ್ಪುದಾರಿಗೆ ಎಳೆದಿದ್ದೀರಲ್ಲ ಸರಿನಾ?



ಹುಣಸೂರು ನಗರಸಭೆಯಲ್ಲಿ ಶಾಸಕ ಜಿ.ಡಿ.ಹರೀಶ್ ಗೌಡರ ಅಧ್ಯಕ್ಷತೆಯಲ್ಲಿ ನಡೆದ ಕೆಡಿಪಿ ಸಭೆ.

ಕಾಫಿವರ್ಕ್ಸ್‌ಗೆ ಇರುವ ಜಾಗದ ಸಮಗ್ರ ವರದಿ ನನಗೆ ಬೇಕು. ಸಂಪೂರ್ಣವಾಗಿ ಸರ್ವೆ ನಡೆಸಿ ವರದಿ ನೀಡಿ ಎಂದು ಸೂಚಿಸಿದರು.

ಜಿಲ್ಲಾಧಿಕಾರಿ ಲಕ್ಷ್ಮಿಕಾಂತರೆಡ್ಡಿ ಮಧ್ಯ ಪ್ರವೇಶಿಸಿ ಅವರು ನ್ಯಾಯಾಲಯಕ್ಕೆ ಹೋದರೆ ನಿಮಗೇನು ಸಮಸ್ಯೆ? ಸರ್ವೆ ಕಾರ್ಯ ಮಾಡಲು ನಿಮಗೇನು ಅಡ್ಡಿ ಎಂದು ಪ್ರಶ್ನಿಸಿ ಸರ್ವೆ ಇಲಾಖೆ ಎಡಿಎಲ್‌ಅರ್ ಮತ್ತು ತಹಸೀಲ್ದಾರ್ ಅವರಿಗೆ ಈ ಕೂಡಲೆ ಸರ್ವೆ ಕಾರ್ಯ ನಡೆಸಲು ಕ್ರಮವಹಿಸಿ ಎಂದು ಸೂಚಿಸಿದರು.

ಸರ್ಕಾರ ಇದೀಗ ಹೊರಡಿಸಿರುವ ನೂತನ ಅದೇಶದಲ್ಲಿ ನಾಗರಹೊಳೆ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯ ಗಡಿಯಿಂದ ಒಂದು ಕಿ.ಮೀ ವ್ಯಾಪ್ತಿಯಲ್ಲಿ ಮಾತ್ರ ಪರಿಸರ ಸೂಕ್ಷ್ಮ ವಲಯವೆಂದು ಘೋಷಿಸಿದ್ದು ಇನ್ನು ಮುಂದೆ ಇದನ್ನು ಹೊರತುಪಡಿಸಿ ಯಾರು ಇಲಾಖೆ ಅನುಮತಿ ಪಡೆಯಬೇಕಿಲ್ಲ ಎಂದು ಗ್ರಾಪಂ ಅಧಿಕಾರಿಗಳಿಗೆ ಮತ್ತು ಕಂದಾಯ ಸಿಬ್ಬಂದಿಗಳಿಗೆ ಈ ಕುರಿತು ಮಾಹಿತಿ ನೀಡಿರೆಂದು ಅಧಿಕಾರಿಗಳಿಗೆ ಸೂಚಿಸಿದರು.

ಚುನಾವಣೆ ಏಕೆ ನಡೆಸಿಲ್ಲ: ತಾಲೂಕಿನ ಹನ್ನೆರಡು ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘಗಳ ಅವಧಿ ಪೂರ್ಣಗೊಂಡು 'ಎಂಟು ತಿಂಗಳಾದರೂ ಚುನಾವಣೆ ಏಕೆ ನಡೆಸಿಲ್ಲ. ಅಡಳಿತಾಧಿಕಾರಿಗಳಿಗೆ 195 ದಿನಗಳ ಅವಧಿ ಮಾತ್ರ ಅಡಳಿತ ನಡೆಸಲು ಅವಕಾಶವಿದೆ. ಹೀಗಿದ್ದರೂ ಇನ್ನೂ ಮುಂದುವರೆದಿದ್ದಾರಲ್ಲ ನಿಮಗೆ ಈ ಅಧಿಕಾರ ನೀಡಿದವರ‍್ಯಾರು?. ಈ ಅವಧಿಯಲ್ಲಿ ಅಕ್ರಮಗಳು ನಡೆದಿದ್ದರೆ ಇದಕ್ಕೆ ಸಹಕಾರ ಇಲಾಖೆ ಅಧಿಕಾರಿಗಳೇ ಹೊಣೆಗಾರರಾಗುತ್ತಾರೆಯೇ ಹೊರತು ಎಂಡಿ ಅಲ್ಲ ಎಂಬುದು ನಿಮಗೆ ತಿಳಿದಿರಲಿ ಎಂದು ಶಾಸಕರು ಸಹಕಾರ ಇಲಾಖೆಯ ಅಧಿಕಾರಿಗಳ ಮೇಲೆ ಗರಂ ಅದರು.

ತಾಲೂಕಿನ ಹೆಮ್ಮಿಗೆ ಕಾಲೋನಿಯಲ್ಲಿ ವಾಸಿಸುವ ಸೋಲಿಗ ಸಮುದಾಯದ ಗಿರಿಜನ ವಾಸಿಗಳು ಮನೆಗಳಿಗೆ ವಿದ್ಯುತ್ ಇಲ್ಲದೆ ಕತ್ತಲಲ್ಲಿ ಜೀವನ ಸಾಗಿಸುತ್ತಿದ್ದಾರೆ. ಅವರಿಗೆ ವಿದ್ಯುತ್ ಸಂಪರ್ಕ ನೀಡಿಲ್ಲ ಯಾಕೆ ಎಂದು ಸೆಸ್ಕ್ ಇಇ ಸುನೀಲ್ ಅವರನ್ನು ಪ್ರಶ್ನಿಸಿದಾಗ ಈ ಬಗ್ಗೆ ಮಾಹಿತಿ ಪಡೆದು ಒಂದು ತಿಂಗಳ ಒಳಗಾಗಿ ಹಾಡಿ ಜನರ ಮನೆಗಳಿಗೆ ವಿದ್ಯುತ್ ಸಂಪರ್ಕ ನೀಡುವುದಾಗಿ ತಿಳಿಸಿದರು.

ಸಭೆಯಲ್ಲಿ ಡಿಹೆಚ್‌ಓ ಕುಮಾರಸ್ವಾಮಿ, ಪ್ರಭಾರ ಡಿಡಿಪಿಐ ಅನಂತರಾಜ್, ಉಪವಿಭಾಗಧಿಕಾರಿ ವಿಜಯಕುಮಾರ್, ತಹಸೀಲ್ದಾರ್ ಮಂಜುನಾಥ್, ತಾಪಂ ಅಡಳಿತಾಧಿಕಾರಿ ಸಿದ್ದಗಂಗಮ್ಮ ಇಓ ಕೆಹೊಂಗಯ್ಯ, ಅರ್‌ಎಫ್‌ಓ ನಂದಕುಮಾರ್, ಜಿಲ್ಲಾ ಉಪ ನಿರ್ದೇಶಕ ರಂಗೇಗೌಡ, ನಾಮ ನಿರ್ದೇಶನ ಸದಸ್ಯರಾದ ಮಹಮದ್ ಸಲಾಉದ್ದೀನ್ ಅಮೀನ್, ಮಹದೇವು, ಗಣೇಶ್ ನಾಯಕ, ರವಿಪ್ರಸನ್ನ, ಪಿ.ಗುಣಶೇಖರ್, ಉಮಾಶಂಕರಿ, ಗ್ಯಾರಂಟಿ ಯೋಜನೆಗಳ ತಾಲೂಕು ಅಧ್ಯಕ್ಷ ರಾಘು ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಶಾಸಕ ರಿಜ್ವಾನ್ ಅರ್ಷದ್‌ಗೆ ಸಚಿವ ಸ್ಥಾನ ನೀಡಿ

ತಿ.ನರಸೀಪುರ, ನ.6– ರಾಜ್ಯ ಸರ್ಕಾರದಲ್ಲಿ ಸಂಪುಟ ವಿಸ್ತರಣೆಯಾದಲ್ಲಿ ಯುವ ನಾಯಕರು, ಶಿವಾಜಿ ನಗರದ ಶಾಸಕರು ಆದ ರಿಜ್ವಾನ್ ಅರ್ಷದ್ ಅವರಿಗೆ ಸಂಪುಟದಲ್ಲಿ ಸಚಿವ ಸ್ಥಾನ ನೀಡಬೇಕೆಂದು ಮೃಗಾಲಯ ಪ್ರಾಧಿಕಾರದ ಮಾಜಿ ನಿರ್ದೇಶಕ ಅಮ್ಜದ್ ಖಾನ್ ಒತ್ತಾಯಿಸಿದರು.

ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ರಾಜ್ಯ ಸರ್ಕಾರದಲ್ಲಿ ನವೆಂಬರ್ ತಿಂಗಳಲ್ಲಿ ರಾಜಕೀಯ ಕ್ರಾಂತಿಯಾಗಲಿದ್ದು ಸಚಿವ ಸಂಪುಟ ವಿಸ್ತರಣೆಯಾಗಲಿದೆ ಎಂಬ ಮಾತು ಕೇಳಿ ಬಂದಿದ್ದು,ಸಚಿವ ಸಂಪುಟ ವಿಸ್ತರಣೆಯಾಗಿದ್ದೇ ಆದಲ್ಲಿ ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷರೂ ಆಗಿರುವ ಶಿವಾಜಿ ನಗರದ ಹಾಲಿ ಶಾಸಕ ರಿಜ್ವಾನ್ ಅರ್ಷದ್‌ರವರಿಗೆ ಸಚಿವ ಸ್ಥಾನ ನೀಡುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯರವರು ಸಾಮಾಜಿಕ ನ್ಯಾಯ ಒದಗಿಸಿಕೊಡಬೇಕೆಂದು ಅಮ್ಜದ್ ಮನವಿ ಮಾಡಿದರು.

ರಾಜ್ಯದ ಎಲ್ಲ ಶಾಸಕರಿಗೂ ರಿಜ್ವಾನ್ ಅರ್ಷದ್ ರವರ ಕ್ರಿಯಾಶೀಲ ವ್ಯಕ್ತಿತ್ವದ ನಡೆಯ ಪರಿಚಯವಿದ್ದು, ಒಮ್ಮೆಲೆ ರಾಜ್ಯದಲ್ಲಿ ಸಂಪುಟ ವಿಸ್ತರಣೆಯಾಗಿದ್ದೇ ಅದಲ್ಲಿ ಯುವ ನಾಯಕರು, ಸ್ನೇಹ ಜೀವಿಯೂ, ಜನ ನಾಯಕರೂ ಆಗಿರುವ ರಿಜ್ವಾನ್ ಅರ್ಷದ್‌ರಿಗೆ ಅಲ್ಪ ಸಂಖ್ಯಾತ ಕೋಟಾದಡಿ ಸಚಿವ ಸ್ಥಾನ ನೀಡಬೇಕೆಂದು ರಾಹುಲ್ ಗಾಂಧಿ, ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಒತ್ತಾಯಿಸಿದರು.

ಈ ವೇಳೆ ಕಾಂಗ್ರೆಸ್ ಮುಖಂಡರಾದ ಆಫ್ತಾಬ್ ಅಹ್ಮದ್,ಝಕೀ ಅಹಮದ್, ವಾಸಿಂ ಪಾಷ, ಮೊಹಮ್ಮದ್ ಆತೀಬ್ ಹಾಜರಿದ್ದರು.

ಬಿ.ವೈ.ವಿಜಯೇಂದ್ರರಿಗೆ ಶುಭಾಶಯ ಕೋರಿದ ಮುಖಂಡರು



ಇತ್ತೀಚೆಗೆ ಹುಟ್ಟುಹಬ್ಬ ಆಚರಿಸಿಕೊಂಡ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ತಿ.ನರಸೀಪುರ ಪುರಸಭೆಯ ಸದಸ್ಯ ಎಸ್.ಕೆ.ಕಿರಣ್ ಅಭಿನಂದಿಸಿದರು. ಮೋಹನ್ ಕುಮಾರ್, ಅಡಿಗೆ ಪ್ರಭು, ನವೀನ್, ಮಹೇಶ್ ಇದ್ದಾರೆ.

ಹಾಡ್ಯ ಪಿಎಸಿಸಿಎಸ್ ಅಧ್ಯಕ್ಷ, ಉಪಾಧ್ಯಕ್ಷ ಚುನಾವಣೆ ದಿಢೀರ್ ಮುಂದೂಡಿಕೆ



ಮಲ್ಕುಂಡಿ: ಸಮೀಪದ ಹಾಡ್ಯ ಗ್ರಾಮದ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಉಪಾಧ್ಯಕ್ಷ ಚುನಾವಣೆಯನ್ನು ದಿಢೀರ್ ಮುಂದೂಡಲಾಗಿದೆ.

ನಿಗದಿಯಂತೆ ಬುಧವಾರ (ನ.5) ನಡೆಯಬೇಕಿದ್ದ ಅಧ್ಯಕ್ಷ, ಉಪಾಧ್ಯಕ್ಷ ಚುನಾವಣೆ ಪ್ರಕ್ರಿಯೆ ಆರಂಭವಾಗಿತ್ತು. ಚುನಾವಣೆಗೆ ಸಿದ್ದಗೊಂಡಿದ್ದ ಅಧ್ಯಕ್ಷ ಉಪಾಧ್ಯಕ್ಷ ಆಕಾಂಕ್ಷಿಗಳಿಗೆ ಕೈಗೆ ಬಂದ ತುತ್ತು ಬಾಯಿಗೆ ಬಾರದಂತಾಗಿದೆ. ಬೆಳಗೆ ನಡೆಯಬೇಕಾದ ಚುನಾವಣೆಗೆ ಹುಲ್ಲಹಳ್ಳಿ ಪೊಲೀಸ್ ಠಾಣೆಯಿಂದ ಭದ್ರತೆ ನೀಡಲು ಸಿಬ್ಬಂದಿ ಕೊರತೆಯಿಂದ ಈ ಚುನಾವಣೆಯನ್ನು ಮುಂದೂಡಬೇಕಾಯಿತು ಎಂದು ಮೂಲಗಳು ತಿಳಿಸಿವೆ.

ಪ್ರತಿ ಚುನಾವಣೆಯು ಮುಂದೂಡುವುದರಿಂದ ಇದು ರಾಜಕೀಯ ಪ್ರೇರಿತವಾಗಿರಬಹುದು ಎಂದು ಸಾರ್ವಜನಿಕರ ಮಾತಾಗಿದೆ. ಹಾಡ್ಯ ಕೃಷಿ ಪತ್ತಿನ ಸಹಕಾರ ಸಂಘದ ಮಾಜಿ ಅಧ್ಯಕ್ಷ ಹೆಚ್.ಎಂ.ಶಂಕರ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಸಹಕಾರ ಸಂಘದ ಚುನಾವಣೆ ನಡೆಯುತ್ತಿದ್ದು ಈಗಾಗಲೇ ನಿರ್ದೇಶಕರ ಚುನಾವಣೆ ಮುಗಿದಿದೆ ಕೊನೆಯ ಹಂತ ಅಧ್ಯಕ್ಷ, ಉಪಾಧ್ಯಕ್ಷ ಚುನಾವಣೆ ನಡೆಯಬೇಕಿತ್ತು. ಅದರೆ ನಿರ್ದೇಶಕರ ಚುನಾವಣೆಯಲ್ಲಿ ಎಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಗೆಲುವು ಸಾಧಿಸಿರುತ್ತಾರೋ ಆ ಸೊಸೈಟಿಯಲ್ಲಿ ಕ್ಷೇತ್ರದ ಶಾಸಕರು ವಿನಾಕಾರಣ ಚುನಾವಣೆ ಯನ್ನು ಮುಂದೂಡುತ್ತಿದ್ದಾರೆ ಎಂದು ಆರೋಪಿಸಿದರು.

ಈಗಾಗಲೇ ಕ್ಷೇತ್ರದಲ್ಲಿ ಸಹಕಾರ ಸಂಘದ ಅಧ್ಯಕ್ಷ, ಉಪಾಧ್ಯಕ್ಷ ಚುನಾವಣೆ ನಡೆಯುತ್ತಿದ್ದು ಕ್ಷೇತ್ರದಲ್ಲಿ ಎಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳು ಜಯಗಳಿಸುತ್ತಾರೋ ಅಲ್ಲಿ ಮಾತ್ರ ಚುನಾವಣೆ ಮುಂದೂಡಿಕೆ ಮಾಡುತ್ತಿರುವ ಶಾಸಕರ ಧೋರಣೆ ಸರಿಯಲ್ಲ. ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳು ಗೆದ್ದ ಕಡೆಯಲ್ಲಿ ಮಾತ್ರ ಚುನಾವಣೆ ನಡೆಯುತ್ತದೆ. ಕ್ಷೇತ್ರದ ಜನತೆಗೆ ರಕ್ಷಣೆ ನೀಡಲು ಶಾಸಕರು ಮುಂದಾಗಬೇಕು. ಚುನಾವಣೆಯು ಸಂವಿಧಾನಾತ್ಮಕವಾಗಿ ನಡೆಯಲು ಬಿಡಬೇಕು. ಮುಂದಿನ ದಿನಗಳಲ್ಲಿ ಈ ರೀತಿ ಮುಂದೂಡಿದರೆ ತಾಲೂಕು ಆಡಳಿತಕ್ಕೆ ಬೀಗ ಜಡಿಯಲಾಗುವುದು. –ಬಿ.ಹರ್ಷವರ್ಧನ್, ಮಾಜಿ ಶಾಸಕ

ಕನಕ ಜಯಂತ್ಯೋತ್ಸವ ಸಮಿತಿಗೆ ಅಧ್ಯಕ್ಷರ ಆಯ್ಕೆ ನಡೆದಿಲ್ಲ



ನಂಜನಗೂಡು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್ ಪತ್ರಿಕಾಗೋಷ್ಠಿ.

ನಂಜನಗೂಡು: ಕನಕ ಜಯಂತೋತ್ಸವ ಸಮಿತಿಗೆ ಯಾರನ್ನೂ ಅಧ್ಯಕ್ಷರನ್ನಾಗಿ ನೇಮಿಸಿಲ್ಲ, ಟಿ.ಎಲ್.ಮೋಹನ್ ತನ್ನನ್ನು ಅಧ್ಯಕ್ಷರನ್ನಾಗಿ ಶಾಸಕ ಯತೀಂದ್ರ ಸಿದ್ದರಾಮಯ್ಯ ನೇಮಿಸಿದ್ದಾರೆ ಎಂದು ಬಿಂಬಿಸಿಕೊಂಡು ಸುಳ್ಳು ಪ್ರಚಾರದಲ್ಲಿ ತೊಡಗಿ ಸಮಾಜವನ್ನು ದಿಕ್ಕು ತಪ್ಪಿಸುತ್ತಿದ್ದಾರೆ ಎಂದು ಕುರುಬ ಸಮಾಜದ ಮುಖಂಡ ಹಾಗೂ ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್ ಹೇಳಿದರು.

ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು ಕುರುಬ ಸಮಾಜದ ಬಾಂಧವರ ಸಭೆಯನ್ನು ಅ.22ರಂದು ನಗರದ ಕನಕದಾಸ ಸಾರ್ವಜನಿಕ ವಿದ್ಯಾಸಂಸ್ಥೆಯಲ್ಲಿ ನಡೆಸಲಾಗಿತ್ತು, ಸಭೆಯಲ್ಲಿ ಕಳೆದ 3 ವರ್ಷಗಳಿಂದ ತಾಲೂಕು ಕುರುಬರ ಸಂಘಕ್ಕೆ ಚುನಾವಣೆ ನಡೆಸದಿರುವ ಬಗ್ಗೆ ಚರ್ಚೆಯಾಗಿತ್ತು, ಸಂಘದ ಸಮಿತಿ ಅಸ್ತಿತ್ವಕ್ಕೆ ಬರದಿರುವುದರಿಂದ ಕನಕದಾಸರ ಜಯಂತಿ ಆಚರಣೆ ನಿಂತಿದೆ, ಸಂಘ ನಿಷ್ಕ್ರಿಯಗೊಂಡಿದೆ, ಮುಂದೆ ಶೀಘ್ರವಾಗಿ ಸಂಘದ ಚುನಾವಣೆ ನಡೆಸಬೇಕೆಂದು ತೀರ್ಮಾನ ಕೈಗೊಳ್ಳಲಾಯಿತು, ಸಭೆಯಲ್ಲಿ ಕನಕ ಜಯಂತ್ಯೋತ್ಸವ ಸಮಿತಿಗೆ ಅಧ್ಯಕ್ಷರನ್ನು ನೇಮಕ ಮಾಡಿರಲಿಲ್ಲ, ಯತೀಂದ್ರ ಸಿದ್ದರಾಮಯ್ಯರವರ ನೇತೃತ್ವದಲ್ಲಿ ಜಯಂತಿ ಮಹೋತ್ಸವ ಸಮಿತಿ ಅಧ್ಯಕ್ಷರನ್ನು ನೇಮಕ ಮಾಡುವುದಾಗಿ ತಿಳಿಸಿದ್ದಾರೆ, ಆದರೆ ಸಮಾಜದ ಕೆಲವು ಮುಖಂಡರು ಸ್ವಯಂ ಘೋಷಿತವಾಗಿ ಜಯಂತಿ ಮಹೋತ್ಸವ ಸಮಿತಿ ಅಧ್ಯಕ್ಷರೆಂದು ಘೋಷಿಸಿಕೊಂಡು ಸಮಾಜದ ಮುಖಂಡರು ಸುಳ್ಳು ಪ್ರಚಾರ ನಡೆಸಿ, ಸಮಾಜವನ್ನು ದಿಕ್ಕುತಪ್ಪಿಸುತ್ತಿದ್ದಾರೆ.

ಸಮಾಜದ ಬಂಧುಗಳು ಇದಕ್ಕೆ ಕಿವಿಗೊಡಬಾರದು ಈ ಬಾರಿ ಕನಕ ಜಯಂತಿ ಅದ್ದೂರಿಯಾಗಿ ನಡೆಯುವುದು ನಿಶ್ಚಿತ, ಆದರೆ ಎಲ್ಲರನ್ನೂ ಒಮ್ಮತವಾಗಿ ಕರೆದುಕೊಂಡು ಹೋಗಿ ಎಂಬುದೇ ನಮ್ಮ ಅಜೆಂಡಾ. ಮುಂದೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ದಿನಾಂಕ ಗೊತ್ತುಪಡಿಸಿಕೊಂಡು ನಗರದಲ್ಲಿ ಅದ್ದೂರಿಯಾಗಿ ಕನಕ ಜಯಂತಿ ಕಾರ್ಯಕ್ರಮವನ್ನು ಆಯೋಜಿಸಲಾಗುವುದು ಎಂದು ಹೇಳಿದರು.

ತಾಲೂಕು ಪಂಚಾಯತ್ ಮಾಜಿ ಅಧ್ಯಕ್ಷ ತಮ್ಮಣ್ಣೇಗೌಡ ಮಾತನಾಡಿ ಕನಕ ಜಯಂತ್ಯೋತ್ಸವ ಸಮಿತಿಯ ಅಧ್ಯಕ್ಷ ಗಾದಿಗೆ ಗೀಕಳ್ಳಿಬಿರೇಗೌಡ, ಹುಣಸನಾಳು ಸಿದ್ದರಾಜು ಹಾಗೂ ಮೋಹನ್ ಸೇರಿದಂತೆ 3 ಮಂದಿ ಅಕಾಂಕ್ಷಿಗಳಿದ್ದಾರೆ, ನ.8 ರಂದು ತಾಲೂಕು ಕಚೇರಿಯಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಸರಳವಾಗಿ ನಡೆಯುವ ಕನಕ ಜಯಂತಿ ಕಾರ್ಯಕ್ರಮದ ನಂತರ ಶಾಸಕರಾದ ಯತೀಂದ್ರ ಸಿದ್ದರಾಮಯ್ಯ ಹಾಗೂ ದರ್ಶನ್ ಧ್ರುವನಾರಾಯಣ ಅವರ ಸಮ್ಮುಖದಲ್ಲಿ ಕನಕ ಜಯಂತ್ಯೋತ್ಸವ ಸಮಿತಿಗೆ ಅಧ್ಯಕ್ಷರನ್ನು ನೇಮಕ ಮಾಡಲಿದ್ದಾರೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಕೊಂಗಳ್ಳಿ ಶಂಕರ್, ಬಿರೇಗೌಡ, ಹೆಚ್.ಎಸ್.ಸುರೇಶ್, ಆನಂದ್, ಗೋವಿಂದರಾಜು, ನಾಗರಾಜು, ಹೆಗ್ಗಡಹಳ್ಳಿ ಮಹೇಶ್, ರಾಜೇಶ್, ಲೋಕೇಶ್, ಸ್ವಾಮಿ, ಮಹ ದೇವು, ಸಿದ್ದರಾಜು, ಆಲಂಬೂರು ಕುಮಾರ್, ಮಹೇಶ್, ಗೀಕಳ್ಳಿ ಶಿವರಾಜು, ವಿಜಯ್ ಕುಮಾರ್, ಮೊತ್ತ ನಾಗರಾಜು, ರಾಜೇಶ್, ಮಣಿಕಂಠ, ಹುಚ್ಚೇಗೌಡ, ವಿಜಯ್ ಕುಮಾರ್, ಉಪಸ್ಥಿತರಿದ್ದರು.

ಕನಕ ಜಯಂತಿ ಸಮಿತಿಗೆ ಅಧ್ಯಕ್ಷರಾಗಿ ನೇಮಕ ಮಾಡಿದೆ

ನಂಜನಗೂಡು, ನ.6– ಶನಿವಾರ(ನ.8) ನಡೆಯುವ ಭಕ್ತ ಕನಕದಾಸರ 538ನೇ ಜಯಂತಿ ಮಹೋತ್ಸವವನ್ನು ತಾಲೂಕು ಕಚೇರಿಯಲ್ಲಿ ಸರಳವಾಗಿ ಆಚರಿಸಲಾಗುತ್ತಿದ್ದು, ಮುಂದಿನ ದಿನಗಳಲ್ಲಿ ಮುಖ್ಯಮಂತ್ರಿಗಳ ದಿನಾಂಕವನ್ನು ನಿಗದಿಗೊಳಿಸಿ ಸಮಾಜದ ವತಿಯಿಂದ ಅದ್ದೂರಿಯಾಗಿ ಜಯಂತಿ ಮಹೋತ್ಸವವನ್ನು ಆಚರಣೆ ನಡೆಸಲಾಗುವುದು ಎಂದು ಭಕ್ತ ಕನಕದಾಸ ಜಯಂತಿ ಮಹೋತ್ಸವದ ಸಮಿತಿ ಅಧ್ಯಕ್ಷ ಟಿ.ಎಲ್.ಮೋಹನ್ ಕುಮಾರ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನನ್ನನ್ನು ಕನಕ ಜಯಂತಿ ಮಹೋತ್ಸವ ಸಮಿತಿಗೆ ಅಧ್ಯಕ್ಷರಾಗಿ ನೇಮಕ ಮಾಡಲಾಗಿದೆ. ಕಳೆದ ವರ್ಷ ತಾಲೂಕು ಕುರುಬರ ಸಂಘದ ಚುನಾವಣೆಯ ನಂತರ ಕನಕದಾಸರ ಜಯಂತಿ ಮಹೋತ್ಸವವನ್ನು ಅದ್ದೂರಿಯಾಗಿ ಆಚರಿಸಲು ತೀರ್ಮಾನಿಸಲಾಯಿತು, ಆದರೆ ಕೆಲವು ತಾಂತ್ರಿಕ ದೋಷಗಳಿಂದಾಗಿ ಚುನಾವಣೆಯನ್ನು ನಡೆಸಲು ಸಾಧ್ಯವಾಗಿಲ್ಲ, ಆದ ಕಾರಣ ಜಯಂತಿ ಮಹೋತ್ಸವ ನಿಲ್ಲಬಾರದು, ಅದ್ದೂರಿಯಾಗಿ ಆಚರಣೆ ನಡೆಸಬೇಕು ಎಂಬ ಸಮುದಾಯದ ಒತ್ತಡದ ಮೇರೆಗೆ ವಿಧಾನಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯರವರು ಜಯಂತಿ ಮಹೋತ್ಸವವನ್ನು ನಡೆಸಲು ಜಯಂತಿ ಮಹೋತ್ಸವದ ಅಧ್ಯಕ್ಷರನ್ನಾಗಿ ನನ್ನನ್ನು ನೇಮಕ ಮಾಡಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಕುಳ್ಳಯ್ಯ, ತಾಲೂಕು ಕುರುಬರ ಸಂಘದ ಮಾಜಿ ಅಧ್ಯಕ್ಷ ಕೆಂಪಣ್ಣ, ಹಂಗಾಮಿ ಅಧ್ಯಕ್ಷ ಕುರಿಹುಂಡಿ ರಾಜು, ನಗರಸಭಾ ಸದಸ್ಯ ಗಂಗಾಧರ್, ಹಾಲುಮತ ಅಧ್ಯಕ್ಷ ಕುಮಾರ್, ಮುಖಂಡರಾದ ನಾಗರಾಜು, ಕೃಷ್ಣ ಸಿದ್ದರಾಜು, ಕೀರ್ತಿ, ಶಿವಕುಮಾರ್, ಜಯಚಂದ್ರ, ಮರಿಕಾಳೇಗೌಡ, ಪ್ರಭು, ರಾಮು ಇದ್ದರು.

ಮುಳ್ಳೂರು–ಬಿರ್ವಾಳ್ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ

ಮುಳ್ಳೂರು ಹೋಬಳಿ ಕೇಂದ್ರವನ್ನಾಗಿ ಮಾಡಲು ಪ್ರಯತ್ನ



ಮುಳ್ಳೂರು ಗ್ರಾಮದ ಮುಳ್ಳೂರು–ಬಿರ್ವಾಳ್ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಅನಿಲ್ ಚಿಕ್ಕಮಾದು ಭೂಮಿ ಪೂಜೆ ನೆರವೇರಿಸಿದರು.

ಸರಗೂರು: ಮುಳ್ಳೂರು ಗ್ರಾಮದ ಅಭಿವೃದ್ದಿಗೆ 16 ಕೋಟಿ ಮಂಜೂರು ಮಾಡಿ ಅಭಿವೃದ್ಧಿ ಮಾಡಲಾಗಿದೆ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ತಾಲೂಕಿನ ಮುಳ್ಳೂರು ಗ್ರಾಮದಲ್ಲಿ ಮುಳ್ಳೂರು–ಬಿರ್ವಾಳ್ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಸಾರ್ವಜನಿಕರ ಹಿತದೃಷ್ಟಿಯಿಂದ ಹಲವಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ರಸ್ತೆ ಕಾಮಗಾರಿಗೆ ಭೂಮಿ ಪೂಜೆ ನಡೆಸಲಾಗಿದೆ, ಸರಗೂರು ಈ ಮೊದಲು ಹೋಬಳಿ ಕೇಂದ್ರವಾಗಿತ್ತು ಆನಂತರ ಕೋಟೆಯಿಂದ ಬೇರ್ಪಟ್ಟು ತಾಲೂಕು ಕೇಂದ್ರವನ್ನಾಗಿ ಘೋಷಣೆ ಮಾಡಲಾಗಿತ್ತು ಹೀಗಾಗಿ ಸರಗೂರು ತಾಲೂಕಿಗೆ ಅದ್ಯತೆ ನೀಡಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಿದ್ದು, ಸಾಕಷ್ಟು ಅಭಿವೃದ್ಧಿ ಮಾಡಲಾಗಿದೆ ಎಂದರು.

ಮುಳ್ಳೂರು ಗ್ರಾಮವು ಹತ್ತಾರು ಗ್ರಾಮಗಳಿಗೆ ಹೃದಯ ಭಾಗವಾಗಿದ್ದು, ಜನಸಂಖ್ಯೆಯು ಹೆಚ್ಚಿದೆ. ಇಲ್ಲಿಂದ ನೂರಾರು ವಿದ್ಯಾರ್ಥಿಗಳು ನಂಜನಗೂಡು, ಸರಗೂರು, ಹೆಡಿಯಾಲಕ್ಕೆ ಹೋಗುತ್ತಿರುವುದು ಗಮನಕ್ಕೆ ಬಂದಿದ್ದು, ಪಿಯು ಕಾಲೇಜು ಮಂಜೂರಿಗೆ ಶ್ರಮಿಸಲಾಗುವುದು. ಜೊತೆಗೆ ಬ್ಯಾಂಕ್ ತೆರೆಯಲು ಸಿಎಂ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ನಡೆಯುವ ಕೆಡಿಪಿ ಸಭೆಯಲ್ಲಿ ಚರ್ಚಿಸಲಾಗುವುದು. ಇದೇ ವೇಳೆ ಮುಳ್ಳೂರು ಗ್ರಾಮವನ್ನು ಹೋಬಳಿ ಕೇಂದ್ರವನ್ನಾಗಿ ಮಾಡಲು ಪ್ರಯತ್ನಿಸಲಾಗುವುದು ಎಂದು ಭರವಸೆ ನೀಡಿದರು.

15 ವರ್ಷಗಳ ಹಿಂದೆ ನಿರ್ಮಾಣವಾಗಿದ್ದ ಮುಳ್ಳೂರು–ಬಿರ್ವಾಳ್ ರಸ್ತೆ ಇತ್ತೀಚೆಗೆ ಎಡಬಿಡದೆ ಸುರಿದ ಭಾರಿ ಮಳೆಯಿಂದಾಗಿ ಸಂಪೂರ್ಣ ಹಾಳಾಗಿದ್ದು ಈ ರಸ್ತೆಯಲ್ಲಿ ವಾಹನ ಸಂಚಾರ ದುಸ್ಸಾಹಸವಾಗಿದೆ. ಶಾಸಕ ಅನಿಲ್ ಚಿಕ್ಕಮಾದು ಈ ರಸ್ತೆಗೆ ಕಾಯಕಲ್ಪ ನೀಡಿ ಭೂಮಿ ಪೂಜೆ ನೆರವೇರಿಸಿದ್ದಾರೆ. ಇದರಿಂದ ಗ್ರಾಮಸ್ಥರ ಬೇಡಿಕೆ ಈಡೇರಿಸಿದ ಶಾಸಕರಿಗೆ ಮುಳ್ಳೂರು ಗ್ರಾಮಸ್ಥರಿಂದ ಅಭಿನಂದನೆ –ಬಿರ್ವಾಳ್ ಚಿಕ್ಕಣ್ಣ, ತಾಲೂಕು ವಾಹನ ಚಾಲಕರ ಸಂಘದ ಅಧ್ಯಕ್ಷ

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಸದಸ್ಯರಾದ ಭಾಗ್ಯಲಕ್ಷ್ಮಿ, ಚಿಕ್ಕವೀರ ನಾಯಕ, ಶಿವಪ್ಪ ಕೋಟೆ, ಬಿರ್ವಾಳ್ ಚಿಕ್ಕಣ್ಣ, ವಿಧಾನಸಭಾ ಕ್ಷೇತ್ರದ ಯೂತ್ ಕಾಂಗ್ರೆಸ್ ಅಧ್ಯಕ್ಷ ಕಂದೇಗಾಲ ಶಿವರಾಜು, ಅಜರುದ್ದೀನ್, ನವೀನ್, ಗುರುಸ್ವಾಮಿ, ಯೂತ್ ಕಾಂಗ್ರೆಸ್ ಜಿಲ್ಲಾ ಕಾರ್ಯದರ್ಶಿ ಕಳಸೂರು ಬಸವರಾಜು, ಚನ್ನೀಪುರ ನಾಗರಾಜು, ಕುಂದೂರು ಮೂರ್ತಿ, ಗ್ರಾಪಂ ಅಧ್ಯಕ್ಷೆ ಚಿನ್ನಮ ರಾಮನಾಯಕ, ಸದಸ್ಯ ಡಿ ಚಿನ್ನಸ್ವಾಮಿ, ಭಾಗ್ಯ ಶಿವಚನ್ನಪ್ಪ, ಶ್ರೀನಿವಾಸ, ಶಿವರಾಜು, ಚಂದ್ರ, ಮುಖಂಡರಾದ ಶಂಭುಲಿಂಗನಾಯಕ, ಪುಟ್ಟಸ್ವಾಮಿ, ರವಿಕುಮಾರ್, ಲೋಕೇಶ್, ಮುಳ್ಳೂರು ಮಂಜು, ಚನ್ನನಾಯಕ, ಮಹೇಶ್, ಚಿಕ್ಕಣ್ಣ, ವನಸಿರಿ ಉಮೇಶ್, ಶಶಿ ಪಾಟೀಲ್ ಸೇರಿದಂತೆ ಗ್ರಾಮಸ್ಥರು, ಎಲ್ಲಾ ಸಮಾಜದ ಯಜಮಾನರು ಹಾಜರಿದ್ದರು.

ಕಮಲಮ್ಮ ನಿಧನ



ಭೇರ್ಯ: ಹೊಸ ಅಗ್ರಹಾರ ರೈಲ್ವೆ ಸ್ಟೇಷನ್ ಗ್ರಾಮದ ಕಮಲಮ್ಮ (59) ಗುರುವಾರ ನಿಧನರಾದರು. ದಿವಂಗತರು ಪತಿ ಎಪಿಎಂಸಿ ಮಾಜಿ ಉಪಾಧ್ಯಕ್ಷ ಹಾಗೂ ಪೂರ್ಣಿಮಾ ವೈನ್ಸ್ ಮಾಲೀಕರಾದ ಹೆಚ್.ಕೆ.ಓಬೇಗೌಡ, ಪುತ್ರಿ ವಕೀಲೆ ಪೂರ್ಣಿಮಾ, ಇಬ್ಬರು ಪುತ್ರರಾದ ಮಣಿ, ಶಬರಿ (ಪ್ರದೀಪ), ಅಳಿಯ ವಾಲ್ಮೀಕಿ ನಿಗಮದ ಸಹಾಯಕ ಆಯುಕ್ತ ಡಿ.ಜಿ.ಗುರುಶಾಂತಪ್ಪ ಸೇರಿದಂತೆ ಮೊಮ್ಮಕ್ಕಳು ಅಗಲಿದ್ದಾರೆ. ಇವರ ಅಂತ್ಯಕ್ರಿಯೆಯು ಶುಕ್ರವಾರ ಬೆಳಗ್ಗೆ ಜಮೀನಿನಲ್ಲಿ ನಡೆಯಲಿದೆ.

ಕೆಆರ್ ಆಸ್ಪತ್ರೆ, ಚೆಲುವಾಂಬ ಆಸ್ಪತ್ರೆಗೆ ರಾಜ್ಯ ಆಹಾರ ಆಯೋಗದ ಅಧ್ಯಕ್ಷ ಡಾ.ಹೆಚ್.ಕೃಷ್ಣ ದಿಢೀರ್ ಭೇಟಿ ; ಪರಿಶೀಲನೆ

ನ್ಯೂನತೆ ಸರಿಪಡಿಸಿಕೊಳ್ಳಲು ತಿಂಗಳ ಗಡುವು; ತಪ್ಪಿದರೆ ಶಿಸ್ತು ಕ್ರಮ

● ಆಹಾರದ ಗುಣಮಟ್ಟದಲ್ಲಿ ಸುಧಾರಣೆ ಕಂಡರೂ ವಿತರಣೆಯಲ್ಲಿ ನ್ಯೂನತೆ ● ಮೂವರು ಸಿಬ್ಬಂದಿಯ ಅಮಾನತಿಗೂ ಸೂಚನೆ

ಮೈಸೂರು, ನ.6(ಪಿಎಂ/ಎಂಕೆ)– ಕೆಆರ್ ಆಸ್ಪತ್ರೆ ಹಾಗೂ ಚೆಲುವಾಂಬ ಆಸ್ಪತ್ರೆಯಲ್ಲಿ ರೋಗಿಗಳಿಗೆ ನೀಡುವ ಆಹಾರದ ಗುಣಮಟ್ಟದಲ್ಲಿ ಸುಧಾರಣೆ ಯಾಗಿದ್ದರೂ ವಿತರಣಾ ವ್ಯವಸ್ಥೆಯಲ್ಲಿ ಸಾಕಷ್ಟು ನ್ಯೂನತೆ ಮುಂದುವರೆದಿದೆ. ಜೊತೆಗೆ ಸ್ವಚ್ಛತೆಗೆ ಆದ್ಯತೆ ನೀಡಿಲ್ಲ ಈ ಎಲ್ಲವನ್ನೂ ಸರಿಪಡಿಸಿಕೊಳ್ಳಲು ತಿಂಗಳ ಕಾಲಾವಕಾಶ ನೀಡಲಾಗುವುದು. ಅದಾಗ್ಯೂ ಸರಿಪರಿಸಿಕೊಳ್ಳದೇ ಇದ್ದಲ್ಲಿ ಶಿಸ್ತು ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದಾಗಿ ರಾಜ್ಯ ಆಹಾರ ಆಯೋಗದ ಅಧ್ಯಕ್ಷ ಡಾ.ಹೆಚ್.ಕೃಷ್ಣ ತಿಳಿಸಿದರು.

ಮೈಸೂರು ವೈದ್ಯಕೀಯ ಕಾಲೇಜಿನ ನಿರ್ದೇಶಕರ ಕಚೇರಿ ಸಭಾಂಗಣದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಜುಲೈನಲ್ಲಿಯೂ ಈ ಆಸ್ಪತ್ರೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದೆ. ಆಗ ಕೆಲ ನ್ಯೂನತೆಗಳನ್ನು ಗುರುತಿಸಿ ಸರಿಪಡಿಸಿಕೊಳ್ಳುವಂತೆ ಸೂಚನೆ ನೀಡಿದ್ದೆ. ಈಗ ಇಲ್ಲಿ ಆಹಾರದ ಗುಣಮಟ್ಟದಲ್ಲಿ ಸುಧಾರಣೆಯಾಗಿದೆ. ಆದರೆ ಹಲವಡೆ ಶೌಚಾಲಯಗಳ ನಿರ್ವಹಣೆ ಕಳಪೆಯಿಂದ ಕೂಡಿದ್ದು, ಶುಚಿತ್ವ ಕಾಪಾಡಿಲ್ಲ. ಕೆಲ ಕೊಳಾಯಿಗಳಲ್ಲಿ ನೀರು ಸೋರಿಕೆಯಾಗುತ್ತಿದೆ ಎಂದರು.

ವಾರ್ಡ್‌ವೊಂದರಲ್ಲಿ ಒಟ್ಟು 26 ರೋಗಿಗಳ ಪೈಕಿ ಮೂರ್‍ನಾಲ್ಕು ಮಂದಿಗಷ್ಟೇ ಊಟ ವಿತರಣೆ ಮಾಡಿರುವುದು ಕಂಡು ಬಂದಿದೆ. ಈ ಸಂಬಂಧ ಒಬ್ಬ ಸಿಬ್ಬಂದಿ ಅಮಾನತು ಮಾಡಲು ಸೂಚನೆ ನೀಡಿದ್ದೇನೆ. ರೋಗಿಗಳ ಆರೋಗ್ಯಕ್ಕೆ ಅನುಗುಣ ವಾಗಿ ಸೂಕ್ತ ವಿಧದ ಆಹಾರ ವಿತರಣೆ ಮಾಡದಿ ರುವುದು ಕಂಡ ಬಂದಿರುವ ಸಂಬಂಧ ಇಬ್ಬರು ಸಿಬ್ಬಂದಿ ಅಮಾನತಿಗೆ ನಿರ್ದೇಶನ ನೀಡಿದ್ದೇನೆ ಎಂದು ತಿಳಿಸಿದರು.

ಚೆಲುವಾಂಬ ಆಸ್ಪತ್ರೆಯ ಎನ್‌ಆರ್‌ಸಿ ಘಟಕದಲ್ಲಿ ಯಾವುದೇ ಆಹಾರ ಧಾನ್ಯ ಇಲ್ಲ. ಯಾರು ರೋಗಿಗಳೇ ಇಲ್ಲವೆಂಬ ಕಾರಣ ನೀಡಿದ್ದಾರೆ. ತಿಂಗಳು ಬಿಟ್ಟು ಮತ್ತೆ ಭೇಟಿ ನೀಡುತ್ತೇನೆ. ನ್ಯೂನತೆ ಸರಿಪಡಿಸಿಕೊಳ್ಳದಿದ್ದರೆ ಶಿಸ್ತು ಕ್ರಮ ವಹಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತೇನೆ ಎಂದರು.



ಮೈಸೂರಿನ ಕೆ.ಆರ್.ಆಸ್ಪತ್ರೆ ಹಾಗೂ ಚೆಲುವಾಂಬ ಆಸ್ಪತ್ರೆಗೆ ಗುರುವಾರ ರಾಜ್ಯ ಆಹಾರ ಆಯೋಗದ ಅಧ್ಯಕ್ಷ ಡಾ.ಹೆಚ್.ಕೃಷ್ಣ ದಿಢೀರ್ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಪರಿಶೀಲನೆ: ಗುರುವಾರ ಮಧ್ಯಾಹ್ನ 1 ಗಂಟೆ ಸುಮಾರಿಗೆ ಕೆ.ಆರ್.ಆಸ್ಪತ್ರೆಯ ಆಹಾರ ತಯಾರಿಕಾ ಘಟಕ(ಪಾಕಶಾಲೆ)ಕ್ಕೆ ಭೇಟಿ ನೀಡಿ, ಒಳರೋಗಿಗಳಿಗೆ ತಯಾರಿಸುವ ಆಹಾರ ಪದಾರ್ಥಗಳನ್ನು ಪರಿಶೀಲಿಸಿದರು. ತರಕಾರಿ, ಅಡುಗೆ ತಯಾರಿಕೆಗೆ ಬಳಸುವ ನೀರು, ಬಾಣಂತಿಯರಿಗೆ ನೀಡುವ ಮೊಟ್ಟೆ ಸೇರಿದಂತೆ ಇನ್ನಿತರೆ ಆಹಾರ ಧಾನ್ಯಗಳ ಗುಣಮಟ್ಟ ಪರಿಶೀಲಿಸಿದರು.

ಬಳಿಕ ಅಡುಗೆ ಕೊಠಡಿಯಲ್ಲಿ ಶುಚಿತ್ವ ಕಾಪಾಡಿಕೊಳ್ಳುವ ಜೊತೆಗೆ ತಯಾರಾದ ಆಹಾರ ತಾಜಾ ಇರುವಾಗಲೇ ಒಳ ರೋಗಿಗಳಿಗೆ ವಿತರಣೆಯಾಗಬೇಕು. ಅವಧಿ ಮುಗಿದ ಆಹಾರ ಪದಾರ್ಥಗಳನ್ನು ಬಳಕೆ ಮಾಡದಂತೆ ತಾಕೀತು ಮಾಡಿದರಲ್ಲದೆ, ಟೈಂ ಟೇಬಲ್ ಚಾರ್ಟ್ ಪ್ರಕಾರವೇ ತಿಂಡಿ ಮತ್ತು ಊಟ ವಿತರಣೆಯಾಗಬೇಕು ಎಂದು ಸೂಚಿಸಿದರು.

ನಂತರ ಆಸ್ಪತ್ರೆಯ ಹಳೇ ಜಯದೇವ ಆಸ್ಪತ್ರೆ ಕಟ್ಟಡದ ವಾರ್ಡ್‌ಗಳಿಗೆ ತೆರಳಿದ ಅವರು, ಶೌಚಾಲಯಗಳು, ಅವುಗಳಲ್ಲಿ ನೀರಿನ ವ್ಯವಸ್ಥೆ, ವಾರ್ಡ್‌ಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಸಮರ್ಪಕವಾಗಿ ಆಗಬೇಕು. ಪ್ರತೀ ವಾರ್ಡ್‌ನಲ್ಲಿಯೂ ಒಳ ರೋಗಿಗಳಿಗೆ ಹತ್ತಿರದಲ್ಲೇ ಲಭ್ಯವಾಗುವಂತೆ ಕುಡಿಯುವ ನೀರಿನ ಕ್ಯಾನ್‌ಗಳ ವ್ಯವಸ್ಥೆ ಮಾಡಬೇಕೆಂದು ಸೂಚಿಸಿದರು.

ಕೆಲವು ಶೌಚಾಲಯಗಳಲ್ಲಿ ನೀರು ಸೋರಿಕೆಯಾಗುತ್ತಿರುವುದು, ಮತ್ತೆ ಕೆಲವು ದುರಸ್ತಿಯಾಗದಿರುವುದನ್ನು ಕಂಡು ಗರಂ ಆದ ಆಯೋಗದ ಅಧ್ಯಕ್ಷರು, ಕೂಡಲೇ ಶೌಚಾಲಯದಲ್ಲಿ ನೀರು ಸೋರಿಕೆಯಾಗುವುದನ್ನು ನಿಲ್ಲಿಸಲು ಕ್ರಮವಹಿಸಬೇಕು. ಸೊಳ್ಳೆಗಳ ಉತ್ಪತ್ತಿಯಾಗುವುದೇ ಇಂತಹ ಶೌಚಾಲಯಗಳಲ್ಲಿ. ಹಾಗಾಗಿ ಶೌಚಾಲಯಗಳ ಸ್ವಚ್ಛತೆ ಕಡೆಗೆ ಗಮನಹರಿಸಬೇಕು ಎಂದು ಹೇಳಿದರು.

ನಂತರ ಚೆಲುವಾಂಬ ಆಸ್ಪತ್ರೆಗೆ ಭೇಟಿ ನೀಡಿ, ಮಕ್ಕಳ ಹಾಗೂ ಬಾಣಂತಿಯರ ವಾರ್ಡ್‌ಗಳಲ್ಲಿನ ಸ್ವಚ್ಛತೆ, ಶೌಚಾಲಯ, ಸಿಬ್ಬಂದಿ ಕರ್ತವ್ಯ ನಿರ್ವಹಣೆ ಬಗ್ಗೆಯೂ ಪರಿಶೀಲಿಸಿ ಮಾಹಿತಿ ಪಡೆದರು. ಕೆ.ಆರ್. ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕಿ ಡಾ.ಶೋಭಾ, ಆರ್‌ಎಂಓ ಡಾ.ನಯಾಜ್ ಪಾಷಾ, ಚೆಲುವಾಂಬ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕಿ ಡಾ.ಸುಧಾ, ಎಂಎಂಸಿ–ಆರ್‌ಐ ಆಡಳಿತಾಧಿಕಾರಿ ಮಹೇಶ್ ಮತ್ತಿತರರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಾಸ್ ಜಾತರ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಐ ಆ್ಯಮ್ ಗಾಡ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಬೈಸನ್ (ತ)	4 ಪ್ರದರ್ಶನಗಳು
ಗಾಯಿತ್ರಿ	
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ರಾಜಕಮಲ್	
ದಿ ಗರ್ಲ್‌ಫ್ರೆಂಡ್ (ತೆ)	4 ಪ್ರದರ್ಶನಗಳು
ಸಂಗಂ	
ಬ್ರಾಟ್ (ಕ)	4 ಪ್ರದರ್ಶನಗಳು
ಲಿಡೋ	
ಜೈ ಗದಾಕೇಸರಿ (ಲ) + ಕೋಣ (ಕ)	2+2 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಯಜಮಾನ (ಕ)	4 ಪ್ರದರ್ಶನಗಳು

‘ಗ್ರೇಟರ್ ಮೈಸೂರು’ ಯೋಜನಾಬದ್ಧವಾಗಿರಲಿ

ಮೈಸೂರು, ನ.6– ‘ಗ್ರೇಟರ್ ಮೈಸೂರು’ ಯೋಜನಾಬದ್ಧ ವಾಗಿ ರೂಪುಗೊಳ್ಳಬೇಕು. ಇಲ್ಲವಾದರೆ ಜನತೆಗೆ ಸಂಕಷ್ಟ ಎದುರಾಗುತ್ತದೆ ಎಂದು ಮಾಜಿ ಮೇಯರ್ ಸಂದೇಶ್ ಸ್ವಾಮಿ ಎಚ್ಚರಿಸಿದ್ದಾರೆ.



ಮೈಸೂರು ಮಹಾನಗರ ಪಾಲಿಕೆಯನ್ನು ‘ಗ್ರೇಟರ್ ಮೈಸೂರು’ ಆಗಿ ಪರಿವರ್ತಿಸಲು ಮುಂದಾಗಿರು ವುದು ಸ್ವಾಗತಾರ್ಹ. ಆಡಳಿತಾತ್ಮಕ ದೃಷ್ಟಿಯಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಈ ನಿರ್ಧಾರ ಸೂಕ್ತವಾಗಿದೆ. ಆದರೆ ನಾಲ್ವಡಿ ಕೃಷ್ಣರಾಜ ಒಡೆಯರ್ ದೂರದೃಷ್ಟಿತ್ವದ ಪಾರಂಪರಿಕ ನಗರಕ್ಕೆ ಕಿಂಚಿತ್ತೂ ಧಕ್ಕೆಯಾಗಬಾರದು. ನಾಲ್ವಡಿಯವರ ಪರಿಕಲ್ಪನೆಯನ್ನು ಇಂದಿನ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಅನುಸರಿಸಿ ನಡೆಯಬೇಕು. ಯಾವುದೇ ಕಾರಣಕ್ಕೂ ಶುದ್ಧವಾಗಿರುವ ಕೆರೆಗೆ ಕಲುಷಿತ ನೀರು ಹರಿಸಿ ಹಾಳು ಮಾಡಿದಂತಾಗಬಾರದು.

ಗ್ರೇಟರ್ ಮೈಸೂರು ನಿರ್ಮಾಣಕ್ಕೆ ಮುಖ್ಯವಾಗಿ ಸಿಡಿಪಿ ಹಾಗೂ ಡಿಪಿಆರ್ ರಚನೆಗೆ ಆದ್ಯತೆ ನೀಡಬೇಕು. ಈ ಹಿಂದಿನ ನಿರ್ಮ್ ಯೋಜನೆ ಅನುಷ್ಠಾನದಲ್ಲಾದ ಸಮಸ್ಯೆಗಳನ್ನು ಮರೆಯಬಾರದು. ಅರಮನೆ ಸುತ್ತ ಕಬ್ಬಿಣದ ರೇಲಿಂಗ್ಸ್ ತೆರವು ಮಾಡಿ, ಅಳವಡಿಸಿರುವ ಕಲ್ಲಿನ ಕಂಬಗಳ ಸ್ಥಿತಿ ಏನಾಗಿದೆ ಎಂಬುದು ನೆನಪಿರಲಿ. ಇಂತಹ ಹಲವು ಅವೈಜ್ಞಾನಿಕ ಯೋಜನೆಗಳ ಪರಿಣಾಮವನ್ನು ನಾಗರಿಕರು ಅನುಭವಿಸುತ್ತಿದ್ದಾರೆ.

ಮೊಬೈಲ್ ಚಟಕ್ಕೆ ಬಿದ್ದು ಯುವ ಸಮೂಹ ದಿಕ್ಕೆಡುತ್ತಿದೆ

● ಮುಖ್ಯಮಂತ್ರಿಗಳ ವಿಶೇಷ ಕರ್ತವ್ಯಾಧಿಕಾರಿ ಆರ್.ಮಹದೇವ್ ವಿಷಾದ
● ಪುಸ್ತಕ ಹಿಡಿದು ದೇಶಕ್ಕೆ ಕೊಡುಗೆ ನೀಡಲು ಮುಂದಾಗುವಂತೆ ಕಿವಿಮಾತು

ಮೈಸೂರು, ನ.6(ಎಂಕೆ)– ಮೊಬೈಲ್ ಚಟಕ್ಕೆ ಬಲಿಯಾಗದೆ ಪುಸ್ತಕ ಹಿಡಿದು ದೇಶಕ್ಕೆ ಕೊಡುಗೆ ನೀಡುವಂತೆ ಮುಖ್ಯಮಂತ್ರಿಗಳ ವಿಶೇಷ ಕರ್ತವ್ಯಾಧಿಕಾರಿ ಆರ್.ಮಹದೇವ್ ಕರೆ ನೀಡಿದರು.

ಮೈಸೂರಿನ ಯುವರಾಜ ಕಾಲೇಜಿನ ಅಮೃತ ಮಹೋತ್ಸವ ಸಭಾಂಗಣದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಹಯೋಗದೊಂದಿಗೆ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಹಾಗೂ ಬೂಕರ್ ಪ್ರಶಸ್ತಿ ವಿಜೇತ ಸಾಹಿತಿ ಬಾನುಮುಷ್ತಾಕ್ ಅವರ ‘ಎದೆಯ ಹಣತೆ’ ಕೃತಿ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ಮೊಬೈಲ್‌ಗೆ ಮಾರುಹೋಗುತ್ತಿರುವ ಯುವ ಸಮೂಹ ದಿಕ್ಕು ತಪ್ಪುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ದೇಶದಲ್ಲಿ ಯುವ ಸಮೂಹವೇ ಶೇ.50ಕ್ಕಿಂತಲೂ ಹೆಚ್ಚಿದ್ದು, ಯುವ ಶಕ್ತಿ ದೇಶದ ಪ್ರಗತಿ ಸಹಕಾರಿಯಾಗಬೇಕು. ಆದರೆ, ಮೊಬೈಲ್ ಚಟಕ್ಕೆ ಬಿದ್ದು ಹಾಳಾಗುವವರ ಸಂಖ್ಯೆ ಹೆಚ್ಚಾಗುತ್ತಿದೆ. ಚಿಕ್ಕ ದೇಶ ಜಪಾನ್ ವಿಶ್ವದ ಬಲಿಷ್ಠ ರಾಷ್ಟ್ರಗಳಲ್ಲಿ ಒಂದಾಗಿರುವುದಕ್ಕೆ ಅಲ್ಲಿನ ಯುವ ಸಮೂಹ ನೀಡುತ್ತಿರುವ ಕೊಡುಗೆಯೇ ಕಾರಣ. ಆದ್ದರಿಂದ ಭಾರತ ದೇಶವೂ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಬೇಕಾದರೆ ವಿದ್ಯಾರ್ಥಿಗಳು ಮೊಬೈಲ್ ಗೀಳು ಬಿಟ್ಟು ಅಧ್ಯಯನ ನಡೆಸಬೇಕು ಎಂದು ಕಿವಿಮಾತು ಹೇಳಿದರಲ್ಲದೆ ಕನ್ನಡ ಭಾಷೆ ನಮ್ಮ ಮಾತೃ ಭಾಷೆಯಾಗಿದ್ದು, ಕನ್ನಡ ರಾಜ್ಯೋತ್ಸವದ ಆಚರಣೆಯೊಂದಿಗೆ ಕರ್ನಾಟಕ ಏಕೀಕರಣಕ್ಕೆ ಶ್ರಮಿಸಿದ ಮಹನೀಯರನ್ನು ಸ್ಮರಿಸಬೇಕು ಎಂದರು.



ಯುವರಾಜ ಕಾಲೇಜಿನಲ್ಲಿ ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಪ್ರಾಧ್ಯಾಪಕರಾದ ಪ್ರೊ.ವಿಜಯಕುಮಾರಿ ಎಸ್.ಕರಿಕಲ್ ಹಾಗೂ ಹಿರಿಯ ಪತ್ರಿಕಾ ಛಾಯಾಗ್ರಾಹಕ ಅನುರಾಗ್ ಬಸವರಾಜ್(ಎಂ.ಎಸ್.ಬಸವಣ್ಣ) ಅವರನ್ನು ಸನ್ಮಾನಿಸಲಾಯಿತು.

ಬಳಿಕ ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಪ್ರೊ.ಎನ್.ಕೆ.ಲೋಲಾಕ್ಷಿ ಮುಖ್ಯ ಭಾಷಣ ಮಾಡಿದರೆ, ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ‘ಎದೆಯ ಹಣತೆ–ಸ್ತ್ರೀ ಸಂವೇದನೆ’ ಕುರಿತು ಮದ್ರಾಸ್ ವಿವಿ ಕನ್ನಡ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಪ್ರೊ.ತಮಿಳ್ ಸೆಲ್ವಿ ಹಾಗೂ ‘ಎದೆಯ ಹಣತೆ–ಸಾಮಾಜಿಕ ಪ್ರಜ್ಞೆ’ ಕುರಿತು ವಿಶ್ರಾಂತ ಪ್ರಾಧ್ಯಾಪಕ ಪ್ರೊ.ರಾಜಪ್ಪ ದಳವಾಯಿ ವಿಷಯ ಮಂಡಿಸಿದರು.

ಕೃತಿ ಬಿಡುಗಡೆ ಮತ್ತು ಪ್ರತಿಭಾ ಪುರಸ್ಕಾರ: ಇದಕ್ಕೂ ಮುನ್ನ ಕನ್ನಡ ಸಹ ಪ್ರಾಧ್ಯಾಪಕಿ ಡಾ.ಎಂ.ಎಸ್.ವಸಂತ ರಚಿತ ‘ಮಹತಿ’ ಕೃತಿಯನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಬಿಡುಗಡೆ ಮಾಡಿದರು. ಹಾಗೆಯೇ ಕನ್ನಡ ವಿಷಯದಲ್ಲಿ ಹೆಚ್ಚು ಅಂಕಗಳಿಸಿದ 20 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಪ್ರೋತ್ಸಾಹಿಸಲಾಯಿತು.

ಸನ್ಮಾನ: ಕನ್ನಡ ರಾಜ್ಯೋತ್ಸವದ ಅಂಗವಾಗಿ ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಪ್ರಾಧ್ಯಾಪಕರಾದ ಪ್ರೊ.ವಿಜಯಕುಮಾರಿ ಎಸ್. ಕರಿಕಲ್ ಹಾಗೂ ಹಿರಿಯ ಪತ್ರಿಕಾ ಛಾಯಾಗ್ರಾಹಕ ಅನುರಾಗ್ ಬಸವರಾಜ್ (ಎಂ.ಎಸ್.ಬಸವಣ್ಣ) ಅವರನ್ನು ಸನ್ಮಾನಿಸಲಾಯಿತು. ಯುವರಾಜ ಕಾಲೇಜು ಪ್ರಾಂಶುಪಾಲ ಪ್ರೊ.ಎಸ್.ಮಹದೇವ ಮೂರ್ತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮೈಸೂರು ವಿವಿ ಸಿಂಡಿಕೇಟ್ ಸದಸ್ಯರಾದ ಕ್ಯಾತನಹಳ್ಳಿ ನಾಗರಾಜು, ಡಾ.ಜೆ.ಶಿಲ್ಪಾ, ಯುವರಾಜ ಕಾಲೇಜು ಆಡಳಿತಾಧಿಕಾರಿ ಪ್ರೊ.ಕೆ.ಅಜಯ್ ಕುಮಾರ್, ಪರೀಕ್ಷಾ ನಿಯಂತ್ರಣಾಧಿಕಾರಿ ಪ್ರೊ.ಸಿ.ನಾಗೇಶ್ ಬಾಬು, ಸಂಯೋಜಕ ಪ್ರೊ.ಪಿ.ಕೆ.ಮಹೇಶ್ವರ, ಕನ್ನಡ ಪ್ರಾಧ್ಯಾಪಕ ಡಾ.ಸಿ.ಡಿ.ಪರಶುರಾಮ ಮತ್ತಿತರರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	**ಕಾಂತಾರ ಚಾಪ್ಟರ್ 1(ಕ):** ಮ.1.00ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, **ಡ್ಯೂಡ್ (ತ):** ಬೆ.10.10ಕ್ಕೆ, ಸಂ.4.20ಕ್ಕೆ
ಸ್ಕ್ರೀನ್ 2	**ಬೈಸನ್ (ತ):** ಬೆ.10.00ಕ್ಕೆ, ಸಂಜೆ 4.15ಕ್ಕೆ, **ಡೀಸೆಲ್ (ತ):** ಮ.1.20ಕ್ಕೆ, **ತೆಲುಸು ಕದ (ತೆ):** ರಾ.7.35ಕ್ಕೆ, **ದಿ ಪೆಟ್ ಡಿಟೆಕ್ಟಿವ್ (ಇ):** ರಾ.10.20ಕ್ಕೆ
ಸ್ಕ್ರೀನ್ 3	**ಡ್ಯೂಡ್ (ತ):** ರಾ.7.20ಕ್ಕೆ, ರಾ. 10.15ಕ್ಕೆ, **ಕಾಂತಾರ ಚಾಪ್ಟರ್ 1(ಕ):** ಸಂ. 4.00ಕ್ಕೆ, **ಪ್ರೇಮಿಗಳ ಗಮನಕ್ಕೆ (ಕ):** ಬೆ.10.25ಕ್ಕೆ, **ಟೈಮ್ ಪಾಸ್ (ಕ):** ಮ.1.15ಕ್ಕೆ
ಸ್ಕ್ರೀನ್ 4	**ಕಾಂತಾರ ಚಾಪ್ಟರ್ 1(ಕ):** ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	**ಯಾರಿಗೂ ಹೇಳ್ಬೇಡಿ (ಕ):** ಬೆ.11.15ಕ್ಕೆ, **ಗ್ರೀನ್ (ಕ):** ಮ.2.20ಕ್ಕೆ, **ಬಿಳಿಚುಕ್ಕಿ ಹಳ್ಳಿಹಕ್ಕಿ (ಕ):** ಸಂ.4.35ಕ್ಕೆ, **ತಮ್ಮಾ (ಹಿಂ):** ರಾ.7.15ಕ್ಕೆ.
ಸ್ಕ್ರೀನ್ 2	**ಕಾಂತಾರ –1(ಕ):** ಮ.1ಕ್ಕೆ, ಸಂ.4.20ಕ್ಕೆ, ರಾ.7.25ಕ್ಕೆ.
ಸ್ಕ್ರೀನ್ 3	**ಕಾಂತಾರ –1(ಕ):** ಬೆ.10.45ಕ್ಕೆ, ಮ.2.30ಕ್ಕೆ, ಸಂ.6.15ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	**ತಮ್ಮಾ (ಹಿಂ):** ಮ.1ಕ್ಕೆ, ಮ.3.55ಕ್ಕೆ, ರಾ.9.30ಕ್ಕೆ, **ಡೂಡ್ (ತ):** ಸಂ.6.50ಕ್ಕೆ.

ನೆಕ್ಸಸ್ ಮಾಲ್

ಕಾಂತಾರ ಚಾಪ್ಟರ್ 1(ಕ) : ಬೆ: 8.05ಕ್ಕೆ, 9.05ಕ್ಕೆ, 10.25ಕ್ಕೆ, 11.15ಕ್ಕೆ, ಮ: 12.15ಕ್ಕೆ, 2.40ಕ್ಕೆ, 3.40ಕ್ಕೆ, ಸಂಜೆ 6.05ಕ್ಕೆ, 6.55ಕ್ಕೆ, ರಾತ್ರಿ: 7.05ಕ್ಕೆ, 9.30ಕ್ಕೆ, 9.45ಕ್ಕೆ, 10ಕ್ಕೆ, 10.30ಕ್ಕೆ.

ಕಾಂತಾರ ಚಾಪ್ಟರ್ 1(ಹಿ): ಬೆ: 9.10ಕ್ಕೆ, ಮ.3.10ಕ್ಕೆ.

ಡ್ಯೂಡ್ (ತ): ಬೆ: 10ಕ್ಕೆ, ಸಂ: 4ಕ್ಕೆ, ರಾ: 10.20ಕ್ಕೆ

ಟೈಮ್ ಪಾಸ್ (ಕ): ಬೆ: 11.15ಕ್ಕೆ

ತೆಲುಸು ಕಾದಾ (ತೆ): ಮ: 12.20ಕ್ಕೆ, ರಾತ್ರಿ 7.20ಕ್ಕೆ

ಬೈಸನ್ ಕಾಳಮಂದಾನ್ (ತ): ಬೆ: ಮ: 12.40ಕ್ಕೆ, ಸಂಜೆ 6.35ಕ್ಕೆ

ಡೀಸೆಲ್ (ತ): ಮ: 1.40ಕ್ಕೆ

ಮಹಾಯೋಧ ರಾಮ (ಹಿ): ಮ: 1.50ಕ್ಕೆ

ಕೆ–ರ್‍ಯಾಂಪ್ (ತೆ): ಸಂ: 4.15ಕ್ಕೆ, ರಾ: 10.10ಕ್ಕೆ

ಮಿತ್ರ ಮಂಡಳಿ (ತೆ): ಸಂ: 4.40ಕ್ಕೆ

ಗುಡ್ ಫಾರ್ಚ್ಯೂನ್ (ಇ): ಸಂ: 7.30ಕ್ಕೆ

ಗರುಡ ಮಾಲ್

ಕಾಂತಾರ ಚಾಪ್ಟರ್ 1(ಕ) : ಬೆ: 8.20ಕ್ಕೆ, 9.05ಕ್ಕೆ, 9.40ಕ್ಕೆ, 11.30ಕ್ಕೆ, ಮ: 12.15ಕ್ಕೆ, 2.55ಕ್ಕೆ, 3.40ಕ್ಕೆ, ಸಂ: 6.20ಕ್ಕೆ, 7.05ಕ್ಕೆ, ರಾ: 9.45ಕ್ಕೆ, 10.30ಕ್ಕೆ

ಪ್ರೇಮಿಗಳ ಗಮನಕ್ಕೆ (ಕ): ಬೆ: 11.05ಕ್ಕೆ

ಡ್ಯೂಡ್ (ತ): ಮ: 12.50ಕ್ಕೆ, ರಾ: 7.10ಕ್ಕೆ

ಟೈಮ್ ಪಾಸ್ (ಕ): ಮ: 1.50ಕ್ಕೆ

ಬೈಸನ್ ಕಾಳಮಂದಾನ್ (ತ): ಮ: 3.40ಕ್ಕೆ, ರಾ.10.05ಕ್ಕೆ

ತೆಲುಸು ಕಾದಾ (ತೆ): ಮ: 4.30ಕ್ಕೆ

ಕೆ–ರ್‍ಯಾಂಪ್ (ತೆ): ರಾ: 7.20ಕ್ಕೆ

ಮಿತ್ರ ಮಂಡಳಿ (ತೆ): ರಾ: 10.15ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಗಾಂಜಾ ಮಾರಾಟ ಮಾಡುವಾಗಲೇ ಇಬ್ಬರು ಪೆಡ್ಲರ್‌ಗಳ ಬಂಧನ

ಮೈಸೂರು, ನ.6– ಗಾಂಜಾ ಮಾರಾಟದ ವೇಳೆಯೇ ಇಬ್ಬರು ಪೆಡ್ಲರ್‌ಗಳನ್ನು ಮೈಸೂರಿನ ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಮಂಡ್ಯ ಜಿಲ್ಲೆ ಮದ್ದೂರು ನಿವಾಸಿ ಸುಹೇಲ್ ಪಾಷಾ ಹಾಗೂ ಮೈಸೂರಿನ ಕಾಕರವಾಡಿ ನಿವಾಸಿ ಇರ್ಫಾನ್ ಬಂಧಿತರಾಗಿದ್ದು, ಇವರ ಬಳಿ ಇದ್ದ ಒಂದು ಲಕ್ಷಕ್ಕೂ ಹೆಚ್ಚು ಮೌಲ್ಯದ ಸುಮಾರು ಮೂರೂ ವರೆ ಕೆಜಿ ಗಾಂಜಾ ವಶಪಡಿಸಿಕೊಳ್ಳಲಾಗಿದೆ.

ಬಲೆ ಬೀಸಿ ಬಂಧನ: ನ.2ರಂದು ಮಧ್ಯಾಹ್ನ ಸುಹೇಲ್ ಹಾಗೂ ಇರ್ಫಾನ್‌ನ ಗಾಂಜಾ ವ್ಯವಹಾರದ ಬಗ್ಗೆ ಖಚಿತ ಮಾಹಿತಿ ತಿಳಿದ ಸಿಸಿಬಿ ಪೊಲೀಸರು, ತಡಮಾಡದೆ ಪೆಡ್ಲರ್‌ಗಳ ಬಂಧನಕ್ಕೆ ಬಲೆ ಬೀಸಿದ್ದಾರೆ. ಪೆಡ್ಲರ್‌ಗಳು ವ್ಯವಹರಿಸುವ ನಗರದ ಜೆಎಸ್‌ಎಸ್ ಆಸ್ಪತ್ರೆ ಹಿಂದಿನ ಗೇಟ್ ಬಳಿ ಮರೆಯಲ್ಲಿ ನಿಂತು ಹದ್ದಿನ ಕಣ್ಣಿಟ್ಟಿದ್ದಾರೆ.

ಕೆಲ ಹೊತ್ತಿನಲ್ಲೇ ಅಲ್ಲಿಗೆ ಬಂದ ಇರ್ಫಾನ್, ಚಾಮುಂಡೇಶ್ವರಿ ದೇವಸ್ಥಾನ ಮುಂಭಾಗದ ಅರಳಿಮರದ ಕೆಳಗೆ ಚಡಪಡಿಸುತ್ತಾ ನಿಂತಿದ್ದ. 10 ನಿಮಿಷದ ಬಳಿಕ ಎಜಿ ರಸ್ತೆಯ ಅಂಡರ್‌ಬ್ರಿಡ್ಜ್ ಕಡೆಯಿಂದ ಬಂದ ಸುಹೇಲ್, ಇರ್ಫಾನ್ ಬಳಿ ಮಾತನಾಡುವ ಹೊತ್ತಿಗೆ ಪೊಲೀಸರು ಇಬ್ಬರನ್ನೂ ಸುತ್ತುವರೆದು ಪರಿಶೀಲಿಸಿದಾಗ ಗಾಂಜಾ ಪತ್ತೆಯಾಗಿದೆ. ಇರ್ಫಾನ್‌ಗೆ ಸುಹೇಲ್ ನೀಡಿದ್ದ 3 ಕೆಜಿ 440 ಗ್ರಾ ಗಾಂಜಾ ವಶಪಡಿಸಿಕೊಂಡು, ಇಬ್ಬರನ್ನೂ ಬಂಧಿಸಿದ್ದಾರೆ. ಈ ಸಂಬಂಧ ಕೃಷ್ಣರಾಜ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜೆಎಸ್‌ಎಸ್ ಅಂತರ ಸಂಸ್ಥೆಗಳ ಪುರುಷರ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ



‘ಜೆಎಸ್‌ಎಸ್ ಅಂತರ ಸಂಸ್ಥೆಗಳ ಪುರುಷರ ಕ್ರಿಕೆಟ್ ಪಂದ್ಯಾವಳಿ’ಗೆ ಗುರುವಾರ ಚಾಲನೆ ನೀಡಲಾಯಿತು.

ಮೈಸೂರು, ನ.6(ಎಂಕೆ)– ಮೈಸೂರು ಜೆಎಸ್‌ಎಸ್ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಹಮ್ಮಿಕೊಂಡಿರುವ ಎರಡು ದಿನಗಳ ‘ಜೆಎಸ್‌ಎಸ್ ಅಂತರ ಸಂಸ್ಥೆಗಳ ಪುರುಷರ ಕ್ರಿಕೆಟ್ ಪಂದ್ಯಾವಳಿ’ಗೆ ಗುರುವಾರ ಚಾಲನೆ ನೀಡಲಾಯಿತು.

ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿದ ಜೆಎಸ್‌ಎಸ್ ಮಹಾವಿದ್ಯಾಪೀಠ ವೈದ್ಯಕೀಯ ವಿಭಾಗದ ನಿರ್ದೇಶಕ ಆರ್.ಮಹೇಶ್, ಕ್ರೀಡಾ ಮನೋಭಾವ ವಿದ್ಯಾರ್ಥಿಗಳಲ್ಲಿ ಹೊಸ ಸ್ಫೂರ್ತಿ ಮತ್ತು ಶಿಸ್ತನ್ನು ಬೆಳೆಸುತ್ತದೆ. ಕ್ರೀಡೆ ಶೈಕ್ಷಣಿಕ ಕ್ಷೇತ್ರದ ಅತ್ಯುನ್ನತ ಭಾಗವಾಗಿದ್ದು, ಈ ನಿಟ್ಟಿನಲ್ಲಿ ಪಂದ್ಯಾವಳಿ ಆಯೋಜನೆ ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಎಸ್‌ಜೆಸಿಇ ಉಪಪ್ರಾಂಶುಪಾಲ ಡಾ.ಪಿ.ಮಲ್ಲು ಮಾತನಾಡಿ, ಶೈಕ್ಷಣಿಕ ಸಾಲಿನಿಂದ ಮಹಿಳಾ ಕ್ರಿಕೆಟ್ ಪಂದ್ಯಾವಳಿಯನ್ನು ಆಯೋಜಿಸಲು ಚಿಂತನೆ ನಡೆಸಲಾಗಿದೆ. ಜೆಎಸ್‌ಎಸ್ ಅಂತರ ಕಾಲೇಜು ಕ್ರಿಕೆಟ್ ಪಂದ್ಯಾವಳಿಯಲ್ಲಿ 8 ತಂಡಗಳು ಭಾಗವಹಿಸಿದ್ದು, ಕ್ರೀಡಾಭಿಮಾನಿಗಳ ಪ್ರೋತ್ಸಾಹ ಅಗತ್ಯವಾಗಿದೆ ಎಂದರು.

ಜೆಎಸ್‌ಎಸ್ ಎಸ್‌ಟಿಯುನ ಪರೀಕ್ಷಾ ನಿಯಂತ್ರಣಾಧಿಕಾರಿ ಡಾ.ಪಿ.ನಂಜುಂಡ ಸ್ವಾಮಿ, ಡೀನ್ (ವಿಜ್ಞಾನ ಹಾಗೂ ವಿದ್ಯಾರ್ಥಿ ಕ್ಷೇಮ) ಡಾ.ಎಂ.ಎನ್. ನಾಗೇಂದ್ರ ಸ್ವಾಮಿ, ವಿದ್ಯಾರ್ಥಿ ಕ್ಷೇಮಾಧಿಕಾರಿ ಪ್ರೊ.ಸುನಿಲ್ ಕುಮಾರ್, ದೈಹಿಕ ಶಿಕ್ಷಣ ನಿರ್ದೇಶಕ ಡಾ. ರೇವಣ್ಣ ಮತ್ತಿತರರಿದ್ದರು.

ಭಾರತ-ಆಸ್ಟ್ರೇಲಿಯ ಟಿ 20 ಪಂದ್ಯಾವಳಿ

ಟೀಂ ಇಂಡಿಯಾಗೆ 48 ರನ್ ಜಯ, ಸರಣಿಯಲ್ಲಿ 2–1 ಮುನ್ನಡೆ

ಕ್ವೀನ್ಸ್‌ಲ್ಯಾಂಡ್, ನ.6– ಬೌಲರ್‌ಗಳು ಮ್ಯಾಜಿಕ್ ಬೌಲಿಂಗ್ ಮಾಡಿ 52 ರನ್‌ಗಳ ಅಂತರದಲ್ಲಿ ಆಸ್ಟ್ರೇಲಿಯಾ 9 ವಿಕೆಟ್‌ಗಳನ್ನು ಉರುಳಿಸಿದ್ದರಿಂದ ಭಾರತ 48 ರನ್‌ಗಳ ಭರ್ಜರಿ ಜಯ ಸಾಧಿಸಿದೆ. ಈ ಮೂಲಕ ಐದು ಪಂದ್ಯಗಳ ಟಿ20 ಸರಣಿಯಲ್ಲಿ ಭಾರತ 2–1 ಮುನ್ನಡೆ ಸಾಧಿಸಿದೆ.



ಟಾಸ್ ಸೋತು ಮೊದಲು ಬ್ಯಾಟ್ ಬೀಸಿದ ಟೀಂ ಇಂಡಿಯಾ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 167 ರನ್ ಗಳಿಸಿತು. 168 ರನ್‌ಗಳ ಗುರಿಯನ್ನು ಬೆನ್ನಟ್ಟಿದ ಆಸ್ಟ್ರೇಲಿಯಾ 18.2 ಓವರ್‌ಗಳಲ್ಲಿ 119 ರನ್‌ಗಳಿಗೆ ಆಲೌಟ್ ಆಯಿತು.

ಹಾಗೆ ನೋಡಿದರೆ 8.4 ಓವರ್‌ಗಳಲ್ಲಿ 67 ರನ್‌ಗಳಿಗೆ 1 ವಿಕೆಟ್ ಕಳೆದುಕೊಂಡು ಆಸ್ಟ್ರೇಲಿಯಾ ಉತ್ತಮ ಸ್ಥಿತಿಯಲ್ಲಿತ್ತು. ಜೋಶ್ ಇಂಗ್ಲಿಸ್ ವಿಕೆಟ್ ಬಿದ್ದ ಬೆನ್ನಲ್ಲೇ ಆಸ್ಟ್ರೇಲಿಯಾ ಪತನ ಆರಂಭವಾಯಿತು.

ಆಸ್ಟ್ರೇಲಿಯಾ ಪರ ಮಿಚೆಲ್ ಮಾರ್ಷ್ 24 ಎಸೆತಗಳಲ್ಲಿ 4 ಬೌಂಡರಿಗಳ ನೆರವಿಂದ 30 ರನ್ ಗಳಿಸಿ ಶಿವಂ ದುಬೆಗೆ ವಿಕೆಟ್ ಒಪ್ಪಿಸಿದರು. ಮ್ಯಾಟ್ ಶಾರ್ಟ್ 19 ಎಸೆತಗಳಲ್ಲಿ 2 ಸಿಕ್ಸರ್ 2 ಬೌಂಡರಿ ನೆರವಿಂದ 25 ರನ್ ಗಳಿಸಿ ಔಟಾದರು.

ಜೋಶ್ ಇಂಗ್ಲಿಸ್ 11 ಎಸೆತಗಳಲ್ಲಿ ಕೇವಲ 12 ರನ್ ರನ್ ಗಳಿಸಿ ಅಕ್ಷರ್ ಪಟೇಲ್‌ಗೆ ವಿಕೆಟ್ ಒಪ್ಪಿಸಿದರು. ಟಿಮ್ ಡೆವಿಡ್ 9 ಎಸೆತಗಳಲ್ಲಿ 1 ಸಿಕ್ಸ್ 1 ಬೌಂಡರಿ ಸಿಡಿಸಿ 14 ರನ್ ಕಲೆ ಹಾಕಿ ಪೆವಿಲಿಯನ್‌ಗೆ ಮರಳಿದರು. ಜೋಶ್ ಫಿಲಿಪ್ 10 ಎಸೆತಗಳಲ್ಲಿ ಒಂದು ಬೌಂಡರಿ ಬಾರಿಸಿ 10 ರನ್ ಗಳಿಸಿ ಔಟಾದರು. ಗ್ಲೆನ್ ಮ್ಯಾಕ್ಸ್‌ವೆಲ್ 4 ಎಸೆತಗಳಲ್ಲಿ 2 ರನ್ ಗಳಿಸಿ ಔಟಾಗುವ ಮೂಲಕ ಕಳಪೆ ಪ್ರದರ್ಶನ ನೀಡಿದರು. ಮಾರ್ಕಸ್ ಸ್ಟೊಯಿನಿಸ್ 19 ಎಸೆತಗಳಲ್ಲಿ 2 ಬೌಂಡರಿ ಸಿಡಿಸಿ 17 ರನ್ ಗಳಿಸಿದರು. ಬೆನ್ ದ್ವಾರ್ಶುಯಿಸ್ ಕೇವಲ 5 ರನ್‌ಗೆ ಸುಸ್ತಾದರು.

ಭಾರತದ ಪರ ವಾಷಿಂಗ್ಟನ್ ಸುಂದರ್ 3 ವಿಕೆಟ್ ಕುಳಿಸಿದರೆ, ಅಕ್ಷರ್ ಪಟೇಲ್, ಶಿವಂ ದುಬೆ ತಲಾ 2 ವಿಕೆಟ್ ಕಿತ್ತರು. ಅರ್ಷದೀಪ್ ಸಿಂಗ್, ಜಸ್ಪ್ರೀತ್ ಬುಮ್ರಾ, ವರುಣ್ ಚಕ್ರವರ್ತಿ ತಲಾ ಒಂದೊಂದು ವಿಕೆಟ್ ಪಡೆದರು.

ಭಾರತದ ಆರಂಭಿಕ ಆಟಗಾರರಾದ ಅಭಿಷೇಕ್ ಶರ್ಮಾ ಹಾಗೂ ಶುಭಮನ್ ಗಿಲ್ ಜೋಡಿ 6.4 ಓವರ್‌ಗಳಲ್ಲಿ 56 ರನ್ ಸೇರಿಸಿತು. ಅಭಿಷೇಕ್ ಶರ್ಮಾ 21 ಎಸೆತಗಳಲ್ಲಿ 3 ಬೌಂಡರಿ, 1 ಸಿಕ್ಸರ್ ಸಹಾಯದಿಂದ 28 ರನ್ ಬಾರಿಸಿ ಆಡಂ ಜಂಪಾಗೆ ವಿಕೆಟ್ ಒಪ್ಪಿಸಿದರು. ಶಿವಂ ದುಬೆ 18 ಎಸೆತಗಳಲ್ಲಿ 1 ಬೌಂಡರಿ, 1 ಸಿಕ್ಸರ್ ಸಹಾಯದಿದ 22 ರನ್ ಕಲೆಹಾಕಿ, ನಾತನ್ ಎಲ್ಲಿಸ್‌ಗೆ ವಿಕೆಟ್ ಒಪ್ಪಿಸಿದರು.

ದುಬೆ ಔಟ್ ಆಗುತ್ತಿದ್ದಂತೆ ಕ್ರೀಸ್‌ಗೆ ಬಂದ ಟೀಂ ಇಂಡಿಯಾ ನಾಯಕ ಸೂರ್ಯಕುಮಾರ್ ಯಾದವ್, ಆಡಂ ಜಂಪಾ ಅವರು ಎಸೆದ ಇನಿಂಗ್ಸ್‌ನ 13ನೇ ಓವರ್‌ನಲ್ಲಿ ಬ್ಯಾಕ್ ಟು ಬ್ಯಾಕ್ ಸಿಕ್ಸರ್‌ಗಳನ್ನು ಬಾರಿಸಿ ಅಬ್ಬರಿಸಿದರು. ಶುಭ್‌ಮನ್ ಗಿಲ್ ಹಾಗೂ ಸೂರ್ಯಕುಮಾರ್ ಯಾದವ್ ಜೋಡಿ 16 ಓವರ್‌ಗಳಲ್ಲಿ 33 ರನ್ ಸಿಡಿಸಿತು. ಶುಭಮನ್ ಗಿಲ್ 39 ಎಸೆತಗಳಲ್ಲಿ 4 ಬೌಂಡರಿ, 1 ಸಿಕ್ಸರ್ ಸಹಾಯದಿಂದ 46 ರನ್ ಬಾರಿಸಿ ಔಟ್ ಆದರು. ಸೂರ್ಯಕುಮಾರ್ ಯಾದವ್ 10 ಎಸೆತಗಳಲ್ಲಿ 2 ಸಿಕ್ಸರ್ ಸೇರಿದಂತೆ 20ರನ್ ಬಾರಿಸಿ ಔಟ್ ಆದರು.

ತಿಲಕ್ ವರ್ಮಾ, ಜಿತೇಶ್ ಶರ್ಮಾ ಅವರು ಆಡಂ ಜಂಪಾ ಅವರಿಗೆ ವಿಕೆಟ್ ಒಪ್ಪಿಸಿದರು. ಆಲ್‌ರೌಂಡರ್ ಅಕ್ಷರ್ ಪಟೇಲ್ 11 ಎಸೆತಗಳಲ್ಲಿ 1 ಬೌಂಡರಿ, 1 ಸಿಕ್ಸರ್ ಸಹಾಯದಿಂದ ಅಜೇಯ 21 ರನ್ ಬಾರಿಸಿದರು. ಆಸ್ಟ್ರೇಲಿಯಾ ತಂಡ ಸ್ಲಾಗ್ ಓವರ್‌ಗಳಲ್ಲಿ ಉತ್ತಮ ದಾಳಿ ನಡೆಸಿತು. ಆಸ್ಟ್ರೇಲಿಯಾ ಪರ ನಾತನ್ ಎಲ್ಲಿಸ್ ಹಾಗೂ ಆಡಂ ಜಂಪಾ ತಲಾ 3 ವಿಕೆಟ್ ಕಬಳಿಸಿದರು.

ಒಂಟಿಕೊಪ್ಪಲಲ್ಲಿ ಶಾಸಕ ಹರೀಶ್‌ಗೌಡರ ಪಾದಯಾತ್ರೆ; ನಿವಾಸಿಗಳ ಕುಂದು–ಕೊರತೆ ಶೀಘ್ರ ನಿವಾರಣೆಗೆ ಸೂಚನೆ



ಮೈಸೂರಿನ ಒಂಟಿಕೊಪ್ಪಲಿನಲ್ಲಿ ಶಾಸಕ ಕೆ.ಹರೀಶ್‌ಗೌಡ ಗುರುವಾರ ಪಾದಯಾತ್ರೆ ನಡೆಸಿ, ನಿವಾಸಿಗಳು ಕುಂದು–ಕೊರತೆ ಆಲಿಸಿದರು.

ಮೈಸೂರು, ನ.6(ಎಂಕೆ)– ಮೈಸೂರಿನ ವಾರ್ಡ್ ನಂ.22ರ ವ್ಯಾಪ್ತಿಯ ಒಂಟಿಕೊಪ್ಪಲಿನಲ್ಲಿ ಗುರುವಾರ ಪಾದಯಾತ್ರೆ ನಡೆಸಿದ ಶಾಸಕ ಕೆ.ಹರೀಶ್‌ಗೌಡ, ನಿವಾಸಿಗಳು ಕುಂದು–ಕೊರತೆ ಆಲಿಸಿದರು.

ಪಾಲಿಕೆ ಅಧಿಕಾರಿಗಳೊಂದಿಗೆ ಬೆಳಗ್ಗೆಯಿಂದ ಮಧ್ಯಾಹ್ನದವರೆಗೆ ಪಾದಯಾತ್ರೆ ನಡೆಸಿದ ಶಾಸಕರು, ಒಂಟಿಕೊಪ್ಪಲಿನ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ನಿವಾಸಿಗಳ ಸಮಸ್ಯೆಗಳನ್ನು, ಸ್ಥಳದಲ್ಲೇ ಕೆಲ ಸಮಸ್ಯೆಗಳನ್ನು ಬಗೆಹರಿಸಿದರು. ರಸ್ತೆ ಅಭಿವೃದ್ಧಿ, ಒಳಚರಂಡಿ ವ್ಯವಸ್ಥೆ, ಕುಡಿಯುವ ನೀರಿನ ಸಮಸ್ಯೆ ಕೂಡಲೇ ಬಗೆಹರಿಸುವಂತೆ ಪಾಲಿಕೆ ಅಧಿಕಾರಿಗಳಿಗೆ ಸೂಚಿಸಿದರು.

ಪುಂಡರ ಹಾವಳಿ ತಪ್ಪಿಸಲು ಕಾಲೇಜು ಹಾಗೂ ಉದ್ಯಾನವನ ಭಾಗದಲ್ಲಿ ರಾತ್ರಿ ಗಸ್ತು ಹೆಚ್ಚಿಸುವಂತೆ ಸ್ಥಳದಲ್ಲಿದ್ದ ಪೊಲೀಸ್ ಅಧಿಕಾರಿಗಳಿಗೆ ಸೂಚಿಸಿದರಲ್ಲದೆ ಕಿರಿದಾದ ರಸ್ತೆಯಲ್ಲಿದ್ದ ವಿದ್ಯುತ್ ಕಂಬಗಳು ಅವೈಜ್ಞಾನಿಕವಾಗಿದ್ದು, ಅವುಗಳನ್ನು ಸ್ಥಳಾಂತರಗೊಳಿಸುವಂತೆ ಹೇಳಿದರು.

ಹಲವು ಅಡ್ಡ ರಸ್ತೆಗಳು, ಮಳೆ ನೀರು ಚರಂಡಿ ಹಾಗೂ ಒಳಚರಂಡಿ ಪೈಪ್‌ಲೈನ್ ಬದಲಿಸುವಂತೆ ತಿಳಿಸಿದರು. ಬಳಿಕ ಶ್ರೀರಾಮ ಕಲ್ಯಾಣ ಮಂಟಪದಲ್ಲಿ ಸಾರ್ವಜನಿಕ ಸಭೆ ನಡೆಸಿ ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಿದರು.

ಮಾಜಿ ಮೇಯರ್ ಬಿ.ಕೆ.ಪ್ರಕಾಶ್, ನಗರಪಾಲಿಕೆ ಮಾಜಿ ಸದಸ್ಯರಾದ ಎಂ.ರಮೇಶ್, ಭಾಗ್ಯ ಮಹದೇಶ್, ಚಾಮರಾಜ ವಿಧಾನಸಭಾ ಕ್ಷೇತ್ರದ ಇಂದಿರಾ ಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ವಾರ್ಡ್ ಅಧ್ಯಕ್ಷ ಕುಮಾರ್, ಯುವ ಕಾಂಗ್ರೆಸ್ ಅಧ್ಯಕ್ಷ ನಿಶಾಂತ್ ಪಟೇಲ್, ಮುಖಂಡರಾದ ಪೈಲ್ವಾನ್ ಪ್ರಕಾಶ್, ಒಂಟಿಕೊಪ್ಪಲು ಗುರುರಾಜ್, ಜಗದೀಶ್, ಮಧು, ಮಹದೇವ ಸ್ವಾಮಿ, ಶ್ರೀಕಂಠು, ಶ್ರೀರಾಮ್, ಜಗದೀಶ್, ಪ್ರೇಮ್ ಕುಮಾರ್, ಸುಮಾ ನಾಗರಾಜ್, ಲಕ್ಷ್ಮಿ, ಟೆಂಟ್‌ಹೌಸ್ ನಾಗರಾಜ್, ಮಂಜು, ಚರಣರಾಜ್, ಆದರ್ಶ್, ಯೋಗೇಶ್, ಶಂಭು, ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಮಹದೇಶ್, ಸಿಟಿ ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಜೆ.ಯೋಗೇಶ್, ರಾಜಣ್ಣ, ಕೃಪಾನಂದ ಮತ್ತಿತರರಿದ್ದರು

ಅಪ್ರಾಪ್ತ ತಂಗಿಯ ಗರ್ಭಿಣಿ ಮಾಡಿ ಜೈಲು ಸೇರಿದ ಅಣ್ಣ; ಗಂಡು ಮಗುವಿಗೆ ಜನ್ಮ ನೀಡಿದ ಅಪ್ರಾಪ್ತೆ!

ಕೊಪ್ಪಳ, ನ.6– ಮನೆಯಲ್ಲಿ ಯಾರೂ ಇಲ್ಲದಾಗ ತನ್ನ ಅಪ್ರಾಪ್ತ ತಂಗಿಯನ್ನೇ ನಿರಂತರವಾಗಿ ಅತ್ಯಾಚಾರ ಮಾಡುತ್ತಿದ್ದ ಅಣ್ಣ ಇದೀಗ ಪೋಕ್ಸೋ ಪ್ರಕರಣದಲ್ಲಿ ಜೈಲು ಸೇರಿದ್ದಾನೆ. ಇನ್ನು ಗರ್ಭವತಿಯಾಗಿದ್ದ ಬಾಲಕಿ ವಾರದ ಹಿಂದೆ ಗಂಡು ಮಗುವಿಗೆ ಜನ್ಮ ನೀಡಿದ್ದಾಳೆ. ಸದ್ಯ ಆರೋಪಿಯನ್ನು ಪೊಲೀಸರು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಕಳೆದ ಅಕ್ಟೋಬರ್ 26ರ ಬೆಳಿಗ್ಗೆ ಮನೆ ಕೆಲಸ ಮಾಡುವಾಗ ಬಾಲಕಿ ಜಾರಿ ಬಿದ್ದಿದ್ದಳು. ಹೀಗಾಗಿ ಬಾಲಕಿಯನ್ನು ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಪರೀಕ್ಷಿಸಿದ ವೈದ್ಯರು ಬಾಲಕಿಯ ಬೆನ್ನಿಗೆ ಗಾಯವಾಗಿದ್ದು ಸ್ಕ್ಯಾನಿಂಗ್ ಮಾಡುವಂತೆ ಸೂಚಿಸಿದರು. ನಂತರ ಅಕ್ಟೋಬರ್ 30ರಂದು ಬಾಲಕಿಗೆ ಕೊಪ್ಪಳ ಜಿಲ್ಲಾಸ್ಪತ್ರೆಯಲ್ಲಿ ಸ್ಕ್ಯಾನಿಂಗ್ ಮಾಡಿಸಿದಾಗ ಹೊಟ್ಟೆಯಲ್ಲಿ ಮಗುವಿರುವುದು ಪತ್ತೆಯಾಗಿತ್ತು. ಅದೇ ದಿನ ರಾತ್ರಿ ಗಂಡು ಮಗುವಿಗೆ ಆಕೆ ಜನ್ಮ ನೀಡಿದ್ದಳು. ತಾನೂ ಗರ್ಭಿಣಿಯಾಗಿದ್ದ ವಿಷಯ ತನಗೆ ಗೊತ್ತಿಲ್ಲ ಎಂದು ಬಾಲಕಿ ಹೇಳಿದ್ದಳು. ಆದರೆ ಯಾರೂ ಇಲ್ಲದಾಗ ತನ್ನ ಮೇಲೆ ಅಣ್ಣ ಲೈಂಗಿಕ ದೌರ್ಜನ್ಯ ನಡೆಸುತ್ತಿದ್ದ ಎಂದು ಬಾಲಕಿ ಪೋಷಕರಿಗೆ ತಿಳಿಸಿದ್ದಳು. ನಂತರ ಕೊಪ್ಪಳ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಳು.

ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ನ. 6– ಎನ್‌ಜೆಎಸ್ ಚಾರಿಟಬಲ್ ಟ್ರಸ್ಟ್, ಮೈಸೂರು ವೀರಶೈವ ಸಜ್ಜನ ಸಂಘದ ಸಂಯುಕ್ತ ಆಶ್ರಯದಲ್ಲಿ ನ.11ರಂದು ಬೆಳಗ್ಗೆ 9.30ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಮಂಡಿ ಮೊಹಲ್ಲಾ, ಕಬೀರ್ ರಸ್ತೆ, ಮಂಡಿ ಪೊಲೀಸ್ ಸ್ಟೇಷನ್ ಹತ್ತಿರದ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಹೆಚ್.ಎಸ್.ಬಸವರಾಜ್, ಮೊ. 94487 53597, ಎಂ.ಎನ್. ಜೈಪ್ರಕಾಶ್, ಮೊ. 99161 55453 ಸಂಪರ್ಕಿಸಬಹುದು.

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರು ಕೆಳಗೆ ನಮೂದಿಸಿರುವ ಷೆಡ್ಯೂಲ್ ಸ್ವತ್ತನ್ನು ಶ್ರೀ ಎಮ್.ಎಸ್. ಚಂದ್ರಶೇಕರ್ ಎಂಬುವರಿಂದ ಖರೀದಿಸುವ ಇರಾದೆಯನ್ನು ಹೊಂದಿರುತ್ತಾರೆ. ಆದುದರಿಂದ ಷೆಡ್ಯೂಲ್ ಸ್ವತ್ತಿನ ವಿಷಯದಲ್ಲಿ ಯಾರಿಗಾದರೂ ಯಾವುದೇ ತೆರನಾದ ಹಕ್ಕು ಅಥವಾ ಅಧಿಕಾರವಿದ್ದಲ್ಲಿ ಅಥವಾ ಸದರಿ ಮಾರಾಟಕ್ಕೆ ಯಾವುದೇ ತಕರಾರು ಇದ್ದಲ್ಲಿ ಅವರುಗಳು ನಮಗೆ ಲಿಖಿತ ನೋಂದಾಯಿತ ಅಂಚೆಯ ಮೂಲಕ ದಾಖಲಾತಿಗಳ ಸಹಿತ ಷೆಡ್ಯೂಲ್ ಸ್ವತ್ತಿನ ಮೇಲೆ ಅವರಿಗೆ ಇರುವ ಹಕ್ಕು ಅಥವಾ ಅಧಿಕಾರ ಅಥವಾ ತಕರಾರಿನ ಸ್ವರೂಪವನ್ನು ಈ ಪ್ರಕಟಣೆಯಾದ ಏಳು ದಿನಗಳೊಳಗಾಗಿ ತಿಳಿಸತಕ್ಕದ್ದು. ಈ ಮೇಲೆ ಹೇಳಿದ ಏಳು ದಿನಗಳೊಳಗೆ ಈ ಪ್ರಕಟಣೆಗೆ ಯಾವುದೇ ಪ್ರತಿಕ್ರಿಯೆ ಬಾರದಿದ್ದಲ್ಲಿ ಷೆಡ್ಯೂಲ್ ಸ್ವತ್ತಿನ ಮೇಲೆ ಈ ಮೇಲೆ ನಮೂದಿಸಿರುವ ವ್ಯಕ್ತಿಯನ್ನುಳಿದು ಇನ್ನು ಯಾರಿಗೂ ಯಾವುದೇ ತೆರನಾದ ಹಕ್ಕು ಅಥವಾ ಅಧಿಕಾರ ಇರುವುದಿಲ್ಲವೆಂದು ಪರಿಗಣಿಸಿ ನನ್ನ ಕಕ್ಷಿದಾರರು ಸದರಿ ಸ್ವತ್ತನ್ನು ಖರೀದಿಸುತ್ತಾರೆ. ಈ ಪ್ರಕಟಣೆಯಾದ ಏಳು ದಿನಗಳ ನಂತರ ಬರುವ ಯಾವುದೇ ತಕರಾರುಗಳನ್ನು ಪರಿಗಣಿಸಲಾಗುವುದಿಲ್ಲ.

ಷೆಡ್ಯೂಲ್

ಮೈಸೂರು ನಗರ ಜೆ.ಪಿ.ನಗರ ನಾಚನಹಳ್ಳಿ ಬಡಾವಣೆ 2ನೇ ಹಂತ, 20ನೇ ಮುಖ್ಯ ರಸ್ತೆಯಲ್ಲಿರುವ ಪೂರ್ವ ಪಶ್ಚಿಮ: 13.716027 ಮೀಟರುಗಳು ಮತ್ತು ಉತ್ತರ ದಕ್ಷಿಣ: 18.288037 ಮೀಟರುಗಳ ಅಳತೆಯುಳ್ಳ ಹಳೆ ಸಂಖ್ಯೆ 23 ನಿರ್ಧರಣಾ ಸಂಖ್ಯೆ 23 ಸ್ವತ್ತಿನ ಐ.ಡಿ. ಸಂಖ್ಯೆ 12–7–735–770 ರ ನಿವೇಶನದಲ್ಲಿ ನಿರ್ಮಾಣ ಮಾಡಿರುವ ಸ್ವತ್ತಿಗೆ ಚಕ್ಕುಬಂದಿ: ಪೂರ್ವಕ್ಕೆ : ನಿವೇಶನ ಸಂಖ್ಯೆ 24, ಪಶ್ಚಿಮಕ್ಕೆ : ನಿವೇಶನ ಸಂಖ್ಯೆ 22, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ನಿವೇಶನ ಸಂಖ್ಯೆ 26.

ಸಹಿ/– (ಎ.ವಿ.ಜಯರಾಮ ರಾವ್)
ವಕೀಲರು, ನಂ1230/ಎ, 2ನೇ ಕ್ರಾಸ್
(ಕೃಷ್ಣಮೂರ್ತಿಪುರಂ ರಾಮ ಮಂದಿರದ ಹಿಂಭಾಗ) ಚಾಮರಾಜ ಮೊಹಲ್ಲ,
ಮೈಸೂರು–570 004
ದೂರವಾಣಿ : 0821–7960559



6ನೇ ವರ್ಷದ ಸವಿನೆನಪು
ಕೆಂಡಗಣ್ಣಶೆಟ್ಟಿ.ಎಂ.ಎ
ನೀವು ನಮ್ಮನ್ನಗಲಿ ಇಂದಿಗೆ 6 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ಪತ್ನಿ: ಶ್ರೀಮತಿ ಸುಜಾತ ಮತ್ತು ಮಕ್ಕಳು, ಶ್ರೀ ರಾಮೇಶ್ವರ ಪ್ರಾವಿಷನ್ ಸ್ಟೋರ್ & ಶ್ರೀ ಅನ್ನಪೂರ್ಣೇಶ್ವರಿ ಅಕ್ಕಿ ಅಂಗಡಿ
9945768413 & 8971369413
ಬಸವನಗುಡಿ, ಮೈಸೂರು



10ನೇ ವರ್ಷದ ಪುಣ್ಯಸ್ಮರಣೆ
ಮೇಸ್ತ್ರಿ ರಮೇಶ್
ಎನ್.ಆರ್.ಮೊಹಲ್ಲಾ, ಮೈಸೂರು.
ಇಂತಿ ದುಃಖತಪ್ತರು: ಪತ್ನಿ, ಮಕ್ಕಳು, ಸೊಸೆಯಂದಿರು, ತಮ್ಮಂದಿರು ಹಾಗೂ ಕುಟುಂಬವರ್ಗದವರು.



12ನೇ ವರ್ಷದ ಪುಣ್ಯಸ್ಮರಣೆ
ಪಿ. ರಾಮಚಂದ್ರ (ವಿಜಿ) (ಕೆ.ಆರ್.ಆಸ್ಪತ್ರೆ)
ದುಃಖತಪ್ತರು: ಪತ್ನಿ ಗಾಯಿತ್ರಿ ರಾಮಚಂದ್ರ ಮಕ್ಕಳು ಮತ್ತು ಮೊಮ್ಮಕ್ಕಳು.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ನಗರ ವಿಭಾಗ (ಜೆ.ಎನ್.ನರ್ಮ್), ಜಲಭವನ, 2ನೇ ಮಹಡಿ ಸರಸ್ವತಿಪುರಂ,
ಮೈಸೂರು–570009 ದೂರವಾಣಿ : 0821– 2411463
ಇ–ಮೇಲ್: kwbmysjnee@gmail.com

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಈ ಕಛೇರಿಯಿಂದ, ಮುಖ್ಯ ಅಭಿಯಂತರರು, ಕನನೀಸ ಮತ್ತು ಒ.ಚ. ಮಂಡಳಿ, ಮೈಸೂರು ವಲಯ, ಮೈಸೂರು ವ್ಯಾಪ್ತಿಯಲ್ಲಿರುವ ಕಛೇರಿಗೆ ಅಗತ್ಯವಿರುವ 1 ಸಂಖ್ಯೆ ಡಿಪ್ಲೋಮಾ ಇಂಜಿನಿಯರ್ ಸಿಬ್ಬಂದಿಯನ್ನು ಹೊರಗುತ್ತಿಗೆ ಆಧಾರದಲ್ಲಿ ಪಡೆಯಲು ಸರ್ವಿಸ್ ಟೆಂಡರ್ CALL-2 ಅನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ರಲ್ಲಿ ಕರೆಯಲಾಗಿದ್ದು, ಟೆಂಡರಿಗಿಟ್ಟ ಮೊತ್ತ, ಶುಲ್ಕ, ಷರತ್ತು, ಇತರೆ ಹೆಚ್ಚಿನ ಮಾಹಿತಿಗೆ https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರು,
ಕ.ನ.ನೀ.ಸ. ಮತ್ತು ಒ.ಚ. ಮಂಡಳಿ
ನಗರ ವಿಭಾಗ (ಜೆ.ಎನ್.ನರ್ಮ್),ಮೈಸೂರು

ಗೌರವಾನ್ವಿತ ನಾಲ್ಕನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಸಿ.ಜೆ.ಎಂ ಮೈಸೂರು

ಅಸಲು ದಾವಾ ಸಂಖ್ಯೆ : 1006/2024

ವಾದಿಗಳು : ಶ್ರೀಮತಿ ಮಹದೇವಮ್ಮ ಮತ್ತು ಇತರರು, ವಿರುದ್ಧ ಪ್ರತಿವಾದಿಗಳು : ಶ್ರೀ. ಮುದ್ದುರಾಮಯ್ಯ ಮತ್ತು ಇತರರು, ಪ್ರತಿವಾದಿ ಸಂಖ್ಯೆ: 3 : ಶ್ರೀ ಸುಬ್ಬಶೆಟ್ಟಿ, ಬಿನ್ ಲೇಟ್ ಅಂಗಡಿ ಚೆನ್ನಶೆಟ್ಟಿ @ ಚೆನ್ನಶೆಟ್ಟಿ ವಯಸ್ಸು ಸುಮಾರು 67 ವರ್ಷ, ವಾಸ: ದೊಡ್ಡ ಅರಸಿನಕೆರೆ ಗ್ರಾಮ, ಚಿಕ್ಕರಸಿನಕೆರೆ ಹೋಬಳಿ, ಚಿಕ್ಕರೆ ಮದ್ದೂರು ತಾಲ್ಲೂಕು, ಪ್ರತಿವಾದಿ ಸಂಖ್ಯೆ 4 : ಶ್ರೀಮತಿ. ಭಾಗ್ಯಮ್ಮ ಬಿನ್ ಲೇಟ್ ಅಂಗಡಿ ಚೆನ್ನಶೆಟ್ಟಿ @ಚೆನ್ನಶೆಟ್ಟಿ ವಾಸ : ಸಂತೆಕೆಸಲಗೆರೆ ಗ್ರಾಮ, ಕೊತ್ತತ್ತಿ ಹೋಬಳಿ, ಮಂಡ್ಯ ತಾಲ್ಲೂಕು ಮತ್ತು ಜಿಲ್ಲೆ. ಪ್ರತಿವಾದಿ ಸಂಖ್ಯೆ: 10 : ಶ್ರೀಮತಿ ಶಾರದಮ್ಮ ಬಿನ್ ಲೇಟ್ ಚೆನ್ನಶೆಟ್ಟಿ @ಚೆನ್ನಪ್ಪ ವಯಸ್ಸು ಸುಮಾರು 60 ವರ್ಷ, ವಾಸ: ದೊಡ್ಡರಸಿನಕೆರೆ ಗ್ರಾಮ, ಚಿಕ್ಕರಸಿನಕೆರೆ ಹೋಬಳಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ. ಪ್ರತಿವಾದಿ ಸಂಖ್ಯೆ: 11 : ಶ್ರೀ ವೆಂಕಟೇಶ, ಬಿನ್ ಲೇಟ್ ಚೆನ್ನಶೆಟ್ಟಿ @ ಚೆನ್ನಪ್ಪ ವಯಸ್ಸು ಸುಮಾರು 29 ವರ್ಷ, ವಾಸ: ದೊಡ್ಡರಸಿನಕೆರೆ ಗ್ರಾಮ, ಚಿಕ್ಕರಸಿನಕೆರೆ ಹೋಬಳಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ. ಪ್ರತಿವಾದಿ ಸಂಖ್ಯೆ: 12 : ಶ್ರೀಮತಿ ಕಾವ್ಯ, ಬಿನ್ ಚನ್ನಶೆಟ್ಟಿ @ ಚೆನ್ನಪ್ಪ, ವಯಸ್ಸು ಸುಮಾರು 26 ವರ್ಷ, ವಾಸ: ದೊಡ್ಡರಸಿನಕೆರೆ ಗ್ರಾಮ. ಚಿಕ್ಕರಸಿನಕೆರೆ ಹೋಬಳಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ, ಪ್ರತಿವಾದಿ ಸಂಖ್ಯೆ: 13 : ಶ್ರೀಮತಿ, ಸೌಮ್ಯಾ ಬಿನ್ ಲೇಟ್ ಚನ್ನಶೆಟ್ಟಿ @ ಚೆನ್ನಪ್ಪ ವಯಸ್ಸು ಸುಮಾರು 24 ವರ್ಷ, ವಾಸ: ದೊಡ್ಡರಸಿನಕೆರೆ ಗ್ರಾಮ ಚಿಕ್ಕರಸಿನಕೆರೆ ಹೋಬಳಿ, ಮದ್ದೂರು ತಾಲೂಕು, ಮಂಡ್ಯ ಜಿಲ್ಲೆ, ಪ್ರತಿವಾದಿ ಸಂಖ್ಯೆ: 14 : ಶ್ರೀ ಮಹದೇವು ಬಿನ್ ಲೇಟ್ ವೆಂಕಟಶೆಟ್ಟಿ, ವಯಸ್ಸು ಸುಮಾರು 64 ವರ್ಷ. ವಾಸ: ನಂ.185, ಕೂಡನಹಳ್ಳಿ ಗ್ರಾಮ, ವರುಣಾ ಹೋಬಳಿ, ಮೈಸೂರು ತಾಲ್ಲೂಕು, ಪ್ರತಿವಾದಿ ಸಂಖ್ಯೆ: 15 : ಶ್ರೀಮತಿ. ಎಂ.ಲಕ್ಷ್ಮಿ ಬಿನ್ ಲೇಟ್ ಮಾದಶೆಟ್ಟಿ, ಕೋಂ ಶಿವಣ್ಣ, ವಯಸ್ಸು ಸುಮಾರು 48 ವರ್ಷ, ವಾಸ : #18, 2ನೇ ಮಹಡಿ, 6ನೇ ಮುಖ್ಯ ರಸ್ತೆ, ಮಾರುತಿ ಸ್ಟ್ರೀಟ್, ಬೆಂಗಳೂರು ಉತ್ತರ. ಪ್ರತಿವಾದಿ ಸಂಖ್ಯೆ: 16 ಶ್ರೀ. ಕುಮಾರ ಬಿನ್ ಲೇಟ್ ಮಾದಶೆಟ್ಟಿ, ವಯಸ್ಸು ಸುಮಾರು 46 ವರ್ಷ, ವಾಸ: #3269/ಎ, 6ನೇ ಕ್ರಾಸ್, 'ಸಿ' ಬ್ಲಾಕ್, ಗಾಯಿತ್ರಿ ನಗರ, ಬೆಂಗಳೂರು ಉತ್ತರ. ಪ್ರತಿವಾದಿ ಸಂಖ್ಯೆ: 17 : ಶ್ರೀಮತಿ ರಾಜಿ @ ರಾಜಮ್ಮ ಬಿನ್ ಲೇಟ್ ಮಾದಶೆಟ್ಟಿ ಕೋಂ ವೆಂಕಟೇಶ, ಟಿ. ವಾಸ: ನಂ.185. ಕೂಡನಹಳ್ಳಿ ಗ್ರಾಮ, ವರುಣಾ ಹೋಬಳಿ, ಮೈಸೂರು ತಾಲ್ಲೂಕು,

ನ್ಯಾಯಾಲಯದ ತಿಳುವಳಿಕೆ

ಮೇಲ್ಕಂಡ ವಾದಿಗಳು ಪ್ರತಿವಾದಿಗಳ ವಿರುದ್ಧ ಅಸಲು ದಾವಾ ಸಂಖ್ಯೆ:1006/2024 ರಲ್ಲಿ ದಾವಾ ಸ್ವತ್ತುಗಳ ಭಾಗಾಂಶ ಮತ್ತು ಪ್ರತ್ಯೇಕ ಸ್ವಾಧೀನತೆಯನ್ನು ಕೋರಿ ಈ ದಾವೆಯನ್ನು ದಾಖಲಿಸಿರುತ್ತಾರೆ. ಪ್ರತಿವಾದಿ ಸಂಖ್ಯೆ: 3, 4, 10 ರಿಂದ 16 ಮತ್ತು 17 ರವರಿಗೆ ನ್ಯಾಯಾಲಯದಿಂದ ಆರ್.ಪಿ.ಎ.ಡಿ ಮೂಲಕ ಸಮನ್ಸ್/ನೋಟೀಸು ಕಳುಹಿಸಿದ್ದರೂ ಸಹ ಪ್ರತಿವಾದಿ ಪ್ರತಿವಾದಿ ಸಂಖ್ಯೆ: 3, 4, 10 ರಿಂದ 16 ಮತ್ತು 17 ರವರುಗಳು ಸದರಿ ನೋಟೀಸನ್ನು ಪಡೆದುಕೊಂಡಿರುವುದಿಲ್ಲ. ಈ ಪ್ರಕರಣದ ಸುನಾವಣಾ ದಿನಾಂಕ 22/11/2025 ಬೆಳಿಗ್ಗೆ 11.00 ಗಂಟೆಗೆ ನಿಗದಿಪಡಿಸಲಾಗಿದೆ. ಆದುದರಿಂದ, ಪ್ರತಿವಾದಿ ಸಂಖ್ಯೆ: 3, 4, 10 ರಿಂದ 16 ಮತ್ತು 17 ರವರುಗಳು ನ್ಯಾಯಾಲಯದಲ್ಲಿ ಖುದ್ದಾಗಿ ಅಥವಾ ತಮ್ಮ ಪರವಾಗಿ ವಕೀಲರ ಮೂಲಕ ಬೆಳಿಗ್ಗೆ 11.00 ಗಂಟೆಗೆ ನ್ಯಾಯಾಲಯದಲ್ಲಿ ಹಾಜರಾಗತಕ್ಕದ್ದು, ಹಾಜರಾಗಲು ವಿಫಲರಾದಲ್ಲಿ ಏಕಪಕ್ಷೀಯವಾಗಿ ಪ್ರಕರಣವನ್ನು ಇತ್ಯರ್ಥ ಪಡಿಸಲಾಗುವುದು ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ,
ದಿನಾಂಕ : 27/10/2025, ಸ್ಥಳ: ಮೈಸೂರು

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/– **ಶಿರಸ್ತೇದಾರರು**
ನಾಲ್ಕನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು

ಅರ್ಜಿದಾರರ ಪರ ವಕೀಲರು
ಸಹಿ/– **ಎನ್.ಎನ್.ದೀಪಕ್**, ವಕೀಲರು, ನಂ. 48, 1ನೇ ಮಹಡಿ, 2ನೇ ಕ್ರಾಸ್, 2ನೇ ಮುಖ್ಯರಸ್ತೆ, ಜಯನಗರ, ಮೈಸೂರು. ಮೊಬೈಲ್: 8197989209

ಸಾರ್ವಜನಿಕ ನೋಟಿಸ್

ನಮ್ಮ ಕಕ್ಷಿಗಾರರಾದ ಬೆಂಗಳೂರು ಸಿಟಿ, ಶಿವಾಜಿ ನಗರ, ಬೌರಿಂಗ್ ಹಾಸ್ಪೆಟಲ್ ರಸ್ತೆ, 2ನೇ ಫ್ಲೋರ್, ಮನೆ ನಂ; 56 ರಲ್ಲಿರುವ ಸುಭಾನ್ ಶರೀಫ್ ರವರ ಮಗ ಕಲಿಲುಲ್ಲಾ ಶರೀಫ್ ರವರು ಗುಂಡ್ಲುಪೇಟೆ ತಾಲ್ಲೂಕು, ಕಸಬಾ ಹೋಬಳಿ, ಕೂತನೂರು ಗ್ರಾಮಕ್ಕೆ ಸೇರಿದ ಸರ್ವೇ ನಂ; 487/10 ಉಳ್ಳ, 0–38 ಗುಂಟೆ, ಸರ್ವೆ ನಂ; 487/3 ಉಳ್ಳ, 0–38 ಗುಂಟೆ ಜಮೀನುಗಳನ್ನು ಜಮೀನಿನ ಮಾಲೀಕರಾದ ಚಾಮರಾಜನಗರ ಟೌನ್, ಚಾಮಲ ಸ್ಟ್ರೀಟ್, 2ನೇ ಕ್ರಾಸ್, ಮನೆ ನಂ; 8/261 ರ ವಾಸಿ ಲೇಟ್ ಮಹದೇವಪ್ಪ ಕೆ.ಎಸ್. ರವರ ಮಗ ರಾಜಶೇಖರಮೂರ್ತಿ ಎಂ. ಮತ್ತು ಇವರ ಹೆಂಡತಿ ರೂಪ ಮೂರ್ತಿ ರವರುಗಳಿಂದ ಶುದ್ಧ ಕ್ರಯಕ್ಕೆ ಪಡೆಯುವವರಿರುತ್ತಾರೆ. ಈ ಬಗ್ಗೆ ಯಾರಿಂದಲಾದರು ಅಕ್ಷೇಪಣೆಗಳು ಇದ್ದಲ್ಲಿ ಸದರಿ ಯವರು ತಮ್ಮ ದಾಖಲಾತಿಗಳೊಂದಿಗೆ ನಮ್ಮ ಅಫೀಸಿಗೆ ಅಥವಾ ನಮ್ಮ ಕಕ್ಷಿಗಾರರಿಗೆ ಸೂಕ್ತ ಲಿಖಿತ ತಿಳುವಳಿಕೆ ಕೊಡತಕ್ಕದ್ದು. ತಪ್ಪಿದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ನಮ್ಮ ಕಕ್ಷಿಗಾರರು ಜಮೀನುಗಳನ್ನು ಶುದ್ಧ ಕ್ರಯಕ್ಕೆ ಪಡೆಯುವವರಿರುತ್ತಾರೆ ತಿಳಿಯುವುದು.

ಸಹಿ/– ಜಿ. ರಮೇಶ್, ಬಿ.ಎ.ಸ್ಸಿ. ಎಲ್.ಎಲ್.ಬಿ.
ವಕೀಲರು, ವಿಜಯನಾರಾಯಣಸ್ವಾಮಿ ದೇವಸ್ಥಾನದ ರಸ್ತೆ, ಗುಂಡ್ಲುಪೇಟೆ ಟೌನ್,
ಚಾಮರಾಜನಗರ ಜಿಲ್ಲೆ.
ಮೊಬೈಲ್: 9448602300
ದಿನಾಂಕ: 06–11–2025
ಸ್ಥಳ: ಗುಂಡ್ಲುಪೇಟೆ

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು